
ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಹಿಮಾಚಲದಲ್ಲಿ
20 ವರ್ಷಗಳ ನಂತರ
ಮತ್ತೆ ಸಿಪಿಐ(ಎಂ) ಶಾಸಕ


ರಾಕೇಶ ಸಿಂಗಾ



ಸಂಪುಟ 11 ಸಂಚಿಕೆ 53 | ಡಿಸೆಂಬರ್ 25-31, 2017 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com





ಮಹಾದಾಯಿ : ಬಿಜೆಪಿಯ ಅರ್ಥಹೀನ ಗಿಮಿಕ್



ಗುಜರಾತ್: 2 ಅಂಕಿಗಿಳಿಸಿದ 'ಮೋದಿ ಮ್ಯಾಜಿಕ್'

ದಾನಮ್ಮಳ ಸಾವಿಗೆ ನ್ಯಾಯ ಸಿಗಲಿ



NPA = UPA + NDA



ನೇಪಾಳದಲ್ಲಿ ಕೆಂಬಾವುಟಗಳ ಕಲರವ

ಗುಜರಾತಿನಲ್ಲಿ ಅತಿ ಕಡಿಮೆ ಸೀಟುಗಳೊಂದಿಗೆ ಬಿಜೆಪಿ ಸರಕಾರ, ಬೆಂಬಲ ಕುಸಿತದ ಸೂಚನೆ–ಸಿಪಿಐ(ಎಂ) ಪೊಲಿಟ್‌ಬ್ಯೂರೊ

ಗುಜರಾತ್ ವಿಧಾನಸಭಾ ಚುನಾವಣೆಗಳ ಫಲಿತಾಂಶಗಳಲ್ಲಿ ಬಿಜೆಪಿಗೆ ಸಂಭ್ರಮಪಡುವಂತದ್ದೇನೂ ಇಲ್ಲ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಅಭಿಪ್ರಾಯ ಪಟ್ಟಿದೆ. ಬಿಜೆಪಿ ಬಹುಮತವನ್ನು ಪಡೆದು ಸರಕಾರವನ್ನೇನೋ ರಚಿಸಬಹುದು. ಆದರೆ ಅದು ಪಡೆದಿರುವುದು ಕಳೆದ ಎರಡು ದಶಕಗಳಲ್ಲೇ ಅತಿ ಕಡಿಮೆ ಸೀಟುಗಳು. ಕಳೆದ ಬಾರಿ 115 ಸೀಟುಗಳನ್ನು ಪಡೆದಿದ್ದ ಅದು ಈ ಬಾರಿ ಗಳಿಸಿದ್ದು 99 ಮಾತ್ರ. ಇದು ಬಿಜೆಪಿ ಅಧ್ಯಕ್ಷ ಅಮಿತ್ ಷಾ ಘೋಷಿಸಿದ "ಮಿಶನ್ 150"ದಿಂದ ಒಂದು ದೊಡ್ಡ ಪತನ. ಅಷ್ಟೆ ಅಲ್ಲ, 2014ರ ಲೋಕಸಭಾ ಚುನಾವಣೆಗಳಲ್ಲಿ ಅದು 165 ಅಸೆಂಬ್ಲಿ ಸೀಟುಗಳಲ್ಲಿ ಮುಂದಿತ್ತು ಎಂಬುದನ್ನು ಗಮನಿಸಿದರೆ ಅದರ ಬೆಂಬಲ ಪ್ರಮಾಣ ಎಷ್ಟೊಂದು ಕುಸಿದಿದೆ ಎಂಬುದನ್ನು ಕಾಣಬಹುದು ಎಂದು ಪೊಲಿಟ್‌ಬ್ಯುರೊ ಹೇಳಿದೆ.

ಒಂದು ಪರ್ಯಾಯ ಕಾರ್ಯಕ್ರಮವಿರುವ ವಿಶ್ವಾಸಾರ್ಹ ಪ್ರತಿಪಕ್ಷವಿದ್ದಿದ್ದರೆ ಬಿಜೆಪಿಯ ವಿರುದ್ಧ ಜನಗಳ ಅಸಂತೃಪ್ತಿಯನ್ನು ಕ್ರೋಢೀಕರಿಸಲು ಸಾಧ್ಯವಾಗುತ್ತಿತ್ತು ಎಂದು ಸಿಪಿಐ(ಎಂ) ಹೇಳಿದೆ.

ಹಿಮಾಚಲ ಪ್ರದೇಶದಲ್ಲಿ ಬಿಜೆಪಿ ಸರಾಗವಾಗಿ ಚುನಾವಣೆ ಗೆದ್ದಿದೆ.ಇದು ವೀರಭದ್ರ ಸಿಂಗ್ ಸರಕಾರದ ಭ್ರಷ್ಟ ಆಳ್ವಿಕೆ ಮತ್ತು ದುರಾಡಳಿತದ ವಿರುದ್ಧ ಜನತೆ ನೀಡಿರುವ ತೀರ್ಪು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ವಿಶ್ಲೇಷಿಸಿದೆ.

ಹಿಮಾಚಲ ಪ್ರದೇಶದ ಥಿಯೊಗ್ ಕ್ಷೇತ್ರದಲ್ಲಿ ಸಿಪಿಐ(ಎಂ) ಗೆಲುವು

ಸಿಪಿಐ(ಎಂ) ಒಂದು ಸೀಟು ಪಡೆದು ಇಪ್ಪತ್ತು ವರ್ಷಗಳ ನಂತರ ಹಿಮಾಚಲ ಪ್ರದೇಶ ವಿಧಾನಸಭೆಯಲ್ಲಿ ಪ್ರಾತಿನಿಧ್ಯ ಪಡೆಯುತ್ತಿದೆ. ಅದಕ್ಕಾಗಿ ಈ ವಿಧಾನಸಭಾ ಕ್ಷೇತ್ರದ ಜನತೆಯನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಅಭಿನಂದಿಸಿದೆ. ಎರಡು ಪ್ರಧಾನ ಪಕ್ಷಗಳ ನಡುವೆ ಅತ್ಯಂತ ಧ್ರುವೀಕರಣಗೊಂಡ ಚುನಾವಣೆಗಳಲ್ಲಿ ಸಿಪಿಐ(ಎಂ) ಅಭ್ಯರ್ಥಿ ರಾಕೇಶ್ ಸಿಂಘ ರವರ ವಿಜಯ ಇನ್ನಷ್ಟು ಮಹತ್ವದ್ದು ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಈ ವಿಜಯ ಹಿಮಾಚಲ ಪ್ರದೇಶದ ವಿಧಾನ ಸಭೆಯಲ್ಲಿ ಸಿಪಿಐ(ಎಂ) ತಮ್ಮ ಹಕ್ಕುಗಳ ರಕ್ಷಣೆಗೆ ಮತ್ತು ತಮ್ಮ ಹಿತಾಸಕ್ತಿಗಳಿಂದ ಕೆಲಸ ಮಾಡುತ್ತದೆ ಎಂಬ ಜನತೆಯ ವಿಶ್ವಾಸವನ್ನು ಬಿಂಬಿಸುತ್ತದೆ ಎಂದಿದೆ. ಈ ವಿಜಯಕ್ಕಾಗಿ ಶ್ರಮಿಸಿರುವ ಪಕ್ಷದ ಎಲ್ಲ ಕಾರ್ಯಕರ್ತರಿಗೆ ಮತ್ತು ಬೆಂಬಲಿಗರಿಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಶುಭಾಶಯ ವ್ಯಕ್ತಪಡಿಸಿದೆ.



ಬಿಜೆಪಿಯ ದ್ವೇಷಯಂತ್ರದ ಧ್ವಂಸಕ್ಕೆ ಪರ್ಯಾಯ ಧೋರಣೆಗಳ ವೇದಿಕೆಯ ಮೇಲೆ ಐಕ್ಯ ಪ್ರತಿರೋಧ

– ಸೀತಾರಾಮ್ ಯೆಚುರಿ

ಬಿಜೆಪಿಯ ವಿರುದ್ಧ ಆಳವಾದ ಅಸಂತೃಪ್ತಿ ಇದೆ ಎಂಬುದನ್ನು ಗುಜರಾತ್ ವಿಧಾನಸಭಾ ಚುನಾವಣೆಗಳ ಫಲಿತಾಂಶ ತೋರಿಸುತ್ತಿದೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಹೇಳಿದ್ದಾರೆ. ಬಿಜೆಪಿಯನ್ನು ನಿರ್ಣಾಯಕವಾಗಿ ಸೋಲಿಸಬೇಕಾದರೆ ಜನತೆಯ ಹಿತಕ್ಕಾಗಿ ಕೆಲಸ ಮಾಡುವ ಒಂದು ಪರ್ಯಾಯ ಧೋರಣೆಗಳ ಚೌಕಟ್ಟು ಬೇಕಾಗಿದೆ. ಬಿಜೆಪಿಗೆ ವಿರುದ್ಧವಾದ ಎಲ್ಲ ಶಕ್ತಿಗಳು ಒಂದು ಪರ್ಯಾಯ ಧೋರಣೆಗಳ ವೇದಿಕೆಯ ಮೇಲೆ ಸಾಧ್ಯವಾದಷ್ಟು ವಿಶಾಲವಾದ ರೀತಿಯಲ್ಲಿ ಒಟ್ಟುಗೂಡಿ ಕೊನೆಗೂ ಬಿಜೆಪಿಯನ್ನು ಸೋಲಿಸುತ್ತವೆ ಮತ್ತು ಅದರ ದ್ವೇಷ ಯಂತ್ರವನ್ನು ಧ್ವಂಸ ಮಾಡುತ್ತವೆ ಎಂದು ಯೆಚುರಿ ಹೇಳಿದ್ದಾರೆ.

2ಜಿ ತೀರ್ಪು–ಉತ್ತರಗಳಿಗಿಂತ ಪ್ರಶ್ನೆಗಳೇ ಹೆಚ್ಚು : ಸಿಪಿಐ(ಎಂ) ಪೊಲಿಟ್‌ಬ್ಯುರೊ

2 ಜಿ ತರಂಗಾಂತರ ಕೇಸಿನಲ್ಲಿ ಸಿಬಿಐ ವಿಶೇಷ ನ್ಯಾಯಾಲಯದ ತೀರ್ಪು ಉತ್ತರಿಸಿರುವುದಕ್ಕಿಂತ ಹೆಚ್ಚಿನ ಪ್ರಶ್ನೆಗಳನ್ನು ಎತ್ತಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಅಭಿಪ್ರಾಯ ಪಟ್ಟಿದೆ. 2ಜಿ ತರಂಗಾಂತರ ಹಂಚಿಕೆಯಲ್ಲಿ ದೊಡ್ಡ ನಷ್ಟವಾಗಿದೆ ಎಂಬುದು ಚೆನ್ನಾಗಿ ಸ್ಥಾಪಿತಗೊಂಡಿರುವ ಸಂಗತಿ. ಮಹಾ ಲೆಕ್ಕ ಪರಿಶೋಧಕರ ಕಚೇರಿ(ಸಿಎಜಿ) ಈ ನಷ್ಟ 1,76,000 ಕೋಟಿ ರೂ. ಎಂದು ಲೆಕ್ಕ ಹಾಕಿದೆ. ಸುಪ್ರಿಂ ಕೋರ್ಟ್ ಕೆಲವು ಟೆಲಿಕಾಂ ಕಂಪನಿಗಳು ತಮಗೆ ನೀಡಿದ ತರಂಗಾಂತರಗಳ ದುರ್ಬಳಕೆ ಮಾಡಿವೆ ಎಂದು ತೀರ್ಪಿತ್ತು ಸಂಬಂಧಪಟ್ಟ ಕಂಪನಿಗಳ ಲೈಸೆನ್ಸ್ ಗಳನ್ನೂ ರದ್ದು ಮಾಡಿತ್ತು ಎಂದು ಸಿಪಿಐ(ಎಂ) ನೆನಪಿಸಿದೆ.

ಸಿಬಿಐನ ಮೊಕದ್ದಮೆ ಮತ್ತು ಫಿರ್ಯಾದು ಅಸಮರ್ಪಕ ಎಂದು ಸಾಬೀತಾಗಿರುವುದರಿಂದ ತಕ್ಷಣವೇ ಈ ವಿಷಯವನ್ನು ಕಾನೂನಾತ್ಮಕವಾಗಿ ಮುಂದುವರೆಸಲು ಅಗತ್ಯಕ್ರಮಗಳನ್ನು ತೆಗೆದುಕೊಳ್ಳಬೇಕು, ಈ ಮೂಲಕ ತಪ್ಪಿತಸ್ಥರನ್ನು ಶಿಕ್ಷಿಸುವಂತಾಗಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ತ್ರಿವಳಿ ತಲಾಖಿನ ಅಪರಾಧೀಕರಣ:ತರಾತುರಿ ಸಲ್ಲದು, ಸ್ಥಾಯೀ ಸಮಿತಿ ಪರಿಶೀಲಿಸಲಿ–ಎಐಡಿಡಬ್ಲ್ಯುಎ

ಕೇಂದ್ರ ಸಂಪುಟ ತ್ರಿವಳಿ ತಲಾಖ್ ಹೇಳುವುದನ್ನು ಒಂದು ಕ್ರಿಮಿನಲ್ ಅಪರಾಧ ಎಂದು ಮಾಡುವುದು ಮತ್ತು ಇತರ ಅಂಶಗಳಿರುವ ಒಂದು ಮಸೂದೆಗೆ ಮಂಜೂರಾತಿ ನೀಡಿದೆ ಎಂದು ವರದಿಯಾಗಿದೆ. ಈ ಕುರಿತು ಯಾವುದೇ ಸಾರ್ವಜನಿಕ ಚರ್ಚೆ ನಡೆಸದೆ, ಮಹಿಳಾ ಸಂಘಟನೆಗಳು ಮತ್ತು ಮುಸ್ಲಿಮ್ ಮಹಿಳೆಯರ ಸಮಸ್ಯೆಗಳ ಮೇಲೆ ಕೆಲಸ ಮಾಡುವ ಗುಂಪುಗಳೊಂದಿಗೆ ಸಮಾಲೋಚನೆ ನಡೆಸದೆ, ಸರಕಾರ ತರಾತುರಿಯಲ್ಲಿ ಸಂಸತ್ತಿನಲ್ಲಿ ಪ್ರಜಾಪ್ರಭುತ್ವ–ವಿರೋಧಿ ರೀತಿಯಲ್ಲಿ ಪಾಸು ಮಾಡಿಕೊಳ್ಳ ಹೊರಟಿದೆ ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘ(ಎಐಡಿಡಬ್ಲ್ಯುಎ) ಖಂಡಿಸಿದೆ.

ತ್ರಿವಳಿ ತಲಾಖ್ ಹೇಳುವುದನ್ನು ಅಪರಾಧೀಕರಿಸುವುದಕ್ಕೆ ತನ್ನ ವಿರೋಧವಿದೆ ಎಂದು ಎಐಡಿಡಬ್ಲ್ಯುಎ ಹೇಳಿದೆ. ತ್ರಿವಳಿ ತಲಾಖ್ ಅನ್ನು ಅಸಿಂಧುಗೊಳಿಸಬೇಕು ಎಂದು ಆಗ್ರಹಿಸಿದ ಹೋರಾಟದಲ್ಲಿ ಎಐಡಿಡಬ್ಲ್ಯುಎ ಮುಂಚೂಣಿಯಲ್ಲಿತ್ತು. ಅದನ್ನೀಗ ಅಸಿಂಧುಗೊಳಿಸಲಾಗಿದೆ. ಆದರೆ ಅದನ್ನು ಕ್ರಿಮಿನಲ್ ಅಪರಾಧ ಎಂದು ಘೋಷಿಸುವುದರ ಪರಿಣಾಮಗಳನ್ನು ಪರಿಶೀಲಿಸಬೇಕು ಮತ್ತು ಮಹಿಳೆಯರ ಸ್ಥಾನವನ್ನು ಬಲಪಡಿಸಬೇಕು. ಆಕೆಯ ಹಕ್ಕನ್ನು ರಕ್ಷಿಸಬೇಕು. ಮಹಿಳೆಯ ಕಲ್ಯಾಣವನ್ನು ಖಾತ್ರಿಪಡಿಸಬೇಕು ಎಂದು ಎಐಡಿಡಬ್ಲ್ಯುಎ ಹೇಳಿದೆ.

ಆದ್ದರಿಂದ ಇದನ್ನು ಕೂಡಲೇ ಸಂಸತ್ತಿನ ಸ್ಥಾಯೀ ಸಮಿತಿಗೆ ಕಳಿಸಬೇಕು, ಈ ಮೂಲಕ ಸಂಬಂಧಪಟ್ಟ ಎಲ್ಲರೂ ಸಮಿತಿಗೆ ತಮ್ಮ ಸಲಹೆ–ಸೂಚನೆಗಳನ್ನು ಕೊಡಲು ಸಾಧ್ಯವಾಗಬೇಕು ಎಂದು ಎಐಡಿಡಬ್ಲ್ಯುಎ ಆಗ್ರಹಿಸಿದೆ. ಸರಕಾರ ಇದರಲ್ಲಿ ಪಾರದರ್ಶಕವಾಗಿರಬೇಕು, ಪ್ರಜಾಪ್ರಭುತ್ವದ ಅಗತ್ಯ ಪ್ರಕ್ರಿಯೆಗಳನ್ನು ಅನುಸರಿಸಬೇಕು, ಇಂತಹ ಚರ್ಚೆಗಳಿಲ್ಲದೆ ಪಾಸು ಮಾಡಬಾರದು ಎಂದು ಎಐಡಿಡಬ್ಲ್ಯುಎ ಹೇಳಿದೆ.

ಜನವರಿ 3 ರಂದು ಮಹಿಳಾ ಶಿಕ್ಷಣ ದಿನಾಚರಣೆ: ಡಿಎಸ್‌ಎಂಎಂ ನಿರ್ಧಾರ

ಜನವರಿ 3 ಕ್ರಾಂತಿಜ್ಯೋತಿ ಸಾವಿತ್ರಿಬಾಯಿ ಫುಲೆಯವರ ಜನ್ಮದಿನ. ಅದನ್ನು 'ಮಹಿಳಾ ಶಿಕ್ಷಣ ದಿನ'ವಾಗಿ ಆಚರಿಸಬೇಕು ಎಂದು ದಲಿತ ಶೋಷಣ ಮುಕ್ತಿ ಮಂಚ್(ಡಿಎಸ್‌ಎಂಎಂ) ನಿರ್ಧರಿಸಿದೆ.

ಸಾವಿತ್ರಿಬಾಯಿಯವರು ಜನವರಿ 3, 1831ರಂದು ಜನಿಸಿದರು. ಆಗಿನ ಪದ್ಧತಿಯಂತೆ ಕೇವಲ 9 ವರ್ಷವದವಳಾಗಿದ್ದಾಗಲೇ ಜ್ಯೋತಿಬಾರೊಂದಿಗೆ ಆಕೆಯ ವಿವಾಹವಾಯಿತು. ಜ್ಯೋತಿಬಾಗೆ ಕೂಡ ಆಗ ಕೇವಲ 13 ವರ್ಷ. ಆದರೂ ಜ್ಯೋತಿಬಾ ಪ್ರೋತ್ಸಾಹದಿಂದ ಸಾವಿತ್ರಿ ಶಾಲೆಗೆ ಹೋದರು, ನಂತರ ಶಿಕ್ಷಕಿಯಾಗಿ ತರಬೇತಿ ಪಡೆದರು. ಮೊದಲ ಭಾರತೀಯ ಮಹಿಳಾ ಮುಖ್ಯೋಪಾಧ್ಯಾಯರೂ ಆದರು. ಮುಂದೆ ಶಿಕ್ಷಣವೇತ್ತರಾಗಿ ಹಲವು ಶಾಲೆಗಳನ್ನು, ವಿಶೇಷವಾಗಿ ಮಹಾರ್ ಮತ್ತು ಮಾಂಗ್ ದಲಿತ ಜಾತಿಗಳ ಹೆಣ್ಣುಮಕ್ಕಳಿಗಾಗಿ ನಡೆಸಿದರು. ಹೆಣ್ಣುಮಕ್ಕಳು ಮತ್ತು ದಲಿತರಿಗೆ ಶಿಕ್ಷಣ ಕೊಡುವ ಧೈರ್ಯ ಮಾಡಿದ್ದಕ್ಕಾಗಿ ಆಕೆ ಮೇಲ್ಜಾತಿಗಳಿಂದ ವಿಪರೀತ ಕಿರುಕುಳಗಳನ್ನು ಎದುರಿಸಬೇಕಾಯಿತು. ಇವ್ಯಾವ ಬೆದರಿಕೆ, ಕಿರುಕುಳಗಳಿಂದಲೂ ಧೃತಿಗೆಡದೆ ಆಕೆ ತನ್ನ ಗುರಿಸಾಧನೆಯಲ್ಲಿ ತೊಡಗಿದರು.

ಸಾವಿತ್ರಿಬಾಯಿ ಅತ್ಯಂತ ಧೈರ್ಯಶೀಲೆಯಾಗಿದ್ದು ಶಿಕ್ಷಣ ಪ್ರಸಾರದ ತನ್ನ ಕೆಲಸಕ್ಕೆ ಬದ್ಧರಾಗಿದ್ದರು ಎಂದು ನೆನಪಿಸಿಕೊಂಡಿರುವ ಡಿಎಸ್‌ಎಂಎಂ ವಿಚಾರಸಂಕಿರಣಗಳು, ದುಂಡು ಮೇಜಿನ ಸಭೆಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು ಇತ್ಯಾದಿಗಳ ಮೂಲಕ ಜನವರಿ 3 ರಂದು ಅವರ ಜನ್ಮದಿನಾಚರಣೆ ನಡೆಸುವುದಾಗಿ ಹೇಳಿದೆ. ಜನಗಳು ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಅವನ್ನು ಅತ್ಯಂತ ಯಶಸ್ವಿಗೊಳಿಸಬೇಕು ಎಂದು ಅದು ಕರೆ ನೀಡಿದೆ.

ಜನವರಿ 24: ಎಫ್‌ಆರ್‌ಡಿಐ ಮಸೂದೆ, ಶೇರು ಮಾರಾಟದ ವಿರುದ್ಧ ಬ್ಯಾಂಕ್ ನೌಕರರ ದೇಶವ್ಯಾಪಿ ಧರಣಿ–ಪ್ರಚಾರಾಂದೋಲನ

ಡಿಸೆಂಬರ್ 17ರಂದು ಚೆನ್ನೈನಲ್ಲಿ ಸಭೆ ಸೇರಿದ ಭಾರತದ ಬ್ಯಾಂಕ್ ನೌಕರರ ಒಕ್ಕೂಟ (ಬಿಇಎಫ್‌ಐ)ದ ಮುಖಂಡತ್ವ ಕರಾಳ ಎಫ್‌ಆರ್‌ಡಿಐ ಮಸೂದೆಯನ್ನು ಸೋಲಿಸಲು ಮತ್ತು ಠೇವಣಿದಾರರ ಹಿತಗಳ ರಕ್ಷಣೆಗೆ ಒಂದು ಪ್ರತಿಭಟನಾ ಕಾರ್ಯಕ್ರಮವನ್ನು ರೂಪಿಸಿದೆ.

ಈಗಾಗಲೇ ಬ್ಯಾಂಕ್ ಸಂಘಗಳ ಸಂಯುಕ್ತ ವೇದಿಕೆ(ಯುಎಫ್‌ಬಿಯು) ಆರಂಭಿಸಿರುವ ಈ ಮಸೂದೆಯ ವಿರುದ್ಧ ಸಹಿಸಂಗ್ರಹದ ಚಳುವಳಿಯಲ್ಲಿ ಕೋಟ್ಯಂತರ ಸಾರ್ವಜನಿಕರ ಸಹಿ ಸಂಗ್ರಹ ನಡೆಸಬೇಕು ಎಂದು ಬಿಇಎಫ್‌ಐ ತನ್ನ ಎಲ್ಲ ಘಟಕಗಳಿಗೆ ಕರೆ ನೀಡಿದೆ. ಈ ಸಹಿಗಳನ್ನು ಸಂಸತ್ತಿನ ಬಜೆಟ್ ಅಧಿವೇಶನದ ವೇಳೆಯಲ್ಲಿ ಲೋಕಸಭಾಧ್ಯಕ್ಷರಿಗೆ ಸಲ್ಲಿಸಲಾಗುವುದು.

ಎಫ್‌ಆರ್‌ಡಿಐ ಮಸೂದೆಯನ್ನು ರದ್ದು ಮಾಡಬೇಕು, ಸಾರ್ವಜನಿಕ ವಲಯದ ಬ್ಯಾಂಕುಗಳ ವಿಲೀನವೆಂಬ ಸರಿಯಾಗಿ ಯೋಚಿಸದ ವಿಚಾರವನ್ನು ಕೈಬಿಡಬೇಕು, ಸರಕಾರ ಬ್ಯಾಂಕಿಂಗ್ ಸುಧಾರಣೆಗಳ ಹೆಸರಲ್ಲಿ ತರುತ್ತಿರುವ ಕ್ರಮಗಳನ್ನು ನಿಲ್ಲಿಸಬೇಕು ಎಂದು ಆಗ್ರಹಿಸಿ ದೇಶವ್ಯಾಪಿ ಪ್ರಚಾರಾಂದೋಲನವನ್ನು ನಡೆಸಿ ಅದರ ಕೊನೆಯಲ್ಲಿ ಜನವರಿ 24ರಂದು ಎಲ್ಲ ರಾಜ್ಯಗಳ ರಾಜಧಾನಿಗಳಲ್ಲಿ ಮತ್ತು ಪ್ರಮುಖ ಜಿಲ್ಲಾ ಕೇಂದ್ರಗಳಲ್ಲಿ ದಿನವಿಡೀ ಧರಣಿ ನಡೆಸಲು ಬಿಇಎಫ್‌ಐ ನಿರ್ಧರಿಸಿದೆ.

ಭಾರತೀಯ ಉದ್ದಿಮೆಗಳ ಮಹಾಒಕ್ಕೂಟ(ಸಿಐಐ) ಸಾರ್ವಜನಿಕ ವಲಯದ ಬ್ಯಾಂಕುಗಳಲ್ಲಿ ಸರಕಾರದ ಪಾಲುದಾರಿಕೆಯನ್ನು 51%ದಿಂದ 30% ಕ್ಕೆ ಇಳಿಸಬೇಕೆಂದು ಹೇಳಿಕೆ ನೀಡಿರುವುದನ್ನು ಬಿಇಎಫ್‌ಐ ಬಲವಾಗಿ ಖಂಡಿಸಿದೆ. ಬ್ಯಾಂಕುಗಳ ರಾಷ್ಟ್ರೀಕರಣದ ನಂತರ ಕಳೆದ 50ವರ್ಷಗಳಲ್ಲಿ ಆದ್ಯತಾ ವಲಯಗಳ ಸಾಲ ಇತ್ಯಾದಿಗಳ ಮೂಲಕ ಜನಸಾಮಾನ್ಯರ ಜೀವನ ಮಟ್ಟವನ್ನು ಎತ್ತರಿಸುವಲ್ಲಿ ನೆರವಾಗಿವೆ ಎಂದು ನೆನಪಿಸುತ್ತ,, ಇದನ್ನು ಇಲ್ಲದಂತೆ ಮಾಡುವ ಈ ಸಲಹೆಯ ವಿರುದ್ಧ ದೇಶಾದ್ಯಂತ ಸಿಐಐ ಕಚೇರಿಗಳ ಮುಂದೆ ತಮ್ಮ ಪದಾಧಿಕಾರಿಗಳು ಮತಪ್ರದರ್ಶನ ನಡೆಸಲು ನಿರ್ಧರಿಸಲಾಗಿದೆ ಎಂದು ಬಿಇಎಫ್‌ಐ ಹೇಳಿಕೆ ತಿಳಿಸಿದೆ.

ಜನವರಿ 17: ಒಂದು ಕೋಟಿಗೂ ಹೆಚ್ಚು ಸ್ಕೀಮ್ ನೌಕರರ ದೇಶವ್ಯಾಪಿ ಮುಷ್ಕರ

ಕೇಂದ್ರ ಸರಕಾರದ ಕಾರ್ಮಿಕ–ವಿರೋಧಿ ಧೋರಣೆಗಳ ವಿರುದ್ಧ ದನಿ ಎತ್ತಿರುವ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಜನವರಿ 17, 2018ರಂದು ವಿವಿಧ ಸರಕಾರೀ ಸ್ಕೀಮುಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರ ಒಂದು ದಿನದ ಅಖಿಲ ಭಾರತ ಮುಷ್ಕರಕ್ಕೆ ಕರೆ ನೀಡಿವೆ.

ಕೇಂದ್ರ ಮತ್ತು ರಾಜ್ಯ ಸರಕಾರಗಳ ಸ್ಕೀಮುಗಳಲ್ಲಿ ಒಂದು ಕೋಟಿಗೂ ಹೆಚ್ಚು ಮಂದಿ ಕೆಲಸ ಮಾಡುತ್ತಿದ್ದಾರೆ. ಇವುಗಳಲ್ಲಿ 27ಲಕ್ಷ ಮಂದಿ ಐಸಿಡಿಎಸ್‌ನ ಅಡಿಯಲ್ಲಿ ಅಂಗನವಾಡಿಗಳು, ಮಿನಿ ಅಂಗನವಾಡಿಗಳಲ್ಲಿ ಕಾರ್ಯಕರ್ತೆಯರಾಗಿ, ಸಹಾಯಕಿಯರಾಗಿ ಕೆಲಸ ಮಾಡುತ್ತಿದ್ದಾರೆ. ಸುಮಾರು 28 ಲಕ್ಷ ಮಂದಿ ಮಧ್ಯಾಹ್ನದ ಊಟ ಕಾರ್ಯಕ್ರಮಗಳಲ್ಲಿ, ಮತ್ತು ಸುಮಾರು 10 ಲಕ್ಷ ಮಂದಿ ರಾಷ್ಟ್ರೀಯ ಆರೋಗ್ಯ ಮಿಶನ್‌ನಲ್ಲಿ 'ಆಶ' ನೌಕರರಾಗಿ ದುಡಿಯುತ್ತಿದ್ದಾರೆ. ಅಲ್ಲದೆ ರಾಷ್ಟ್ರೀಯ ಗ್ರಾಮಿಣ ಜೀವನಾಧಾರ ಮಿಶನ್, ರಾಷ್ಟ್ರೀಯ ಬಾಲ ಕಾರ್ಮಿಕ ಯೋಜನೆ, ಸರ್ವ ಶಿಕ್ಷಾ ಅಭಿಯಾನ್ ಮತ್ತು ಸಣ್ಣ ಉಳಿತಾಯ ಯೋಜನೆಯಲ್ಲೂ ಲಕ್ಷಾಂತರ ಮಂದಿ ದುಡಿಯುತ್ತಿದ್ದಾರೆ.

ಈ ನೌಕರರು ದೇಶಾದ್ಯಂತ ಅಂದು ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಮತಪ್ರದರ್ಶನ ನಡೆಸುತ್ತಾರೆ. ಇತರೆಡೆಗಳಲ್ಲಿ ಕೇಂದ್ರ ಮಂತ್ರಿಗಳ ಕಚೇರಿಗಳ ಮುಂದೆ ಪ್ರತಿಭಟಿಸುತ್ತಾರೆ ಎಂದು ಅಖಿಲ ಭಾರತ ಅಂಗನವಾಡಿ ಕಾರ್ಮಿಕರು ಮತ್ತು ಸಹಾಯಕಿಯರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಎ.ಆರ್.ಸಿಂಧು ಹೇಳಿದ್ದಾರೆ.

ಎಲ್ಲ ಸ್ಕೀಮ್ ನೌಕರರನ್ನು ಈಗಾಗಲೇ ಭಾರತೀಯ ಕಾರ್ಮಿಕ ಸಮ್ಮೇಳನ(ಐಎಲ್‌ಸಿ)ದ 45ನೇ ಅಧಿವೇಶನ ಶಿಫಾರಸು ಮಾಡಿದಂತೆ ನಿಯಮಿತ ನೌಕರರಾಗಿ ಪರಿಗಣಿಸಿ ತಿಂಗಳಿಗೆ 18,000 ರೂ. ಗೆ ಕಡಿಮೆಯಿಲ್ಲದಂತೆ ಕನಿಷ್ಟ ಕೂಲಿ ಮತ್ತು 3000ರೂ. ಗಿಂತ ಕಡಿಮೆಯಿಲ್ಲದಂತೆ ಪೆನ್ಶನ್ ಮತ್ತಿತರ ಸಾಮಾಜಿಕ ಭದ್ರತೆಗಳನ್ನು ಒದಗಿಸಬೇಕು, 2018–19ರ ಬಜೆಟಿನಲ್ಲಿ ಈ ಎಲ್ಲ ಯೋಜನೆಗಳಿಗೆ ಸಾಕಷ್ಟು ಹಣ ಒದಗಿಸಬೇಕು, ಈ ಯೋಜನೆಗಳನ್ನು ಖಾಸಗೀಕರಿಸುವುದಾಗಲೀ, ನಗದು ವರ್ಗಾವಣೆ ಇತ್ಯಾದಿಗಳ ಮೂಲಕ ಮೊಟಕುಗೊಳಿಸುವುದಾಗಲೀ ಮಾಡಬಾರದು ಎಂಬುದು ಈ ಮುಷ್ಕರದ ಪ್ರಧಾನ ಬೇಡಿಕೆಗಳು.

ಸಂಪಾದಕೀಯ

ಮಹಾದಾಯಿ: ಬಿಜೆಪಿಯ ಅರ್ಥಹೀನ ಗಿಮಿಕ್

ಮಹದಾಯಿ ವಿವಾದವನ್ನು ನ್ಯಾಯಮಂಡಳಿ ಹೊರಗೆ, ಸರ್ವಸಮ್ಮತ ಒಪ್ಪಿಗೆ ಮೂಲಕ ಬಗೆಹರಿಸಿಕೊಳ್ಳಲು ಗೋವಾ ಸರ್ಕಾರ ಸಿದ್ಧವಿದೆ' ಎಂದು ಅಲ್ಲಿನ ಮುಖ್ಯಮಂತ್ರಿ ಮನೋಹರ ಪರಿಕ್ಕರ್ ಅವರು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ಎಸ್. ಯಡಿಯೂರಪ್ಪ ಪತ್ರ ಬರೆದಿದ್ದಾರೆ. ಡಿಸೆಂಬರ್ 21ರಂದು ಹುಬ್ಬಳ್ಳಿಯಲ್ಲಿನ ಬಿಜೆಪಿ ಪರಿವರ್ತನಾ ಯಾತ್ರೆಯ ಸಾರ್ವಜನಿಕ ಸಭೆಯಲ್ಲಿ ಯಡಿಯೂರಪ್ಪ ಅವರು ಪರಿಕ್ಕರ್ ಪತ್ರವನ್ನು ಓದಿ ಹೇಳಿದರು. 'ಬರಪೀಡಿತ ಪ್ರದೇಶಗಳ ಕುಡಿಯುವ ನೀರಿನ ಅವಶ್ಯಕತೆಗೆ ಅನುಗುಣವಾಗಿ ನ್ಯಾಯೋಚಿತವಾಗಿ ದೊರೆಯಬೇಕಿರುವ ನೀರು ಪಡೆದುಕೊಳ್ಳಲು ನಮ್ಮ ತಕರಾರಿಲ್ಲ. ಮಹದಾಯಿ ನ್ಯಾಯಮಂಡಳಿ ಸಲಹೆ ಪ್ರಕಾರ ದ್ವಿಪಕ್ಷೀಯ ಮಾತುಕತೆ ಮೂಲಕ ವಿವಾದ ಬಗೆಹರಿಯಬೇಕು ಎಂದು ಪರಿಕ್ಕರ್ ಪತ್ರದಲ್ಲಿ ತಿಳಿಸಿದ್ದಾರೆ' ಎಂದು ಯಡಿಯೂರಪ್ಪ ತಿಳಿಸಿದರು. 'ಈ ಬಗ್ಗೆ ಯಾರೂ ಸಂಶಯ ಇಟ್ಟುಕೊಳ್ಳಬೇಡಿ. ಚಿಂತೆ ಮಾಡಬೇಡಿ. ಗೋವಾ ರಾಜ್ಯದ ಮುಖ್ಯಮಂತ್ರಿಗಳೇ ಲಿಖಿತ ಪತ್ರವನ್ನು ಕಳಿಸಿದ್ದಾರೆ. ಹಾಗಾಗಿ, ಯೋಜನೆ ಕಾರ್ಯಗತದ ಬಗ್ಗೆ ಅನುಮಾನ ಬೇಡ. ಮಹದಾಯಿ ನೀರನ್ನು ಹರಿಸುವುದು ನನ್ನ, ಜಗದೀಶ ಶೆಟ್ಟರ್ ಹಾಗೂ ಪ್ರಹ್ಲಾದ ಜೋಶಿ ಅವರ ಜವಾಬ್ದಾರಿ.' ಎಂದೂ ಹೇಳಿದರು.

ಮಹದಾಯಿ ನದಿ ಮತ್ತು ಅದರ ಉಪನದಿಗಳಾದ ಕಳಸಾ, ಬಂಡೂರಿ, ಹಳತಾರ ಹೀಗೆ ಹಲವಾರು ಹಳ್ಳಗಳು ಪಶ್ಚಿಮ ಘಟ್ಟದಲ್ಲಿ ಕರ್ನಾಟಕದ ಖಾನಾಪೂರದಲ್ಲಿ ಉಗಮವಾಗಿವೆ. ಪಶ್ಚಿಮಾಭಿಮುಖವಾಗಿ 29 ಕಿ.ಮಿ. ನಷ್ಟು ಕರ್ನಾಟಕದಲ್ಲಿ ಹಾಗೂ ಸುಮಾರು 50 ಕಿ.ಮಿ. ನಷ್ಟು ಗೋವಾ ರಾಜ್ಯದಲ್ಲಿ ಹರಿದು ಅರಬ್ಬಿ ಸಮುದ್ರವನ್ನು ಸೇರುತ್ತವೆ. ಮಹದಾಯಿ ನದಿ ಒಟ್ಟು ಜಲಾನಯನ ಪ್ರದೇಶ 2032 ಚ.ಕಿ.ಮಿ. ಅದರಲ್ಲಿ ಕರ್ನಾಟಕದ ಪಾಲು 375 ಚ.ಕಿ.ಮಿ. 77 ಚ.ಕಿ.ಮಿ. ಮಹಾರಾಷ್ಟ್ರ ರಾಜ್ಯದಲ್ಲಿದೆ. ಉಳಿದದ್ದು ಗೋವಾ ರಾಜ್ಯದಲ್ಲಿದೆ. ಕೇಂದ್ರ ಜಲ ಆಯೋಗದ(ಸಿಡಬ್ಲೂಸಿ) ಸಮೀಕ್ಷೆಯ ಪ್ರಕಾರ 200 ರಿಂದ 210 ಟಿಎಮ್ಸಿ ನೀರಿನ ಲಭ್ಯತೆ ಇದೆ. ಇದರಲ್ಲಿ ಕರ್ನಾಟಕದ ಪಾಲು 45 ಟಿಎಂಸಿ ಅಷ್ಟು. ಈ ನದಿಗೆ ಗೋವಾದಲ್ಲಿ ಯಾವುದೇ ಯೋಜನೆಯನ್ನು ಹಾಕಿಕೊಂಡಿಲ್ಲ.

ಈ ಪಾಲಿನಲ್ಲಿ ಕಳಸಾ–ಬಂಡೂರಿ ನಾಲೆಗಳಿಂದ ವಾರ್ಷಿಕ 7.56 ಟಿಎಂಸಿ ಅಡಿ ನೀರನ್ನು ಮಲಪ್ರಭಾ ನದಿಗೆ ಹರಿಸುವ ಯೋಜನೆಯನ್ನು ರಾಜ್ಯ ಸರ್ಕಾರ ಈಗಾಗಲೇ ಆರಂಭಿಸಿದೆ. ಯೋಜನೆಗೆ ಅಡ್ಡಿಪಡಿಸಿರುವ ಗೋವಾ, ಸಂಧಾನದ ಮೂಲಕ ವಿವಾದ ಬಗೆಹರಿಸಿಕೊಳ್ಳುವಂತೆ ಮಹದಾಯಿ ಜಲವಿವಾದ ನ್ಯಾಯಮಂಡಳಿ ನೀಡಿರುವ ಸಲಹೆಯನ್ನೂ ತಿರಸ್ಕರಿಸಿದೆ. ಮುಂಬೈ ಕರ್ನಾಟಕ ಭಾಗದ ಧಾರವಾಡ, ಗದಗ, ಬೆಳಗಾವಿ ಮತ್ತು ಬಾಗಲಕೋಟೆ ಜಿಲ್ಲೆಗಳ ಜನರು ಎದುರಿಸುತ್ತಿರುವ ಕುಡಿಯುವ ನೀರಿನ ಬವಣೆಯನ್ನು ನೀಗಿಸುವ ನಿಟ್ಟಿನಲ್ಲಿ ಯೋಜನೆಗೆ ಗೋವಾ ಸರ್ಕಾರದ ಒಪ್ಪಿಗೆ ಅಗತ್ಯವಾಗಿದೆ. ಇದು ಸಮಸ್ಯೆಯ ಮೂಲ.

ಸಂಧಾನ ಸೂತ್ರದ ಮೂಲಕ ಮಹದಾಯಿ ಜಲವಿವಾದ ಬಗೆಹರಿಸುವ ನಿಟ್ಟಿನಲ್ಲಿ ಗೋವಾ ಸರ್ಕಾರದ ಮನವೊಲಿಸುವಂತೆ ಬಿಜೆಪಿ ರಾಜ್ಯ ಘಟಕವು ಪಕ್ಷದ ವರಿಷ್ಠರ ನೇತೃತ್ವದಲ್ಲಿ ದೆಹಲಿಯಲ್ಲಿ ಡಿಸೆಂಬರ್ 20ರಂದು ನಡೆದ ಸಭೆಯಲ್ಲಿ ಚರ್ಚಿಸಿತ್ತು. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಅಮಿತ್ ಷಾ ನೇತೃತ್ವದಲ್ಲಿ ನಡೆದ ಸಭೆಯಲ್ಲಿ, ಗೋವಾ ಮುಖ್ಯಮಂತ್ರಿ ಮನೋಹರ ಪರಿಕ್ಕರ್ ಸಹ ಹಾಜರಿದ್ದರು. ಪರಿಕ್ಕರ್ ಅವರೊಂದಿಗೆ ಪ್ರತ್ಯೇಕವಾಗಿ ಚರ್ಚಿಸಿದ ಅಮಿತ್ ಷಾ, 'ಪಕ್ಷವು ಕರ್ನಾಟಕದಲ್ಲಿ ಮತ್ತೆ ಅಧಿಕಾರಕ್ಕೆ ಬರುವ ಆಶಾಭಾವ ಹೊಂದಿದೆ. ಕುಡಿಯುವ ನೀರಿನ ಮಹತ್ವದ ಈ ಬೇಡಿಕೆಗೆ ಒಪ್ಪಿಗೆ ಸೂಚಿಸಿದಲ್ಲಿ ಪಕ್ಷಕ್ಕೆ ಬೆಂಬಲ ಸಿಗಲಿದೆ' ಎಂದು ಮನವರಿಕೆ ಮಾಡಿದ ನಂತರ ಗೋವಾ ಮುಖ್ಯಮಂತ್ರಿ ಈ ಪತ್ರ ಬರೆದಿದ್ದಾರೆ ಎನ್ನಲಾಗಿದೆ.

ಆದರೆ ಬಿಜೆಪಿಯ ಈ ಚುನಾವಣಾ–ಪೂರ್ವ ಸರ್ಕಸ್ಸಿಗೆ ಇತರ ಪಕ್ಷಗಳಿಂದ ಮತ್ತು ಆ ಪ್ರದೇಶದ ರೈತರು ಹಾಗೂ ಜನತೆಯಿಂದ ತೀಕ್ಷ್ಣ ಪ್ರತಿಕ್ರಿಯೆ ವ್ಯಕ್ತವಾಗಿದೆ. ಮೊದಲನೆಯದಾಗಿ ಬಿಜೆಪಿ ಈ ಸರ್ಕಸ್ಸನ್ನೂ ಸ್ವಯಂ–ಸ್ಫೂರ್ತವಾಗಿ ಮಾಡಿಲ್ಲ. ಅದಕ್ಕೂ ರೈತರ ಆಕ್ರೋಶವೇ ಕಾರಣವಾಗಿತ್ತು. ಹುಬ್ಬಳ್ಳಿಯಲ್ಲಿ ಬಿಜೆಪಿ ಪರಿವರ್ತನಾ ಯಾತ್ರೆ ಆರಂಭಕ್ಕೂ ಮುನ್ನ ಮಹದಾಯಿ ಕುರಿತು ಯಡಿಯೂರಪ್ಪ ಅವರು ಸ್ಪಷ್ಟ ನಿರ್ಧಾರವನ್ನು ತಿಳಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದ್ದರು. ಬಿಜೆಪಿ ಪರಿವರ್ತನಾ ಯಾತ್ರೆ ವಿರೋಧಿಸಿ ಪ್ರತಿಭಟನೆ ಮಾಡಿದ ನವಲಗುಂದ ಮತ್ತು ಹುಬ್ಬಳ್ಳಿಯ 50ಕ್ಕೂ ಹೆಚ್ಚು ರೈತ ಹೋರಾಟಗಾರರನ್ನು ಪೋಲಿಸರು ಬಂಧಿಸಿದ್ದರು. 'ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಅಮಿತ್ ಷಾ ಅವರ ಚುನಾವಣಾ ಗಿಮಿಕ್ ಕೇಳಲು ನಾವೇನು ಗುಜರಾತಿಗಳಲ್ಲ. ಈ ಹೊತ್ತಿನಲ್ಲಿ ಅವರು ಕೊಡುವ ಭರವಸೆಗಳನ್ನು ಕೇಳಲು ನಾವು ಸಿದ್ಧರಿಲ್ಲ' ಎಂದು ಕಳಸಾ–ಬಂಡೂರಿ ಪಕ್ಷಾತೀತ ರೈತ ಹೋರಾಟ ಸಮಿತಿಯ ಅಧ್ಯಕ್ಷ ಲೋಕನಾಥ ಕಿಡಿಕಾರಿದ್ದಾರೆ. 'ರೈತರ ನಿರಂತರ ಹೋರಾಟವನ್ನು ಇದುವರೆಗೆ ನಿರ್ಲಕ್ಷಿಸುತ್ತಲೇ ಬಂದ ಬಿಜೆಪಿಯವರಿಗೆ ಈಗ ಮಹದಾಯಿ ವಿಚಾರ ನೆನಪಿಗೆ ಬಂದಿದೆ. ಎರಡೂವರೆ ವರ್ಷ ಹೋರಾಟ ಮಾಡಿದ್ದೇವೆ. ಬೂಟಿನೇಟು ತಿಂದಿದ್ದೇವೆ. ಜೈಲು ಕಂಡು ಬಂದಿದ್ದೇವೆ. ಕಣ್ಣೀರಿನಿಂದ ಕೈತೊಳೆಯುವಾಗ ಕರುಣೆ ತೋರದ ಅವರು, ಚುನಾವಣೆ ಹತ್ತಿರಕ್ಕೆ ಬರುತ್ತಿದ್ದಂತೆಯೇ ಸಭೆ ಕರೆದು ನಮ್ಮನ್ನು ಹುಚ್ಚರನ್ನಾಗಿ ಮಾಡಲು ಹೊರಟಿದ್ದಾರೆ. ಇವರ ಮಾತಿಗೆ ಬಗ್ಗುವುದಿಲ್ಲ' ಎಂದರು. ಡಿಸೆಂಬರ್ 15ರ ಒಳಗಾಗಿ ಸಮಸ್ಯೆ ಬಗೆಹರಿಸಿ ಈ ಭಾಗಕ್ಕೆ ಕಾಲು ಇಡುವುದಾಗಿ ಮಾತು ಕೊಟ್ಟಿದ್ದ ಯಡಿಯೂರಪ್ಪ ವಚನಭ್ರಷ್ಟರಾಗಿದ್ದಾರೆ. ಇದೀಗ, ಕಾಟಾಚಾರಕ್ಕೆ ಎಂಬಂತೆ ಅಮಿತ್ ಷಾ ದೆಹಲಿಯಲ್ಲಿ ಸಭೆ ಕರೆದು ಚರ್ಚಿಸಿದ್ದಾರೆ ಎಂದು ಟೀಕಿಸಿದ್ದಾರೆ..

"ಮಹದಾಯಿ ನದಿ ನೀರು ಹಂಚಿಕೆ ವಿವಾದ ಸಂಬಂಧ ಸರ್ವಪಕ್ಷ ನಿಯೋಗವನ್ನು ಪ್ರಧಾನಿ ಬಳಿ ಕರೆದುಕೊಂಡು ಹೋಗಿದ್ದೆ. ಆ ವೇಳೆಯಲ್ಲಿ ಪ್ರಧಾನಿ ಮಧ್ಯಸ್ಥಿಕೆ ವಹಿಸಲು ನಿರಾಕರಿಸಿದ್ದರು. ಸರ್ವಪಕ್ಷ ಸಭೆಯಲ್ಲಿ ಬಿಜೆಪಿ ನಾಯಕರು ಮಾತನಾಡಿರಲಿಲ್ಲ. ಈಗ ಚುನಾವಣೆ ಹತ್ತಿರವಾದ ಸಂದರ್ಭದಲ್ಲಿ ಸಭೆ ನಡೆಸಿದ್ದಾರೆ". ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದ್ದಾರೆ. 'ಮೂರು ರಾಜ್ಯಗಳಿಗೆ ಸಂಬಂಧಿಸಿದ ವಿವಾದ ಇದು. ಗೋವಾ ಸರ್ಕಾರದಿಂದ ನಮಗೆ ಪತ್ರ ಬರೆಯಬೇಕು. ನ್ಯಾಯಮಂಡಳಿ ಮುಂದೆ ಪ್ರಮಾಣಪತ್ರ ಸಲ್ಲಿಸಬೇಕು. ಯಡಿಯೂರಪ್ಪ ಅವರು ಚುನಾಣೆಗಾಗಿ ಹೇಳಿಕೆ ನೀಡುವುದರಿಂದ ಪ್ರಯೋಜನ ಆಗುವುದಿಲ್ಲ' ಎಂದು ಸಿಎಂ ಟೀಕಿಸಿದ್ದಾರೆ.


ಮನೋಹರ್ ಪರಿಕ್ಕರ್ ಪತ್ರಕ್ಕೆ ಪ್ರತಿಕ್ರಿಯಿಸಿದ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ 'ಚುನಾವಣೆ ಸಂದರ್ಭದಲ್ಲಿ ಈ ಪತ್ರವನ್ನು ಬರೆಯುವ ಮೂಲಕ ಬಿಜೆಪಿ ಕರ್ನಾಟಕದ ಜನತೆಗೆ ಟೋಪಿ ಹಾಕಲು ಹೊರಟಿದೆ. ಇದಕ್ಕೆ ಜನತೆ ಮನ್ನಣೆ ನೀಡುವುದಿಲ್ಲ. ಪತ್ರವನ್ನು ರಾಜ್ಯದ ಮುಖ್ಯಮಂತ್ರಿ ಅಥವಾ ಜಲ ಸಂಪನ್ಮೂಲ ಸಚಿವರಿಗೆ ಬರೆಯಬೇಕೆ ಹೊರತು ಬಿಜೆಪಿ ರಾಜ್ಯ ಅಧ್ಯಕ್ಷರಿಗೆ ಅಲ್ಲ' ಎಂದಿದ್ದಾರೆ.

ಮಹಾದಾಯಿ ಬಗ್ಗೆ ಯಡಿಯೂರಪ್ಪ ಘೋಷಣೆ ಬರಿಯ ಚುನಾವಣಾ ರಾಜಕೀಯ ಗಿಮಿಕ್ ಎಂಬುದು ಸ್ಪಷ್ಟ. ಬಿಜೆಪಿ ಮತ್ತು ಅವರು ನಡೆದುಕೊಳ್ಳುತ್ತಿರುವ ರೀತಿ ಅದರ ಜಾರಿಯ ಪ್ರಾಮಾಣಿಕತೆಯ ಬಗ್ಗೆ ಗಂಭೀರ ಅನುಮಾನಗಳನ್ನು ಹುಟ್ಟು ಹಾಕುತ್ತದೆ. ನಿಜವಾಗಿಯೂ ಚುನಾವಣಾ–ಪೂರ್ವ ರಾಜಕೀಯ ಕೊಡುಗೆ ಎಂದಾಗಿದ್ದರೆ, ಪ್ರಧಾನಿಯೇ ಮೂರು ರಾಜ್ಯಗಳ ಮುಖ್ಯಮಂತ್ರಿಗಳಿಗೆ ಪತ್ರ ಬರೆದು ಸಭೆ ಸೇರಿಸಿ ಈ ಬಗ್ಗೆ ಒಂದು ಒಪ್ಪಂದಕ್ಕೆ ಬಂದು ನ್ಯಾಯಮಂಡಳಿ ಮುಂದೆ ಪ್ರಮಾಣಪತ್ರ ಸಲ್ಲಿಸಬೇಕಿತ್ತು. ಈ ನಿಟ್ಟಿನಲ್ಲಿ ಮುಂದುವರೆಯದೆ ಈ ವಿವಾದ ಬಿಜೆಪಿ ಪಕ್ಷದ ಆಂತರಿಕ ವಿಷಯವೋ ಎಂಬಂತೆ ವರ್ತಿಸಿದ್ದು ಖಂಡನೀಯ. ಮಾತ್ರವಲ್ಲ, ಸಂವಿಧಾನೇತರ ಶಕ್ತಿ ಕೇಂದ್ರಗಳು ಕೇಂದ್ರ–ರಾಜ್ಯ ಹಾಗು ರಾಜ್ಯ–ರಾಜ್ಯಗಳ ನಡುವಿನ ವಿವಾದಗಳ ಪರಿಹಾರಕ್ಕೆ ಮಾಡಿರುವ ಸಂವಿಧಾನಾತ್ಮಕ ವ್ಯವಸ್ಥೆಯ ಉಲ್ಲಂಘನೆ.

ಗೋವಾ ಸರ್ಕಾರದ ಒಪ್ಪಿಗೆ ಪಡೆಯಲು ಹಿಂದೆ ಕರ್ನಾಟಕ ಸರಕಾರದಿಂದ ಹಲವು ಪ್ರಯತ್ನಗಳು ಆಗಿವೆ. ಕುಡಿಯುವ ನೀರಿಗೆ ಮಧ್ಯಂತರ ತೀರ್ಪಿಗೆ (2015) ಪ್ರಯತ್ನಿಸಿದಾಗ ಅದನ್ನು ತಿರಸ್ಕರಿಸಿ (ಜುಲೈ 2016) ನ್ಯಾಯಮಂಡಳಿ ಅದನ್ನು ದ್ವಿಪಕ್ಷೀಯವಾಗಿ ಬಗೆಹರಿಸಿಕೊಳ್ಳಬಹುದು ಎಂದು ಸೂಚಿಸಿತ್ತು. ಆಗ ಗೋವಾ ಮುಖ್ಯಮಂತ್ರಿಗೆ (ಸೆಪ್ಟೆಂಬರ್ 2016) ಸಿದ್ಧರಾಮಯ್ಯ ಪತ್ರ ಬರೆದಿದ್ದರು. ಅಕ್ಟೋಬರ್ 2016ರಲ್ಲಿ ನಿಗದಿತವಾಗಿದ್ದ ಮುಖ್ಯಮಂತ್ರಿಗಳ ಸಭೆ ಗೋವಾ ಮುಖ್ಯಮಂತ್ರಿಗಳ ಅನುಪಸ್ಥಿತಿಯಿಂದ ಆಗಿರಲಿಲ್ಲ. ಮೇ 2017ರಲ್ಲಿ ಸಿದ್ಧರಾಮಯ್ಯ ಮತ್ತೆ ಪರಿಕ್ಕರ್ ಅವರಿಗೆ ಪತ್ರ ಬರೆದಿದ್ದರು. ಜುಲೈ 2017ರಲ್ಲಿ ಗೋವಾ ಸರಕಾರ ಕರ್ನಾಟಕದ ಜತೆ ಯಾವುದೇ ಮಾತುಕತೆಯಲ್ಲಿ ಭಾಗವಹಿಸುವುದಿಲ್ಲವೆಂದು ಹೇಳಿಕೆ ನೀಡಿತ್ತು. ಇಷ್ಟು ಹಟಮಾರಿತನ ತೋರಿದ ಪರಿಕ್ಕರ್ ಯಡಿಯೂರಪ್ಪ ಅವರಿಗೆ ಪತ್ರ ಬರೆಯುವುದರಿಂದ ಸಮಸ್ಯೆ ಪರಿಹಾರವಾಗುತ್ತದೆ ಎಂಬುದು ನಂಬಲರ್ಹವಲ್ಲ. ಸಾಲದ್ದಕ್ಕೆ ಈಗ ಗೋವಾ ಬಿಜೆಪಿ ಸರಕಾರದಲ್ಲಿ ಮೈತ್ರಿಕೂಟದಲ್ಲಿರುವ ಗೋವಾ ಫಾರ್ವರ್ಡ್ ಪಾರ್ಟಿ ಇದಕ್ಕೆ ವಿರೋಧ ವ್ಯಕ್ತಪಡಿಸಿದೆ. ಆ ಪಕ್ಷವನ್ನು ಪ್ರತಿನಿಧಿಸುವ ಜಲಸಂಪನ್ಮೂಲ ಸಚಿವ ವಿನೋದ್ ಪಾಲ್ಯೇಕರ, ಪರಿಕ್ಕರ ನಿಲುವಿಗೆ ವಿರೋಧ ವ್ಯಕ್ತಪಡಿಸಿ ಟ್ವೀಟ್ ಮಾಡಿದ್ದಾರೆ. 'ಮಹದಾಯಿ ನದಿ ನೀರಿನಲ್ಲಿ ಒಂದು ಹನಿಯನ್ನೂ ಬಿಡುವುದಿಲ್ಲ. ಎಂದಿದ್ದಾರೆ. ಇದರಿಂದ ಬಿಜೆಪಿಯ ರಾಜಕೀಯ ಗಿಮಿಕ್ ನ ವಿಶ್ವಾಸಾರ್ಹತೆ ಇನ್ನಷ್ಟು ಕಡಿಮೆಯಾಗಿದೆ.

ಈ ಅರ್ಥಹೀನ ರಾಜಕಿಯ ಗಿಮಿಕ್ಕನ್ನು ಮೆಚ್ಚಿ ಬಿಜೆಪಿಯನ್ನು ಬೆಂಬಲಿಸಲು ಕರ್ನಾಟಕದ ಜನ ಮೂರ್ಖರಲ್ಲ. ಅದನ್ನು ಚುನಾವಣೆಯ ಮೊದಲೂ ಚುನಾವಣೆಯಲ್ಲೂ ಸಿದ್ಧ ಪಡಿಸಬೇಕಾಗಿದೆ. ಪ್ರಧಾನಿಯೇ ಮೂರು ರಾಜ್ಯಗಳ ಮುಖ್ಯಮಂತ್ರಿಗಳಿಗೆ ಪತ್ರ ಬರೆದು ಸಭೆ ಸೇರಿಸಿ ಈ ಬಗ್ಗೆ ಒಂದು ಒಪ್ಪಂದಕ್ಕೆ ಬಂದು ನ್ಯಾಯಮಂಡಳಿ ಮುಂದೆ ಪ್ರಮಾಣಪತ್ರ ಸಲ್ಲಿಸಬೇಕು ಎಂದು ಒತ್ತಾಯಿಸಬೇಕಾಗಿದೆ.

ಇದೇ ಸಮಯದಲ್ಲಿ ಇತರ ಹಲವು ಅಂತರ–ರಾಜ್ಯ ವಿವಾದಗಳಂತೆ ಮಹಾದಾಯಿ ವಿವಾದ, ಅಧಿಕಾರದಾಹಕ್ಕಾಗಿ ರಾಜ್ಯಗಳ ನಡುವೆ ತಗಾದೆ ತಂದಿಡುವ, ಕೇಂದ್ರದಲ್ಲೊಂದು ರಾಜ್ಯದಲ್ಲೊಂದು, ಚುನಾವಣಾ ಸಮಯದಲ್ಲೊಂದು ಆ ಮೇಲೊಂದು ಮಾತನಾಡುವ ಕಾಂಗ್ರೆಸ್–ಬಿಜೆಪಿಗಳ ಚಿಲ್ಲರೆ ರಾಜಕಾರಣದ ಫಲ. ಈಗ ಎರಡೂ ಪಕ್ಷಗಳು ಪರಸ್ಪರ ದೋಷಾರೋಪಣೆಯಲ್ಲಿ ತೊಡಗಿವೆ. ಈ ಎರಡೂ ಪಕ್ಷಗಳು ಇದಕ್ಕೆ ಸಮಾನವಾಗಿ ಜವಾಬ್ದಾರರು. ಕಾಂಗ್ರೆಸ್–ಬಿಜೆಪಿಗಳಂತಹ ಬೂರ್ಜ್ವಾ–ಭೂಮಾಲಕ ಪಕ್ಷಗಳು ಪಾಲಿಸುತ್ತಿರುವ ನವ–ಉದಾರವಾದಿ ನೀತಿಗಳ ಭಾಗವಾದ (ನದಿ ನೀರು ಸೇರಿದಂತೆ) ಪ್ರಾಕೃತಿಕ ಸಂಪನ್ಮೂಲಗಳ ಬಗೆಗಿನ ನೀತಿ ಅದನ್ನು ಖಾಸಗೀಕರಿಸುವತ್ತ ಗಮನ ಹರಿಸಿವೆಯೇ ವಿನಹ, ಕುಡಿಯುವ ಅಥವಾ ಕೃಷಿಗಾಗಿ ನೀರಿನಲ್ಲಿ ಹೂಡಿಕೆ ಮಾಡುವ ಉದ್ದೇಶ ಹೊಂದಿಲ್ಲವೆಂದೂ ಅರ್ಥಮಾಡಿಕೊಳ್ಳಬೇಕು. ●



ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಮ್ಯುನಿಸ್ಟ್ ಚಳುವಳಿಯ ಹುಟ್ಟು

ಮೂಡಬಿದಿರೆಯಲ್ಲಿ ಜನವರಿ 2 ರಿಂದ 5 ರವರೆಗೆ ನಡೆಯಲಿರುವ ಸಿಪಿಐ(ಎಂ) ಕರ್ನಾಟಕ 22ನೇ ರಾಜ್ಯ ಸಮ್ಮೇಳನ ನಡೆಯುತ್ತಿರುವ ದಕ್ಷಿಣ ಕನ್ನಡ ಜಿಲ್ಲೆ ಕಮ್ಯುನಿಸ್ಟ್ ಚಳುವಳಿಯ ಹುಟ್ಟು ಸ್ಥಳ ಸಹ. ಪಕ್ಷದ ಮೊದಲಿನ ವರ್ಷಗಳ ಹುಟ್ಟು ಬೆಳವಣಿಗೆಯನ್ನು ನೆನಪಿಸಿ ದಾಖಲಿಸಿ ಸಮ್ಮೇಳನಕ್ಕೆ ಪೂರ್ವಭಾವಿಯಾಗಿ ಸಾಮಾಜಿಕ ಮಾಧ್ಯಮದಲ್ಲಿ ಪ್ರಚಾರ ಮಾಡಲು ಯೋಜಿಸಲಾಗಿದೆ. ಈಗಾಗಲೇ 6 ಪೋಸ್ಟರುಗಳು ರಚಿತವಾಗಿವೆ. ಸಮ್ಮೇಳನದ ಸ್ಥಳದಲ್ಲೂ ಇವನ್ನು ಪ್ರದರ್ಶಿಸಲಾಗುವುದು. ಈ ಪೋಸ್ಟರುಗಳ ಒಂದು ಸ್ಯಾಂಪಲ್.



ತಹಶೀಲ್ದಾರರ ಜೀಪು ಅಡ್ಡಗಟ್ಟಿದ ನಿವೇಶನರಹಿತರು.



ಕೆದೂರಿನಲ್ಲಿ ಸರಕಾರಿ ಜಾಗ ತೆರವಿಗೆ ಪ್ರತಿರೋಧ

ವೆಂಕಟೇಶ ಕೋಣಿ

ಕುಂದಾಪುರ ತಾಲೂಕು ಕೆದೂರು ಗ್ರಾಮ ಪಂಚಾಯತ್ ವ್ಯಾಪ್ತಿಯ ಶಾನಾಡಿ ಎಂಬಲ್ಲಿ ಸರಕಾರಕ್ಕೆ ಸೇರಿದ ಜಾಗ ಸರ್ವೆ ನಂಬ್ರ 61 ವಿಸ್ತೀರ್ಣ ಒಂದು ಎಕ್ರೆಯಲ್ಲಿ ಪರಿಶಿಷ್ಠರು ಸೇರಿದಂತೆ 21 ಕುಟುಂಬಗಳು ಭೂಮಿ ಹಕ್ಕು ನೀಡುವಂತೆ ಗುಡಿಸಲು ಕಟ್ಟಿಕೊಂಡು ಹೋರಾಟ ನಡೆಸುತ್ತಿದ್ದು, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಕುಂದಾಪುರ ತಾಲೂಕು ಸಮಿತಿ ಮತ್ತು ಸಿಪಿಐ(ಎಂ) ಉಡುಪಿ ಜಿಲ್ಲಾ ಸಮಿತಿ ಹೋರಾಟದ ನೇತೃತ್ವ ವಹಿಸಿದೆ.

ಈ ಮಧ್ಯೆ ಕುಂದಾಪುರ ತಹಶೀಲ್ದಾರರು ಸ್ಥಳ ಪರಿಶೀಲನೆ ನಡೆಸಿ ಸರಕಾರಿ ಜಾಗದಲ್ಲಿನ ಟೆಂಟ್ ತೆರವುಗೊಳಿಸುವಂತೆ ನೋಟೀಸು ಜ್ಯಾರಿಗೊಳಿಸಿ, ಕ್ರಿಮಿನಲ್ ಮೊಕದ್ದಮೆ ಹೂಡುವ ಕುರಿತು ಎಚ್ಚರಿಕೆಯ ನಾಮಫಲಕ ಅಳವಡಿಸಿದ್ದಾರೆ. ತೆರವಿಗೆ ಬಿಡುವುದಿಲ್ಲ, ಭೂಮಿ ಹಕ್ಕು ಆಗ್ರಹಿಸಿ ಬಹುಕಾಲದಿಂದ ಬೇಡಿಕೆ ಸಲ್ಲಿಸುತ್ತಲೇ ಬಂದಿದ್ದರೂ ಆಡಳಿತ ನಮ್ಮ ಬೇಡಿಕೆ ಪರಿಗಣಿಸಿಲ್ಲ. ತಾಲೂಕು ಆಡಳಿತ ನೀಡಿರುವ ನೋಟೀಸ್‌ಗೆ ಬರುವುದಿಲ್ಲ. ಒಂದೊಮ್ಮೆ ತೆರವಿಗೆ ಮುಂದಾದಲ್ಲಿ ತೀವ್ರ ಪ್ರತಿರೋಧ ಒಡ್ಡುವೆವು. ಮುಂದಾಗುವ ಅನಾಹುತಗಳಿಗೆ ತಹಶೀಲ್ದಾರರೇ ಹೊಣೆಗಾರರು ಎಂದು ನಿವೇಶನ ರಹಿತರು ಎಚ್ಚರಿಸಿದರು.

ಸರಕಾರಿ ಜಾಗ ತಾತ್ಕಾಲಿಕ ಒತ್ತುವರಿದಾರರ ಪರವಾಗಿ ಹಕ್ಕೊತ್ತಾಯ ಮಾಡಿದ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಉಡುಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವೆಂಕಟೇಶ ಕೋಣಿ ಅವರು, ನಿವೇಶನ ರಹಿತ ಕೃಷಿಕೂಲಿ ಕಾರ್ಮಿಕರಿಗೆ ನಿವೇಶನ ನೀಡುವಂತೆ ಈ ಹಿಂದೆಯೇ ಕೆದೂರು ಗ್ರಾಮ ಪಂಚಾಯತ್‌ಗೆ ಮನವಿ ಮಾಡಲಾಗಿದೆ. ಇದೀಗ ಸರಕಾರಿ ಜಾಗದಲ್ಲಿ ಕುಳಿತಿರುವ ಬಡ ಕೃಷಿ ಕೂಲಿ ಕಾರ್ಮಿಕರಿಗೆ ನಿವೇಶನ ನೀಡಲು ಮುಂದಾಗಬೇಕು. ನಿವೇಶನ ಮಂಜೂರು ಭರವಸೆ ನೀಡಿದರೂ ಈ ತನಕ ಕಾರ್ಯಗತವಾಗಿಲ್ಲ. ಈ ಹಿನ್ನಲೆಯಲ್ಲಿ ಸರಕಾರಿ ಜಾಗದಲ್ಲಿ ಟೆಂಟ್ ಹಾಕಿ ಹೋರಾಟದ ಮೂಲಕವೇ ಅಧಿಕಾರಿಗಳಿಗೆ ಉತ್ತರ ನೀಡಲು ಮುಂದಾಗಿದ್ದೇವೆ. ಪಕ್ಕದಲ್ಲೇ ಸರಕಾರಿ ಜಾಗ 3 ಎಕ್ರೆ ಒತ್ತುವರಿ ಮಾಡಿ, ಕೃಷಿ ಮಾಡಿರುವುದು ಮೊದಲು ತೆರವುಗೊಳಿಸಲು, ನಂತರ ಬಡವರ ಗುಡಿಸಲು ತೆರವು ಕುರಿತಂತೆ ಯೋಚಿಸಲಿ ಎಂದು ಹೇಳಿದ ಅವರು ಈ ಹೋರಾಟಕ್ಕೆ ಕೃಷಿ ಕೂಲಿಕಾರರ ಸಂಘ ಬೆಂಬಲ ನೀಡಲಿದೆ ಎಂದು ಹೇಳಿದರು. ತಾಲೂಕು ಆಡಳಿತ ಬೆದರಿಸುವ ತಂತ್ರ ಕೈಬಿಡಬೇಕು ಎಂದು ಸಿಪಿಐ(ಎಂ) ಉಡುಪಿ ಜಿಲ್ಲಾ ಕಾರ್ಯದರ್ಶಿ ಬಾಲಕೃಷ್ಣ ಶೆಟ್ಟಿ ಎಚ್ಚರಿಸಿದ್ದಾರೆ.

ಗುಡಿಸಲು ತೆರವು ಕಾರ್ಯಾಚರಣೆ, ಸಂತ್ರಸ್ತರ ಆಕ್ರೋಶ:

ಕೆದೂರಿನ 21 ಕುಟುಂಬಗಳ ಗುಡಿಸಲನ್ನು ನಿವೇಶನ ರಹಿತರ ಪ್ರತಿರೋಧ ಲೆಕ್ಕಿಸದೆ ತಹಶೀಲ್ದಾರ್ ಜಿ.ಎಂ. ಬೋರ್ಕರ್ ಗುಡಿಸಲು ತೆರವು ಗೊಳಿಸಿದರು. ಸ್ವಂತ ಸೂರಿಲ್ಲದ ನಮ್ಮಂತಹ ಬಡವರ ಮೇಲೆ ಯಾಕೆ ಬ್ರಹ್ಮಾಸ್ತ್ರ ಪ್ರಯೋಗಿಸುತ್ತೀರಿ. ಇಲ್ಲೊಂದು ಸರಕಾರಿ ನಿವೇಶನ ಇದೆ ಎಂದು ತೋರಿಸಿಕೊಟ್ಟವರು ನಾವು. ಸರಕಾರಿ ಭೂಮಿ ಅತಿಕ್ರಮಣ ನಡೆದಾಗ ಸುಮ್ಮನಿದ್ದ ನೀವು ಈಗ ನಮಗೆ ಭೂಮಿ ಹಕ್ಕು ನೀಡುವ ಬದಲು ಗುಡಿಸಲು ಯಾಕೆ ಕೇಳುತ್ತೀರಿ ಎಂದು ನಿವೇಶನ ರಹಿತರು ಆಕ್ರೋಶ ಹೊರಗೆಡಹಿದರು.

ಕಂದಾಯ ಇಲಾಖಾಧಿಕಾರಿಗಳು ಪೊಲೀಸ್ ಭದ್ರತೆಯಲ್ಲಿ ಗುಡಿಸಲು ತೆರವಿಗೆ ಮುಂದಾಗುತ್ತಿರುವಂತೆ ನಿವೇಶನ ರಹಿತರ ಪರ ಕೃಷಿ ಕೂಲಿಕಾರರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವೆಂಕಟೇಶ ಕೋಣಿ ಮಾತನಾಡಿ, ಬಡವರನ್ನು ಗದರಿಸುವ ಕೆಲಸ ಮಾಡಬೇಡಿ, ಭೂಮಿ ಹಕ್ಕು ಕೇಳುವುದು ನಮ್ಮ ಕರ್ತವ್ಯ. ಭೂಮಿ ವಂಚಿತರು ಗುಡಿಸಲು ನಿರ್ಮಿಸಿಕೊಟ್ಟಾಗ ನಿಮ್ಮ ಕರ್ತವ್ಯ ಜಾಗೃತಿಯಾಗುತ್ತಿದೆಯೇ ಎಂದು ಪ್ರಶ್ನಿಸಿದರು. ಇದು ಇಲಾಖಾಧಿಕಾರಿಗಳನ್ನು ಕೆರಳಿಸುವಂತೆ ಮಾಡಿತು. ಪರಸ್ಪರ ಮಾತಿನ ಚಕಮಕಿ ನಡೆಯಿತು. ಪೊಲೀಸರು ಮಧ್ಯ ಪ್ರವೇಶಿಸಿ ಪರಿಸ್ಥಿತಿ ತಿಳಿಗೊಳಿಸಿದರು.

6 ತಿಂಗಳ ಗಡುವು :

ನಿವೇಶನ ರಹಿತರು ಭೂಮಿ ಹಕ್ಕಿಗಾಗಿ ಗ್ರಾಮ ಪಂಚಾಯತ್‌ಗೆ ಅರ್ಜಿ ಸಲ್ಲಿಸಬೇಕು. 6 ತಿಂಗಳ ಗಡುವು ನೀಡಲಾಗುವುದು. ಇಲ್ಲಿ ಸರಕಾರಿ ನಿವೇಶನ ಸರ್ವೆ ನಡೆಸಿ ವರದಿಯನ್ನು ಜಿಲ್ಲಾಧಿಕಾರಿಗೆ ನೀಡಲಾಗುವುದು ಎಂದು ತಹಶೀಲ್ದಾರರು ಸ್ಪಷ್ಟ ಪಡಿಸಿದರು.



ಜೀಪು ಅಡ್ಡಗಟ್ಟಿ ಪ್ರತಿರೋಧ :

ಕಳೆದ ನಾಲ್ಕು ವರ್ಷಗಳಿಂದ ನಿವೇಶನಕ್ಕಾಗಿ ಗ್ರಾಮ ಪಂಚಾಯತ್‌ಗೆ ಅರ್ಜಿ ಸಲ್ಲಿಸುತ್ತಲೇ ಬಂದಿದ್ದೇವೆ. ಸ್ವಂತ ಸೂರಿಲ್ಲದ ನಾವು ಬಾಡಿಗೆ ಮನೆಯಲ್ಲಿ ನೆಲೆಸಿದ್ದೇವೆ. ನಾವು ಕುಳಿತಿರುವುದು ಸರಕಾರಿ ಜಾಗದಲ್ಲಿ. ಈ ಜಾಗದಲ್ಲಿ ಮಣ್ಣು ಕಳವು ಮಾಡಲಾಗಿದೆ. ಮರಮಟ್ಟುಗಳನ್ನು ತೆಗೆಯಲಾಗಿದೆ. ಆವಾಗ ಸುಮ್ಮನಿದ್ದೀರಿ, ನಾವು ಗುಡಿಸಲು ಕಟ್ಟಿದ ತಕ್ಷಣ ಬಂದಿದ್ದೀರಿ. ಈ ಗ್ರಾಮದ ಪಂಚಾಯತಿ ಅಧಿಕಾರಿಗಳು ಯಾಕೆ ಬಂದಿಲ್ಲ. ನಮ್ಮ ಅರ್ಜಿಯ ಬಗ್ಗೆ ಅವರು ಉತ್ತರ ನೀಡಬೇಕು. ನಮಗೆ ಹಕ್ಕು ನೀಡದ ಹೊರತು ಇಲ್ಲಿಂದ ಕದಲುವುದಿಲ್ಲ ಎಂದು ತಹಶೀಲ್ದಾರರ ಜೀಪು ಅಡ್ಡ ಗಟ್ಟಿದ ನಿವೇಶನ ರಹಿತರು ಆಕ್ರೋಶ ಹೊರಗೆಡಹಿದರು.

ಕಂದಾಯ ಅಧಿಕಾರಿಗಳು, ನಿವೇಶನ ರಹಿತರನ್ನು ಸಮಾದಾನ ಪಡಿಸಿ, ಏಕಾಏಕಿ ಯಾವುದೇ ಬೇಡಿಕೆ ಈಡೇರಿಸಲು ಬರುವುದಿಲ್ಲ. ಅದಕ್ಕೊಂದು ಕಾನೂನು ಪ್ರಕ್ರಿಯೆಯಿದೆ. ನಿವೇಶನ ರಹಿತರ ಬೇಡಿಕೆ ಈಡೇರಿಸಲು ಇಲಾಖೆ ಸಾಕಷ್ಟು ಶ್ರಮಿಸುತ್ತಿದೆ. ನಿಮ್ಮ ಬೇಡಿಕೆ ಈಡೇರಿಸಲು ಪ್ರಾಮಾಣಿಕ ಪ್ರಯತ್ನ ನಡೆಸುವುದಾಗಿ ಭರವಸೆ ನೀಡಿದ ಬಳಿಕ ಹೋರಾಟಗಾರರು ಹಿಂದೆ ಸರಿದರು.

ನಿವೇಶನ ರಹಿತರ ಕಣ್ಣೀರು :

ತಹಶೀಲ್ದಾರರು, ಕಂದಾಯ ಅಧಿಕಾರಿಗಳು, ಪೊಲೀಸ್ ಬಲದೊಂದಿಗೆ ಗುಡಿಸಲು ತೆರವು ಗೊಳಿಸುತ್ತಿರುವಂತೆ, ನಿವೇಶನ ರಹಿತರು ಕಣ್ಣೀರಿಟ್ಟರು. ಮಕ್ಕಳು, ಮಹಿಳೆಯರು ಅಚಾನಕ ನಡೆದ ವಿದ್ಯಮಾನದಿಂದ ಕಂಗೆಟ್ಟರು. ಬಡವರಿಗೆ ನ್ಯಾಯ ಎಲ್ಲಿದೆ ಅಂತ ಪ್ರಶ್ನಿಸಿದರು.

ನಿವೇಶನ ರಹಿತರ ಹೋರಾಟಕ್ಕೆ ಸಿಐಟಿಯು ಕುಂದಾಪುರ ತಾಲೂಕು ಅಧ್ಯಕ್ಷ ಎಚ್. ನರಸಿಂಹ ಬೆಂಬಲ ವ್ಯಕ್ತ ಪಡಿಸಿದರು. ಕೃಷಿ ಕೂಲಿಕಾರರ ಸಂಘದ ಮುಖಂಡರಾದ ಕರಿಯ ದೇವಾಡಿಗ, ನಾಗರತ್ನ ನಾಡ, ಶೀಲಾವತಿ, ಪದ್ಮಾವತಿ ಶೆಟ್ಟಿ, ಕುಶಲ, ಪ್ರಕಾಶ ಕೆದೂರು, ರಮೇಶ ಗುಲ್ವಾಡಿ, ಸುಬ್ರಹ್ಮಣ್ಯ ಕೆದೂರು, ಭವಿತಾ ರಾಜು ಪೂಜಾರಿ, ಗಿರಿಜಾ, ಕೃಷ್ಣ ಕೆದೂರು, ದಿನೇಶ ಪೂಜಾರಿ, ವಿನೋದ ಬಾಲಕೃಷ್ಣ ಕೆದೂರು, ದಿನೇಶ ಪೂಜಾರಿ, ವಿನೋದ ಬಾಲಕೃಷ್ಣ ಕೆದೂರು, ಜ್ಯೋತಿ ರಘುನಾಥ ಶೆಟ್ಟಿ, ಸರೋಜ ಶೇಷಪ್ಪ ಪ್ರಕಾಶ ಪ್ರತಾಪನಗರ, ಗೌರಿ, ಜಯಂತಿ ರವಿರಾಜ ಶೆಟ್ಟಿ, ಉಪಸ್ಥಿತರಿದ್ದರು. ●

ಬೀಡಿ ಕಾರ್ಮಿಕರ ಸರ್ವೇ ಕಾರ್ಯ – ಅವಧಿ ವಿಸ್ತರಣೆಗೆ ಸಿಐಟಿಯು ಒತ್ತಾಯ

ಕೇಂದ್ರದ ಕಾರ್ಮಿಕ ಸಚಿವಾಲದಡಿಯಲ್ಲಿ ಬರುವ ಕಾರ್ಮಿಕರ ಕಲ್ಯಾಣ ಸಂಘಟನೆ ಹಾಗೂ ಬೀಡಿ ಕಾರ್ಮಿಕರ ಕ್ಷೇಮಾಬಿವೃದ್ದಿ ನಿಧಿ & ಸಂಘಟನೆಯ ವತಿಯಿಂದ ಕರ್ನಾಟಕ ರಾಜ್ಯದಲ್ಲಿ ನಡೆಯುತ್ತಿರುವ ಬೀಡಿ ಕಾರ್ಮಿಕರ ಸರ್ವೇಕಾರ್ಯವು ಅಪೂರ್ಣಗೋಂಡಿದೆ. ಹಾಗಾಗಿ ಇದರ ಅಂತಿಮ ದಿನಾಂಕವನ್ನು ಮಾರ್ಚ 31, 2018ರ ತನಕ ವಿಸ್ತರಿಸಲು ಹಾಗು ಈ ಸರ್ವೇಕಾರ್ಯದ ಕುರಿತು ವ್ಯಾಪಕ ಪ್ರಚಾರ ನಡೆಸಲು ಕರ್ನಾಟಕ ರಾಜ್ಯ ಬೀಡಿ ಕಾರ್ಮಿಕರ ಫೇಡರೇಶನ್ [ಸಿಐಟಿಯು] ರಾಜ್ಯ ಸಮಿತ ಕರ್ನಾಟಕ & ಕೇರಳ ಕಲ್ಯಾಣ ಅಯುಕ್ತರಾದ ಕೆ. ಶೇಖರ್.ಅವರನ್ನು ಒತ್ತಾಯಿಸಿದೆ.

ಕರ್ನಾಟಕ ರಾಜ್ಯ ಬೀಡಿ ಕಾರ್ಮಿಕರ ಫೇಡರೇಶನ್ [ಸಿಐಟಿಯು] ರಾಜ್ಯ ಸಮಿತಿಯ ಪ್ರಧಾನ ಕಾರ್ಯಧರ್ಶಿಗಳು ಕಲ್ಯಾಣ ಅಯುಕ್ತರಾದ ಕೆ. ಶೇಖರ್. ಅವರನ್ನು ಭೇಟಿಯಾಗಿ ಬೀಡಿ ಕಾರ್ಮಿಕರ ಸರ್ವೇ ಕಾರ್ಯದಲ್ಲಿನ ಕೋರತೆಗಳ ಬಗ್ಗೆ ಗಮನ ಸೆಳೆದರು. ರಾಜ್ಯದ 23 ಜಲ್ಲೆಗಳಲ್ಲಿ ಹರಡಿಕೋಂಡಿರುವ ಸರಿ ಸುಮಾರು 9–10 ಲಕ್ಷ ಬೀಡಿ ಕಾರ್ಮಿಕರ ನಡುವೆ ಬಹುತೇಕ ಕಡೆಗಳಲ್ಲಿ ಸರ್ವೇಯ ವಿಚಾರ ಇನ್ನು ತಿಳುವಳಿಕೆ ಇಲ್ಲದ ಕಾರಣ ಇದನ್ನು ವಿಸ್ತರಿಸಲು ಒತ್ತಾಯಿಸಲಾಯಿತು ಹಾಗು ಈ ಕೆಲಸದಲ್ಲಿ ಬೀಡಿ ಕಾರ್ಮಿಕ ಸಂಘಗಳು ಸಂಪೂರ್ಣ ಸಹಕಾರ ನಿಡುವುದಾಗಿ ತಿಳಿಸಲಾಯಿತು.

ಬೀಡಿ ಕಾರ್ಮಿಕರ ಮಕ್ಕಳಿಗೆ ನೀಡುವ ವಿದ್ಯಾರ್ಥಿವೇತನದ ಪ್ರಕ್ರಿಯೆಯು ಸಂಪೂರ್ಣವಾಗಿ ಅನ್ ಲೈನ್ ಅಗಿರುವ ಕಾರಣ ವಿದ್ಯಾರ್ಥಿವೇತನ ಮಂಜೂರಾದ ವಿದ್ಯಾರ್ಥಿಗಳಿಗೆ ಸಂದೇಶವೇ ತಲುಪದೆ ಸಮಸ್ಯಗಳಾಗಿವೆ. ಹಾಗಾಗಿ ವಿದ್ಯಾರ್ಥಿವೇತನ ಮಂಜೂರಾದ ಪಟ್ಟಿಯನ್ನು ಶಾಲಾ– ಕಾಲೇಜುಗಳಿಗೆ ನೀಡುವಂತೆ ಹಾಗು ಅದನ್ನು ಕಡ್ಡಾಯವಾಗಿ ಶಾಲಾ– ಕಾಲೇಜು ಗಳಲ್ಲಿ ಸೂಚನ ಫಲಕದಲ್ಲಿ ಪ್ರಕಟಿಸುವಂತೆ ಸಹ ಒತ್ತಾಯಿಸಲಾಯಿತು.

ರಾಜ್ಯದ ಕೆಲವೆಡೆ ಬೀಡಿ ಕಾರ್ಮಿಕರ ಚಿಕಿತ್ಸಲಾಯಗಳಲ್ಲಿ ಧೀಘ ಕಾಲಿನ ಆರೋಗ್ಯ ಸಮಸ್ಯೆಗಳಾದ ರಕ್ತದ ಒತ್ತಡ, ಡಯಾಬಿಟಿಸ್, ಹೃದಯ ಸಂಬಂದಿ ಕಾಯಿಲೆಗಳೀಗೆ ಔಷಧಿ ಲಭ್ಯವಾಗುತ್ತಿಲ್ಲ ಎಂಬ ದೂರನ್ನು ಆಯುಕ್ತರ ಗಮನಕ್ಕೆ ತರಲಾಯಿತು. ಸಮಸ್ಯೆಗಳನ್ನು ಅಲಿಸಿದ ಕಲ್ಯಾಣಾಯುಕ್ತರಾದ ಶೇಖರ್ ಅವರು ಸರ್ವೇಕಾರ್ಯದ ಅವಧಿ ವಿಸ್ತರಣೆಗ ಕೇಂದ್ರ ಸರ್ಕಾರಕ್ಕೆ ಬರೆಯುವುದಾಗಿ, ವಿದ್ಯಾರ್ಥಿ ವೇತನ ಮಂಜೂರಾದ ಕುರಿತ ಮಾಹಿತಿ ವಿದ್ಯಾರ್ಥಿಗಳಿಗೆ ತಲುಪಿಸಲು ವ್ಯವಸ್ಥೆ ಮಾಡುವುದಾಗಿ ಹಾಗು ಔಷದಿಗಳ ಲಭ್ಯತೆಗೆ ಕ್ರಮ ವಹಿಸುವುದಾಗಿ ಆಶ್ವಾಸನೆ ನೀಡಿದ್ದಾರೆ ಎಂದು ಕರ್ನಾಟಕ ರಾಜ್ಯ ಬೀಡಿ ಕಾರ್ಮಿಕರ ಫೇಡರೇಷನ್[ಸಿಐಟಿಯು] ಪತ್ರಿಕಾ ಪ್ರಕಟಣೆಯಲ್ಲಿ ಹೇಳಿದೆ. ●

ತಪ್ಪು–ಒಪ್ಪು

ಜನಶಕ್ತಿಯ ಸಂಚಿಕೆ 50 (ಡಿಸೆಂಬರ್ 04–10) ರಲ್ಲಿ ಪುಟ 8 ರಲ್ಲಿ ಪ್ರಕಟವಾದ "ಉಡುಪಿಯ ಧರ್ಮ ಸಂಸತ್: ಕಾನೂನು ಸಂವಿಧಾನಕ್ಕೆ ಸವಾಲು" ಎಂಬ ಲೇಖನದ ಲೇಖಕ "ಬಾಲಕೃಷ್ಣ ಶೆಟ್ಟಿ" ಅವರ ಹೆಸರು ಬಿಟ್ಟು ಹೋಗಿದೆ. ಈ ಕಣ್ತಪ್ಪಿಗಾಗಿ ವಿಷಾದಿಸುತ್ತೇವೆ.

–ಸಂ.





ಜೈನಕಾಶಿ ಮೂಡಬಿದ್ರಿಯಲ್ಲಿ ಸಿಪಿಐ(ಎಂ) ರಾಜ್ಯ ಸಮ್ಮೇಳನ ಸ್ವಾಗತ ಸಮಿತಿಯಿಂದ ಸರ್ವಸಿದ್ಧತೆಗಳು

ವಾಸುದೇವ ಉಚ್ಚಿಲ

ದಕ್ಷಿಣ ಕನ್ನಡ ಜಿಲ್ಲೆಯು ಕರ್ನಾಟಕ ರಾಜ್ಯದಲ್ಲಿ ಕಮ್ಯೂನಿಸ್ಟ್ ಚಳುವಳಿಯ ಪ್ರಧಾನ ಪ್ರದೇಶವಾಗಿದ್ದರೂ, 31 ವರ್ಷಗಳ ಬಳಿಕ ಸಿಪಿಐ(ಎಂ) ರಾಜ್ಯ ಸಮ್ಮೇಳನ ನಡೆಸುವ ಅವಕಾಶ ಸಿಕ್ಕಿದೆ. ಬರುವ 2018ರ ಜನವರಿ 2, 3, 4 ಮತ್ತು 5 ರಂದು ಜೈನಕಾಶಿ ಎನಿಸಿದ ಐತಿಹಾಸಿಕ ಪಟ್ಟಣ ಮೂಡಬಿದ್ರೆಯಲ್ಲಿ ಸಮ್ಮೇಳನ ನಡೆಯಲಿದೆ.

1956ಕ್ಕೂ ಹಿಂದೆ ಇಂದಿನ ಕರ್ನಾಟಕ ಬೇರೆ ಬೇರೆ ರಾಜ್ಯಗಳಲ್ಲಿ ಹಂಚಿಹೋಗಿತ್ತು. ಕನ್ನಡ ಮಾತನಾಡುವ ಪ್ರದೇಶಗಳನ್ನೊಳಗೊಂಡು ಭಾರತ ಕಮ್ಯೂನಿಸ್ಟ್ ಪಕ್ಷದ ಕರ್ನಾಟಕ ರಾಜ್ಯ ಘಟಕವೊಂದನ್ನು ಒಗ್ಗೂಡಿಸುವ ಜವಾಬ್ದಾರಿಯಲ್ಲಿ ಎನ್.ಎಲ್.ಉಪಾಧ್ಯಾಯರು ಮುಂಬಯಿಂದ ಕರ್ನಾಟಕಕ್ಕೆ ಬಂದು ಆ ಕೆಲಸ ಮಾಡುತ್ತಿದ್ದರು. ಅಂಥ ಒಂದು ಸಂದರ್ಭದಲ್ಲಿ ಒಂದು ಅಖಿಲ ಕರ್ನಾಟಕ ಪ್ರತಿನಿಧಿ ಸಮ್ಮೇಳನವು ಮಂಗಳೂರು ಸಮೀಪದ ಉಳ್ಳಾಲದಲ್ಲಿ 1950ರ ಕೊನೆಯಲ್ಲಿ 3 ದಿನಗಳ ಕಾಲ ನಡೆದುದು ಬಹುಶ: ದ.ಕ.ಜಿಲ್ಲೆಯಲ್ಲಿ ನಡೆದ ಕಮ್ಯೂನಿಸ್ಟ್ ಪಕ್ಷದ ಮೊದಲ ರಾಜ್ಯ ಸಮ್ಮೇಳನ. ಆ ಮೇಲೂ ದ.ಕ.ಜಿಲ್ಲೆಯಲ್ಲಿ ರಾಜ್ಯ ಸಮ್ಮೇಳನಗಳು ನಡೆದಿವೆ. ತೊಕ್ಕೊಟ್ಟಿನಲ್ಲಿ 1986ರಲ್ಲಿ ಇ.ಎಂ.ಎಸ್.ನಂಬೂದಿರಿಪಾಡರು ಮಾರ್ಗದರ್ಶಕರಾಗಿ ಭಾಗವಹಿಸಿದ್ದ ಸಿಪಿಐ(ಎಂ) ರಾಜ್ಯ ಸಮ್ಮೇಳನ ನಡೆದ 31 ದಿನಗಳ ಬಳಿಕ ದ.ಕ. ಜಿಲ್ಲೆಯಲ್ಲಿ ಮೂಡಬಿದ್ರಿಯಲ್ಲಿ ರಾಜ್ಯ ಸಮ್ಮೇಳನ ನಡೆಯುತ್ತಿದೆ.

ದ.ಕ.ಜಿಲ್ಲೆಯು ಮಟ್ಟಿಗೆ 31 ವರ್ಷಗಳ ಹಿಂದಿನಂತೆ ಇಂದೂ ಪಕ್ಷದಲ್ಲಿ ಸದಸ್ಯರು, ಹಿತೈಷಿಗಳು ಮಧ್ಯಮವರ್ಗದವರು ಆರ್ಥಿಕವಾಗಿ ಬಲಾಢ್ಯರಾದವರು ಕಡಿಮೆಯೇ. ಆದರೆ ಇಂದು 21ನೇ ಶತಮಾನದ ಅವಶ್ಯಕತೆಗಳಿಗೆ ತಕ್ಕಂತೆ ರಾಜ್ಯ ಸಮ್ಮೇಳನದ ವ್ಯವಸ್ಥೆ ಮಾಡಬೇಕಾಗಿದೆ. ರಾಜ್ಯ ಸಮಿತಿ ಸದಸ್ಯರೂ ದ.ಕ.ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರೂ ಆಗಿರುವ ಕೆ.ಯಾದವ ಶೆಟ್ಟಿಯವರು ತನ್ನ ಊರಾದ ಮೂಡಬಿದ್ರೆಯಲ್ಲಿ ಅನುಕೂಲತೆಗಳು ಇವೆಯೆಂದು ತಿಳಿಸಿದ ಹಿನ್ನೆಲೆಯಲ್ಲಿ ರಾಜ್ಯ ಸಮ್ಮೇಳನ ಆಯೋಜಿಸಲು ದ.ಕ.ಜಿಲ್ಲಾ ಸಮಿತಿ ಮುಂದಾಗಿದೆ. 2017 ಸಪ್ಟೆಂಬರ್ 10 ರಂದು ಮೂಡಬಿದ್ರಿಯಲ್ಲಿ ಸ್ವಾಗತ ಸಮಿತಿ ರಚನೆಯಾಗಿದ್ದು, ಮಂಗಳೂರು ವಿ.ವಿ.ಕ್ರೈಸ್ತ ಅಧ್ಯಯನ ಪೀಠದ ನಿರ್ದೇಶಕರಾಗಿದ್ದ ನಿವೃತ್ತ ಪ್ರಾಧ್ಯಾಪಕ ಫಾ|ಜಾನ್ ಫೆರ್ನಾಂಡೀಸ್ ಅವರು ಗೌರವಾಧ್ಯಕ್ಷರಾಗಿರುವ, ಕಾ|ಕೆ.ಆರ್.ಶ್ರೀಯಾನ್ ಅಧ್ಯಕ್ಷರಾಗಿರುವ ಸ್ವಾಗತ ಸಮಿತಿಯನ್ನು ರಚಿಸಲಾಗಿದೆ. ಸ್ವಾಗತ ಸಮಿತಿ ಮತ್ತು ಉಪಸಮಿತಿಗಳು ಪದೇ ಪದೇ ಸೇರುತ್ತಿದ್ದು, ಸಮ್ಮೇಳನ ಸಿದ್ಧತೆ ಮುಂದುವರಿದಿದೆ.

ಸಮ್ಮೇಳನದ ಪ್ರಚಾರ ಕಾರ್ಯಕ್ರಮ ಹಂತ ಹಂತವಾಗಿ ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಸಾಗಿದೆ. ಮಂಗಳೂರು, ಮೂಡಬಿದ್ರೆ ಮತ್ತು ಪಕ್ಷದ ಕಾರ್ಯಕರ್ತರಿರುವ ಜಿಲ್ಲೆಯ ಪಟ್ಟಣ ಹಾಗೂ ಗ್ರಾಮಗಳಲ್ಲಿ ಈಗ 20 ದಿನಗಳ ಹಿಂದೆಯೇ ಪೋಸ್ಟರು ಹಚ್ಚಲಾಗಿದೆ. ಅದಕ್ಕೂ ಮೊದಲೇ ವ್ಯಾಪಕವಾಗಿ ಕರಪತ್ರ ಹಂಚಲಾಗಿದೆ. ಜಿಲ್ಲೆಯ ದಿನಪತ್ರಿಕೆಗಳು ಪತ್ರಿಕಾಗೋಷ್ಠಿಯಲ್ಲಿ ನೀಡಿದ ವಿವರಗಳನ್ನು ಈಗಾಗಲೇ ವರದಿ ಮಾಡಿವೆ. ಜಿಲ್ಲೆಯ ಪಕ್ಷದ ಶಾಖೆಗಳು ಒಂದೊಂದಾಗಿ ತಮ್ಮ ತಮ್ಮ ಊರುಗಳಲ್ಲಿ ದೊಡ್ಡ ಫ್ಲೆಕ್ಸ್ ಬ್ಯಾನರುಗಳಲ್ಲಿ ಪ್ರಚಾರ ಕೊಟ್ಟಿವೆ. ಕಳೆದ ವಾರ ಮಂಗಳೂರು, ಮೂಡಬಿದ್ರಿಯಲ್ಲಿ ಸ್ವಯಂಸೇವಕರು ಹೋಗಿ ವ್ಯಾಪಕ ಗೋಡೆ ಬರಹ ಮಾಡಿದ್ದಾರೆ. ಮೂಡಬಿದ್ರೆಯಲ್ಲಿ ಅನೇಕ ಪ್ರಮುಖರು ಗೋಡೆ ಬರಹಕ್ಕೆ ತಮ್ಮ ಮನೆಯ ಕಂಪೌಂಡುಗಳನ್ನು ಬಳಸಲು ಅವಕಾಶ ಮಾಡಿಕೊಟ್ಟಿದ್ದಾರೆ.

ಡಿಸೆಂಬರ್ 24ರಂದು ದ.ಕ.ಜಿಲ್ಲೆಯ ಎಲ್ಲಾ ಪಕ್ಷ ಶಾಖೆಗಳೂ (22ನೇ ರಾಜ್ಯ ಸಮ್ಮೇಳನದ ಸಂಕೇತವಾಗಿ) 22 ಬಾವುಟಗಳನ್ನು ಕಾಣಿಸುವ ಧ್ವಜ ದಿನಾಚರಣೆಯನ್ನು ತಮ್ಮ ತಮ್ಮ ಊರುಗಳಲ್ಲಿ ನಡೆಸಲಿದೆ. ಡಿಸೆಂಬರ್ 31 ರಂದು ಮಂಗಳೂರಿನಿಂದ ಮೂಡಬಿದ್ರೆಗೆ ಬೈಕ್ ರ‍್ಯಾಲಿ ನಡೆಸಿ, ಸಮ್ಮೇಳನದ ಧ್ವಜಸ್ತಂಭವನ್ನು ಹಿಂಬಾಲಿಸುವ ಕಾರ್ಯಕ್ರಮವಿದೆ. ಸಾಮಾಜಿಕ ಮಾಧ್ಯಮದಲ್ಲಿ ದ.ಕ.ಜಿಲ್ಲೆಯ ಕಾರ್ಯಕರ್ತರು ಜಿಲ್ಲೆಯ ಹಾಗೂ ರಾಜ್ಯದ ಕಮ್ಯೂನಿಸ್ಟ್ ಚಳುವಳಿ ಬಗೆಗಿನ ಪೋಸ್ಟರು ಹಾಗೂ ಬರಹಗಳನ್ನು ಫೇಸ್ ಬುಕ್ ಮತ್ತು ವಾಟ್ಸಪ್ ಗುಂಪುಗಳ ನಡುವೆ ತೇಲಿ ಬಿಡುತ್ತಿದ್ದಾರೆ. (ಇವುಗಳ ಕೆಲವು ಉದಾಹರಣೆಗಳು ಈ ಸಂಚಿಕೆಯಲ್ಲಿವೆ)

ಸಮ್ಮೇಳನದ ಮೊದಲ ದಿನ ಅಂದರೆ ಜನವರಿ 2 ರಂದು ರ‍್ಯಾಲಿ ಮತ್ತು ಬಹಿರಂಗ ಸಭೆ ನಡೆಯಲಿದೆ. ಮೂಡಬಿದ್ರೆ ಒಂಟಿಕಟ್ಟೆ ಎಂಬಲ್ಲಿ ಸಮ್ಮೇಳನ ಸಭಾಂಗಣವಿದ್ದು, ಅದರ ಸಮೀಪದ ಆಲಂಗಾರು ಎಂಬಲ್ಲಿಂದ 3 ಕಿ.ಮೀ.ಉದ್ದದ ರ‍್ಯಾಲಿ ಸಾಗಿ ಮೂಡಬಿದ್ರೆಯ ಸ್ವರಾಜ್ ಮೈದಾನದಲ್ಲಿ ಬಹಿರಂಗ ಸಭೆ ನಡೆಯಲಿದೆ. ಈ ರ‍್ಯಾಲಿಯಲ್ಲಿ ದ.ಕ. ಜಿಲ್ಲೆಯಿಂದಲೇ 10,000 ಮಂದಿಯನ್ನು ಸೇರಿಸುವ ಸಿದ್ಧತೆಗಳಾಗುತ್ತಿವೆ. ಪಕ್ಷದ ಕೇಂದ್ರ ಸಮಿತಿ ಕಾರ್ಯದರ್ಶಿ ಸೀತಾರಾಮ ಯೆಚೂರಿ, ರಾಜ್ಯ ಸಮಿತಿ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ, ರಾಜ್ಯ ಸಮಿತಿ ಮುಖಂಡೆ ಎಸ್.ವರಲಕ್ಷ್ಮಿ ಬಹಿರಂಗ ಸಭೆಯುನ್ನುದ್ದೇಶಿಸಿ ಭಾಷಣ ಮಡಲಿದ್ದಾರೆ. ರ‍್ಯಾಲಿಗೆ ಸಮವಸ್ತ್ರದಾರಿಗಳ ದಳ ಸಜ್ಜಾಗುತ್ತಿದೆಯಲ್ಲದೆ, ಕೆಂಪು ಪಂಚೆಯ ಸಮವಸ್ತ್ರದಾರಿಗಳ ಪಡೆಗಳ ಪಥ ಸಂಚಲನವೂ ವಿಶಿಷ್ಟವಾಗಲಿದೆ; ಕೇರಳದ ಬ್ಯಾಂಡ್‌ಸೆಟ್ ವಾದ್ಯ ನುಡಿಸಲಿದೆ. ಸಮ್ಮೇಳನ ಸಭಾಂಗಣದಿಂದ ಸ್ವರಾಜ್ಯ ಮೈದಾನದವರೆಗೂ ಮತ್ತು ಮೂಡಬಿದ್ರಿ ನಗರವೂ ಕೆಂಬಣ್ಣದಿಂದ ರಾರಾಜಿಸಲು ಸಿದ್ಧತೆಗಳು ನಡೆದಿವೆ.

ರ‍್ಯಾಲಿಯಲ್ಲಿ ಭಾಗವಹಿಸುವ ಎಲ್ಲರಿಗೆ ಮಧ್ಯಾಹ್ನದ ಭೋಜನ ವ್ಯವಸ್ಥೆ ಮಾಡುವುದಲ್ಲದೆ, ಮುಂದಿನ 3 ದಿನಗಳ ಕಾಲ ಪ್ರತಿನಿಧಿಗಳಿಗೆ ಆಹಾರ ಹಾಗೂ ವಸತಿ ವ್ಯವಸ್ಥೆಯ ಸಿದ್ಧತೆಗಳಾಗಿವೆ. ಮೂಡಬಿದ್ರಿಯ ಮಹಿಳೆಯರೇ ಹೆಚ್ಚಾಗಿರುವ ಅಲ್ಲಿನ ಕಾರ್ಯಕರ್ತರಂತೂ ಮನೆ ಮನೆಗೆ ಹೋಗಿ ಸ್ವಾಗತ ಸಮಿತಿಗಾಗಿ ಸಮ್ಮೇಳನದ ನಿಧಿ ಸಂಗ್ರಹಿಸುತ್ತಿದ್ದಾರೆ. ಮಂಗಳೂರಿನಿಂದ ಸ್ವಯಂ ಸೇವಕರು ವಾರದ ಮೊದಲೇ ಮೂಡಬಿದ್ರಿಯಲ್ಲಿ ಸಜ್ಜುಗೊಳಿಸಲು ತೆರಳಲಿದ್ದಾರೆ. ಜನವರಿ 3,4,5 ರಂದು ಪ್ರತಿನಿಧಿ ಸಮ್ಮೇಳನ ನಡೆಯುವಲ್ಲಿ ಒಂದು ಬಿಡುವು ಮಾಡಿಕೊಂಡು ಸೀತಾರಾಮ ಯೆಚೂರಿಯವರಿಂದ ಉಪನ್ಯಾಸ ಮತ್ತು 3 ಪುಸ್ತಕಗಳ ಬಿಡುಗಡೆ ನಡೆಯಲಿದೆ, ಈ ಪುಸ್ತಕಗಳ ಕುರಿತಾಗಿ ಅದೇ ವೇದಿಕೆಯಲ್ಲಿ ಪರಿಚಯವನ್ನೂ ನಡೆಸಲಾಗುವುದು.

ಮೂಡಬಿದ್ರಿಯಲ್ಲಿ ಪಕ್ಷದ ಕಾರ್ಯಕರ್ತರು ಕಡಿಮೆ. ಆದರೆ ಅವರಲ್ಲಿರುವ ಉತ್ಸಾಹ ದೊಡ್ಡದು. ಈಗ 8 ತಿಂಗಳ ಹಿಂದೆ ಬೀಡಿ ಕಾರ್ಮಿಕರ ರಾಜ್ಯ ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಿದ ಹೆಮ್ಮೆ ಅವರದ್ದಾಗಿದೆ. ಅವರಿಗೆ ಸರ್ವ ಸಹಾಯ ಮಾಡಲು ಮಂಗಳೂರು, ಗುರುಪುರ, ಉಳ್ಳಾಲಗಳ ಕಾರ್ಯಕರ್ತರು ಸಮ್ಮೇಳನದುದ್ದಕ್ಕೂ ಜೊತೆಗಿರುತ್ತಾರೆ. ●

ಸಿಪಿಐ(ಎಂ) ದ.ಕ.ಜಿಲ್ಲಾ ಸಮ್ಮೇಳನ ಕರಾವಳಿಯ ಸೌಹಾರ್ದ ಕಾಪಾಡಲು ನಿರ್ಣಯ

ಕೋಮುವಾದಿ ಶಕ್ತಿಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದ ಮೂರು ದಶಕಗಳಿಗೂ ಮೀರಿ ಜನರನ್ನು ಮತೀಯವಾಗಿ ವಿಭಜಿಸುತ್ತಿದ್ದು, ಕೇಂದ್ರದಲ್ಲಿ ನರೇಂದ್ರ ಮೋದಿ ಸರಕಾರ ಆಡಳಿತಕ್ಕೆ ಬಂದ ಮೂರುವರೆ ವರ್ಷಗಳಲ್ಲಿ ಈ ಮತೀಯ ಧ್ರುವೀಕರಣ ಹೆಚ್ಚಾಗಿದೆ. ಇನ್ನೊಂದು ಮತೀಯರನ್ನು ಆಯ್ಕೆ ಮಾಡಿ ದಾಳಿ ಹಲ್ಲೆಗೆ ಒಳಪಡಿಸಲಾಗಿದೆ. ಶತಮಾನಗಳ ಕಾಲ ಇದ್ದ ಮತೀಯ ಸೌಹಾರ್ದ ಕೆಟ್ಟು ಹೋಗಿದೆ. ಕರಾವಳಿಯ ಮಟ್ಟಿಗೆ ಜನತೆಯ ಮಧ್ಯೆ ವಿಭಜನೆಯನ್ನು ತಪ್ಪಿಸಿ, ಸೌಹಾರ್ದವನ್ನು ಕಾಪಾಡಿ ಬಲಪಡಿಸುವುದೇ ಜಿಲ್ಲೆಯ ಪ್ರಜ್ಞಾವಂತ ನಾಗರಿಕರ ಹಾಗೂ ಸೆಕ್ಯುಲಾರ್ ಪಕ್ಷಗಳ ಜವಾಬ್ದಾರಿಯಾಗಿದೆ. ಹಿಂದುತ್ವ ಕೋಮುವಾದದ ಜೊತೆಗೆ ಅಲ್ಪಸಂಖ್ಯಾತ ಕೋಮುವಾದವೂ ಬೆಳೆದು ಸಂಘರ್ಷದ ಸ್ಥಿತಿಗೆ ಬಂದಿದ್ದು, ಇದನ್ನು ತಪ್ಪಿಸಲು ಎಲ್ಲ ಸೌಹಾರ್ದ ಪ್ರೇಮೀ ವ್ಯಕ್ತಿಗಳು, ಸಂಘಟನೆಗಳು ಒಗ್ಗೂಡಿ ಕಾರ್ಯಾಚರಿಸಬೇಕೆಂದೂ, ಕೋಮುವಾದಿ ಶಕ್ತಿಗಳನ್ನು ರಾಜಕೀಯವಾಗಿಯೂ ಸೋಲಿಸಬೇಕೆಂದು ಮಂಗಳೂರಿನ ಬೋಳಾರದಲ್ಲಿ ಡಿಸೆಂಬರ್ 17, 18 ರಂದು ಸೇರಿದ ಸಿಪಿಐ(ಎಂ) ದ.ಕ.ಜಿಲ್ಲಾ ಸಮ್ಮೇಳನ ನಿರ್ಣಯ ಕೈಗೊಂಡಿರುತ್ತದೆ.

ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಕರ್ನಾಟಕ ರಾಜ್ಯ ಸಂಬಂಧಿಸಿ, ಎರಡು ದಿನಗಳ ಕಾಲ ನಡೆದ ಸಮ್ಮೇಳನವು, ಹಲವಾರು ವಿಷಯುಗಳ ಬಗ್ಗೆ ಚರ್ಚಿಸಿ ನಿರ್ಣಯ ಕೈಗೊಂಡಿರುತ್ತದೆ. ರಾಜ್ಯದಲ್ಲಿ ಬರುವ ಜನವರಿ 30 ರಂದು "ಸೌಹಾರ್ದಕ್ಕಾಗಿ ಕರ್ನಾಟಕ" ಸಂಘಟನೆ ಹಮ್ಮಿಕೊಂಡಿರುವ ಮಾನವ ಸರಪಳಿಗಳನ್ನು ಯಶಸ್ವಿಗೊಳಿಸಬೇಕೆಂದೂ ಕರೆ ಕೊಟ್ಟಿದೆ.

ದ.ಕ.ಜಿಲ್ಲೆಯು ಅಭಿವೃದ್ಧಿ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಜಿಲ್ಲೆಯ ದೀರ್ಘಕಾಲೀನ ಅಭಿವೃದ್ಧಿ ದೃಷ್ಟಿಯಿಂದ ಪ್ರಮುಖ ವಿಷಯಗಳ ಕುರಿತು ಚರ್ಚಿಸಿ ನಿರ್ಣಯ ಕೈಗೊಂಡಿದೆ. ಕೇಂದ್ರ ಸರಕಾರವು ಅನುಷ್ಠಾನಗೊಳಿಸಲು ಮುಂದಾಗಿರುವ ಡಾ.ಕಸ್ತೂರಿ ರಂಗನ್ ವರದಿಯು, ಪಶ್ಚಿಮ ಘಟ್ಟಗಳ 'ಪರಿಸರ ಸೂಕ್ಷ್ಮ ವಲಯ'ದ ಹೆಸರಿನಲ್ಲಿ ಅಲ್ಲಿ ವಾಸಿಸುವ ಜನತೆಗೆ ಬೇಕಾದ ಶಾಲೆ, ಆಸ್ಪತ್ರೆ, ರಸ್ತೆ ಇತ್ಯಾದಿಗಳ ರಚನೆಗೆ ತಡೆಯೊಡ್ಡುತ್ತದೆಂದೂ, ಜಲ್ಲಿ ಮರಳುಗಾರಿಕೆಯಂಥ ಕಿರು ನಿರ್ಮಾಣ ಕಾಮಗಾರಿಗಳಿಗೆ ಅವಕಾಶವಿಲ್ಲದಂತೆ ಮಾಡಲಿದೆಯೆಂದೂ, ರಾಸಾಯನಿಕ ಗೊಬ್ಬರ ನಿಷೇಧ ಕಾರಣ ನೀಡಿ ಆ ಪ್ರದೇಶದ ಅಡಿಕೆ, ತೆಂಗು, ರಬ್ಬರು, ಕೇಶ್ಯೂ ಬೆಳೆ ವಿಸ್ತರಣೆಗೆ ತಡೆಯುಂಟು ಮಾಡುತ್ತದೆಂದು ಸಮ್ಮೇಳನ ಚರ್ಚಿಸಿದೆ. ಈ ಹಿನ್ನೆಲೆಯಲ್ಲಿ ಕಸ್ತೂರಿ ರಂಗನ್ ವರದಿಯನ್ನು ಜಾರಿ ಮಾಡಬಾರದೆಂದು ಜಿಲ್ಲಾ ಸಮ್ಮೇಳನ ಆಗ್ರಹಿಸಿದೆ.

ಜಿಲ್ಲೆಯಾದ್ಯಂತ ಇಪ್ಪತ್ತು ವರ್ಷ ಮೀರಿ ಬಗರ್ ಹುಕುಂ ಕೃಷಿ ಮಾಡುವವರೂ, ಅರಣ್ಯ ಪ್ರದೇಶದಲ್ಲಿ ಕೃಷಿ ಮಾಡುವವರೂ, ಸರಕಾರೀ ಜಮೀನಿನಲ್ಲಿ ಮನೆ ಕಟ್ಟಿ ವಾಸವಾಗಿರುವವರೂ ಲಕ್ಷಾಂತರ ಸಂಖ್ಯೆಯಲ್ಲಿದ್ದು, ಅವರ ಸ್ವಾಧೀನವಿರುವ ಜಮೀನಿನ ಹಕ್ಕುಪತ್ರ ಅದನ್ನು ಅಭಿವೃದ್ಧಿ ಪಡಿಸಿದ ಜನರಿಗೇ ನೀಡಬೇಕೆಂದೂ ಸಮ್ಮೇಳನ ಆಗ್ರಹಿಸಿದೆ.

ಗುರುಪುರ ಬಳಿ ನದಿಗೆ ಕಟ್ಟಿರುವ ಬ್ರಿಟಿಷ್ ಕಾಲದ ಸೇತುವೆ ಶಿಥಿಲವಾಗಿದ್ದು ಕುಸಿದು ಬೀಳುವ ಪರಿಸ್ಥಿತಿಯಲ್ಲಿರುವುದರಿಂದ ಶೀಘ್ರವೇ ನಗರದಲ್ಲಿ ಬದಲಿ ಸೇತುವೆ ನಿರ್ಮಿಸಬೇಕೆಂದು ಒತ್ತಾಯಿಸಿ ನಿರ್ಣಯಿಸಿದೆ. ಮಂಗಳೂರು ನಗರದಲ್ಲಿ ಸಂಚಾರ ದಟ್ಟಣೆ ಹೆಚ್ಚಾಗಿದ್ದು, ವಾಹನಗಳೂ, ಪ್ರಯಾಣಿಕರು ಅನಗತ್ಯ ನಗರ ಕೇಂದ್ರಕ್ಕೆ ಬಾರದಂತೆ ರಿಂಗ್‌ರೋಡ್, ಮೆಟ್ರೋ ರೈಲು ನಿರ್ಮಿಸಬೇಕೆಂದೂ, ತೊಕ್ಕೊಟ್ಟು, ತೋಕೂರುಗಳಲ್ಲಿ ರೈಲ್ವೇ ನಿಲ್ದಾಣವನ್ನು ಜನಬಳಕೆಗೆ ಒದಗಿಸಬೇಕೆಂದೂ ಆಗ್ರಹಿಸಿದೆ. ಮಂಗಳೂರಿನಲ್ಲಿ ಕೇರಳ ಮುಂಬಯಿ ಹೆದ್ದಾರಿಯಲ್ಲಿ ಹಲವಾರು ಅಪಘಾತಗಳಿಗೆ ಕಾರಣವಾಗಿರುವ ನಂತೂರು ಜಂಕ್ಷನ್‌ನಲ್ಲಿ ಓವರ್‌ಬ್ರಿಡ್ಜ್ ತುರ್ತಾಗಿ ಸಿದ್ಧಪಡಿಸಬೇಕೆಂದೂ, ನಿಧಾನಗತಿಯಲ್ಲಿ ಸಾಗಿರುವ ಪಂಪ್‌ವೆಲ್ ಹಾಗೂ ತೊಕ್ಕೊಟುಗಳ ಓವರ್‌ಬ್ರಿಡ್ಜ್ ನಿರ್ಮಾಣ ಕಾಮಗಾರಿ ಚುರುಕುಗೊಳಿಸಬೇಕೆಂದೂ ಆಗ್ರಹಿಸಲಾಗಿದೆ.

ಜಿಲ್ಲೆಯಲ್ಲಿ ತೆಂಗಿನ ಮರಗಳಿಗೆ ಹೊಸದಾಗಿ ನುಸಿಬಾಧೆ ತಗಲಿ ತೆಂಗು ತೋಟಗಳೇ ನಾಶವಾಗುವ ಪರಿಸ್ಥಿತಿಯಲ್ಲಿದ್ದು, ತೆಂಗಿಗೆ ಬಾಧಿಸಿರುವ ರೋಗಕ್ಕೆ ಉಪಶಮನಕಾರಿ ಔಷಧಿಗಳನ್ನು ವ್ಯಾಪಕವಾಗಿ ಪೂರೈಕೆ ಮಾಡಬೇಕೆಂದೂ ಆಗ್ರಹಿಸಿದೆ. ಬೇಸಗೆಯಲ್ಲಿ ದ.ಕ.ಜಿಲ್ಲೆಯ ಕುಡಿಯುವ ನೀರಿನ ಬರವನ್ನು ಅನುಭವಿಸುತ್ತಿದ್ದು, ಅದರ ನಿವಾರಣೆಗಾಗಿ ಸರಕಾರವು ಪ್ರಸ್ತಾಪಿಸಿರುವ ಪಶ್ಚಿಮ ವಾಹಿನಿ ಯೋಜನೆಯನ್ನು ಶೀಘ್ರವೇ ಅನುಷ್ಠಾನಗೊಳಿಸಬೇಕೆಂದೂ ಸಮ್ಮೇಳನ ಒತ್ತಾಯಿಸಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಖಾಸಗಿ ವೈದ್ಯಕೀಯ ಆಸ್ಪತ್ರೆಗಳು ಕಾಲೇಜುಗಳು ಸಾಕಷ್ಟಿವೆ. ಆದರೆ ಒಂದೇ ಒಂದು ಸರಕಾರಿ ವೈದ್ಯಕೀಯ ಕಾಲೇಜು ಇರುವುದಿಲ್ಲ. ಜಿಲ್ಲೆಯಲ್ಲಿ ಸರಕಾರೀ ವೈದ್ಯಕೀಯ ಕಾಲೇಜು ಆರಂಭಿಸಲು ಒತ್ತಾಯಿಸಿ ಸಮ್ಮೇಳನ ನಿರ್ಣಯ ಕೈಗೊಂಡಿದೆ. ಜಿಲ್ಲೆಯಲ್ಲಿ ಪದವಿ ಶಿಕ್ಷಣ, ತಾಂತ್ರಿಕ ಶಿಕ್ಷಣ ಇತ್ಯಾದಿ ಆಧುನಿಕ ಶಿಕ್ಷಣವನ್ನು ಪಡೆದಿರುವ ಯುವಕ ಯುವತಿಯರಿಗೆ ಸಾಕಷ್ಟು ಉದ್ಯೋಗಾವಕಾಶ ನೀಡುವ ಉದ್ಯಮ ಸಂಸ್ಥೆಗಳು ಜಿಲ್ಲೆಯಲ್ಲಿಲ್ಲ. ಇದರಿಂದಾಗಿ ಬೇರೆ ನಗರಗಳಿಗೆ ವಲಸೆ ಹೋಗುತ್ತಿದ್ದಾರೆ. ನಿರುದ್ಯೋಗಿ ಯುವಕ ಯುವತಿಯರಿಗೆ ಉದ್ಯೋಗವನ್ನು ಸೃಷ್ಟಿ ಮಾಡುವ ಕೇಂದ್ರ, ರಾಜ್ಯ ಸರಕಾರಗಳು ಕ್ರಮ ಕೈಗೊಳ್ಳಬೇಕೆಂದು ಸಮ್ಮೇಳನ ಒತ್ತಾಯಿಸಿ ನಿರ್ಣಯ ಕೈಗೊಂಡಿದೆ. ದ.ಕ.ಜಿಲ್ಲೆಯ ಯುವಜನರನ್ನು ಮಾದಕ ದ್ರವ್ಯ ಮಾರಾಟ, ಸಾಗಾಟ ಮತ್ತು ಸೇವನೆ ಜಾಲವು ಸೆಳೆದು ಹಾದಿಗೆಡಿಸುತ್ತಿದ್ದು, ಈ ಮಾದಕ ದ್ರವ್ಯ ಮಾರಾಟ ಜಾಲವನ್ನು ಹದ್ದುಬಸ್ತಿನಲ್ಲಿಡಬೇಕೆಂದು ಈ ಸಮ್ಮೇಳನ ಒತ್ತಾಯಿಸಿದೆ.

ದ.ಕ.ಜಿಲ್ಲೆಯಲ್ಲಿ ಕೆಲವೆಡೆ ಇನ್ನೂ ಸರಕಾರಿ ಬಸ್ಸು ಸಂಚಾರ ಇಲ್ಲ. ಖಾಸಗಿ ಮಾಲಕರದ್ದೇ ಕಾರುಬಾರಿದೆ. ಅಂಥ ಪ್ರದೇಶಕ್ಕೆ ಸರಕಾರಿ ಬಸ್ಸು ಸಾರಿಗೆ ಒದಗಿಸಬೇಕೆಂದು ಸಮ್ಮೇಳನ ಒತ್ತಾಯಿಸಿದೆ. ಮಂಗಳೂರಿನಿಂದ ಬೆಂಗಳೂರಿಗೆ ರೈಲು ಸಂಚಾರಗಳು ಬಹಳಷ್ಟಿದ್ದು, ಈಗ ಶ್ರಮಣಬೆಳಗೊಳದಿಂದ ಸಮೀಪ ರಸ್ತೆ ಆಗಿದ್ದು, ಆ ದಾರಿಯಾಗಿ ರಾತ್ರಿ ಸಾಗುವ ರೈಲು ವ್ಯವಸ್ಥೆ ಮಾಡಬೇಕೆಂದೂ ಸಮ್ಮೇಳನ ಒತ್ತಾಯಿಸಿದೆ.

ತಿರುವನಂತಪುರ ಚಿತ್ರೋತ್ಸವದ ಪ್ರಾರಂಭಿಕ ಚಿತ್ರ

‘ಇನ್ಸಲ್ಟ್’ ಮತ್ತು ಮಾನವೀಯತೆ

ವ್ಯಕ್ತಿಗಳನ್ನು ಗುರಿಯಾಗಿರಿಸಿಕೊಂಡ ದ್ವೇಷ, ಅಸಹನೆ ಹಾಗೂ ನಿರ್ದಯತೆಗಳು ಸಾಮಾಜಿಕ ಸಂಬಂಧ–ಜಾಲದಲ್ಲಿನ ಮಾನವೀಯತೆಯನ್ನೇ ಛಿದ್ರಮಾಡಿ ಜನಸಾಮಾನ್ಯರ ದೈನಂದಿನ ಕಷ್ಟಗಳನ್ನು ಹೆಚ್ಚುಮಾಡುತ್ತವೆಯೇ ಹೊರತು ಪರಿಹರಿಸುವುದಿಲ್ಲ. ಬದಲು ಮೂಲ ಹಿಂಸೆಯನ್ನು, ಜೀವವಿರೋಧೀ ಧೋರಣೆಗಳನ್ನು ಸಾಂಸ್ಥೀಕರಿಸಿಕೊಂಡ ಶೋಷಕರ ದಮನಕಾರೀ ರಾಜಕೀಯ ವ್ಯವಸ್ಥೆಯನ್ನು ನಮ್ಮಿಂದ ಮರೆಮಾಚಲು ಅವು ಸಹಾಯ ಮಾಡುತ್ತವೆ. ಹಿಂಸೆಗಳಿಂದ ನರಳುವ ಜನಸಮುದಾಯಕ್ಕೆ ‘ಇನ್ಸಲ್ಟ್’ ತನ್ನ ವಿಶಾಲ ಮಾನವೀಯ ಧೋರಣೆಗಳಿಗಾಗಿ ಮುಖ್ಯವಾಗುತ್ತದೆ.

ಅತಿಥಿ ಅಂಕಣ



ಪ್ರೊ. ವಿ.ಎನ್. ಲಕ್ಷ್ಮೀನಾರಾಯಣ


2017 ರ ತಿರುವನಂತಪುರ ಅಂತಾರಾಷ್ಟ್ರೀಯ ಚಲನ ಚಿತ್ರೋತ್ಸವದ ಪ್ರಾರಂಭಿಕ ಚಿತ್ರವಾಗಿ ಪ್ರದರ್ಶನಗೊಂಡು ವಿಶೇಷವಾಗಿ ಗಮನಸೆಳೆದ ಚಿತ್ರ ಲೆಬನಾನ್ ನ ಝಿಯಾದ್ ದೌವೇರಿ ನಿರ್ದೇಶನದ “ದಿ ಇನ್ಸಲ್ಟ್”. ಜನರ ಅಂತರಾಳದಲ್ಲಿ ಸಿಡಿಮದ್ದಿನಂತೆ ಹುದುಗಿಟ್ಟಿಸಿಕೊಂಡ ರಾಜಕೀಯ ಅನ್ಯಾಯದ ನೋವು, ಜನಾಂಗೀಯ ಮತ್ತು ಮತೀಯ ದ್ವೇಷ, ಹೇಗೆ ವ್ಯಕ್ತಿಗಳ ನಡುವಿನ ಕ್ಷುಲ್ಲಕ ಘರ್ಷಣೆಗಳಲ್ಲಿ ಸಿಡಿದು ಕಾನೂನಿನ ಹೊರಾಟದ ಸ್ವರೂಪವನ್ನು ಪಡೆದುಕೊಳ್ಳುತ್ತವೆ ಎಂಬುದು, ಮತ್ತು ಇವುಗಳ ಬಗೆಗಿನ ಸಹಾನುಕಂಪದ ಅರಿವು ಹೇಗೆ ಸೌಹಾರ್ದಯುತ ಸಹಬಾಳ್ವೆಗೆ ದಾರಿಮಾಡಿಕೊಡಬಲ್ಲವು ಎಂಬುದು ‘ಇನ್ಸಲ್ಟ್’ ಚಿತ್ರದ ವಸ್ತು.

ಕ್ಷಮೆಯಾಚನೆಗಾಗಿ ಪಟ್ಟು

ಲೆಬನಾನ್ ನ ಒಂದು ಭಾಗದಲ್ಲಿ, ಕಾರ್ ಮೆಕ್ಯಾನಿಕ್ ಆಗಿ ಜೀವನ ನಡೆಸುವ ಟೋನಿ ಹನ್ನಾ ಪ್ಯಾಲಸ್ತೀನ್ ನಿರಾಶ್ರಿತರ ಮಧ್ಯೆ ವಾಸಿಸುವ ಬಲಪಂಥೀಯ ಕ್ರಿಶ್ಚಿಯನ್. ಕಟ್ಟಡ ಕೆಲಸಗಾರನಾದ ಯಾಸಿರ್ ಸಜ್ಜನನಾದ ಒಬ್ಬ ಪ್ಯಾಲಸ್ತೀನ್ ಬಡ ನಿರಾಶ್ರಿತ. ಟೋನಿಯ ಮಹಡಿ ಮನೆಯಲ್ಲಿ ಅನಧಿಕೃತವಾಗಿ ಹಾಕಿದ ಪೈಪಿನಿಂದ ಹೊರಕ್ಕೆ ಬೀಳುವ ನೀರು ಕೆಳಗೆ ಕಾಮಗಾರಿಯಲ್ಲಿ ನಿರತನಾದ ಯಾಸಿರ್ ನ ಮೇಲೆ ಬೀಳುವುದೇ ನೆಪವಾಗಿ ಅವರಿಬ್ಬರ ನಡುವೆ ಮಾತಿನ ಚಕಮಕಿ ಪ್ರಾರಂಭವಾಗುತ್ತದೆ. ಟೋನಿಯ ಕಟ್ಟಡದ ಹೊರಭಾಗದಲ್ಲಿನ ಅನಧಿಕೃತ ಪೈಪನ್ನು ಯಾಸಿರ್ ಕಿತ್ತುಹಾಕುತ್ತಾನೆ. ಟೋನಿ, ಅದಕ್ಕಾಗಿ, ಯಾಸಿರ್ ತನ್ನ ಕ್ಷಮೆಯಾಚಿಸಬೇಕೆಂದು ಆಗ್ರಹಿಸುತ್ತಾನೆ. ಟೋನಿ ಹಾಕಿಕೊಂಡ ಪೈಪ್ ಅನಧಿಕೃತವೆಂಬ ವಾದಕ್ಕೆ, ಟೋನಿಯ ಕೋಪವನ್ನು ಶಮನಗೊಳಿಸಲು, ಗುತ್ತಿಗೆದಾರ ಅವನ ಹೆಂಡತಿಗೆ ತಲುಪಿಸುವ ‘ಕ್ಷಮಾಯಾಚನೆಯ ಸಿಹಿ’ಗೂ ಟೋನಿ ಜಗ್ಗುವುದಿಲ್ಲ. ಯಾಸಿರ್ ಕ್ಷಮೆಯಾಚಿಸುವ ಬದಲು ಟೋನಿಯ ಕಟ್ಟಡದ ಮುರಿದ ಪೈಪನ್ನು ಸರಿಮಾಡಿಕೊಡುತ್ತಾನೆ. ಅದಕ್ಕೊಪ್ಪದ ಟೋನಿ ಕ್ಷಮೆಯಾಚನೆಗಾಗಿ ಪಟ್ಟುಹಿಡಿಯುತ್ತಾನೆ.

ತನ್ನನ್ನು ನೇಮಿಸಿಕೊಂಡ ಗುತ್ತಿಗೆದಾರನ ಒತ್ತಾಯಕ್ಕೆ ಮಣಿದು ಕ್ಷಮೆಕೇಳಲು ಯಾಸಿರ್ ಟೋನಿಯ ಬಳಿಗೆ ಹೋದಾಗ ಲೆಬನಾನ್ ನ ರಾಜಕೀಯ ಧುರೀಣ, ಪ್ಯಾಲಸ್ತೀನ್ ನಿರಾಶ್ರಿತರ ಕಡು ವಿರೋಧಿ ಬಾಚೀರ್ ಗಿಮಾಯೆಲ್, ಪ್ಯಾಲಸ್ತೀನ್ ನಿರಾಶ್ರಿತರು ಲೆಬನಾನ್ ಬಿಟ್ಟು ತೊಲಗಬೇಕೆಂದು ಮಾಡುವ ದ್ವೇಷ ಭಾಷಣ ಅವನ ಗ್ಯಾರೇಜಿನ ಟಿವಿಯಲ್ಲಿ ಪ್ರಸಾರವಾಗುತ್ತಿರುತ್ತದೆ. ಟೋನಿಯ ಕ್ಷಮೆ ಯಾಚಿಸಬೇಕೆಂದು ಬಂದ ಯಾಸಿರ್ ಗೆ ಮಾತು ಹೊರಡುವುದಿಲ್ಲ. ಕ್ರುದ್ಧನಾದ ಟೋನಿ “ಏರಿಯಲ್ ಷರಾನ್ ನಿಮ್ಮನ್ನೆಲಾ ಪೂರ್ತಿ ನಿರ್ನಾಮ ಮಾಡಿದ್ದರೇ ಚೆನ್ನಾಗಿತ್ತು” ಎಂದು ಚೀರುತ್ತಾನೆ. (ಏರಿಯಲ್ ಷರಾನ್ ಸೇನಾಧಿಕಾರಿಯಾಗಿ, ಇಸ್ರೇಲ್ ನ ಪ್ರಧಾನಿಯಾಗಿ ಪ್ಯಾಲಸ್ತೀನ್ ಹೋರಾಟವನ್ನು ಹತ್ತಿಕ್ಕುವಲ್ಲಿ ಪ್ರಧಾನಪಾತ್ರ ವಹಿಸಿದ ನಿರ್ದಯಿ). ಯಹೂದಿ ಮತ್ತು ಕ್ರೈಸ್ತ ಮತೀಯ ವಿರೋಧಿಗಳಿಂದ ಪ್ಯಾಲಸ್ತೀನಿಯರಿಗಾದ ಅನ್ಯಾಯಗಳ ಸಂತ್ರಸ್ತ ಯಾಸಿರ್. ಟೋನಿಯ ನಿಂದನೆಯಿಂದ ತೀವ್ರ ಅವಮಾನಿತನಾಗಿ, ಏಕಾಏಕಿ ಟೋನಿಯ ಮೇಲೆರಗಿ ಅವನ ಪಕ್ಕೆಗೆ ಗುದ್ದುತ್ತಾನೆ. ಟೋನಿಯ ಪಕ್ಕೆಯ ಮೂಳೆಗಳು ಮುರಿಯುತ್ತವೆ.

ಅನ್ಯ ಧರ್ಮೀಯರಾದರೂ ಸ್ಥಳೀಯರಾಗಿ ಒಟ್ಟಿಗೆ ಬದುಕುವ ಇಬ್ಬರು ವ್ಯಕ್ತಿಗಳ ನಡುವಿನ ಘರ್ಷಣೆ ಎರಡು ಮತೀಯ ಮತ್ತು ರಾಜಕೀಯ ಪಂಗಡಗಳ ನಡುವಿನ ಮೇಲಾಟವಾಗಿ ಪರಿವರ್ತಿತವಾಗುತ್ತದೆ. ದೈಹಿಕ ಹಲ್ಲೆಗೊಳಗಾದ ಟೋನಿ ನ್ಯಾಯಕ್ಕಾಗಿ ಕಾನೂನಿನ ಕ್ರಮ ಕೈಗೊಳ್ಳಬೇಕೆಂದು ಅವನ ಬೆಂಬಲಿಗರು ಒತ್ತಾಯಿಸುತ್ತಾರೆ. ಪ್ಯಾಲಸ್ತೀನಿಯರ ಪರವಾದ ಸ್ಥಳೀಯ ನ್ಯಾಯಾಲಯದಿಂದ ನ್ಯಾಯ ಸಿಗಲಾರದೆಂಬ ಆತಂಕವೂ ಅಲ್ಲಿ ಎದುರಾಗುತ್ತದೆ. ಟೋನಿ ತನ್ನ ಗುಂಪಿನ ಒತ್ತಾಯ–ಆತಂಕಗಳನ್ನು ಗಣಿಸುವುದಿಲ್ಲ. ಬದಲು ಯಾಸಿರ್ ತನ್ನ ಕ್ಷಮೆ ಯಾಚಿಸಬೇಕೆಂಬುದಷ್ಟೇ ಅವನ ವೈಯಕ್ತಿಕ ಆಗ್ರಹ.



ಯಾಸಿರ್ ಕ್ಷಮೆಯಾಚಿಸಲು ಒಪ್ಪದೆ, ಬಡವನಾದರೂ ತಾನು ಒಳಪಡಬಹುದಾದ ಶಿಕ್ಷೆ–ದಂಡಗಳನ್ನು ಲೆಕ್ಕಿಸದೆ ಕಾನೂನಿನ ಕ್ರಮವನ್ನು ಎದುರಿಸಲು ಸಿದ್ಧನಾಗುತ್ತಾನೆ.

ಕೋರ್ಟಿನಲ್ಲಿ “ಅವಮಾನ–ಕ್ಷಮೆ”

ಹೀಗೆ ಎರಡು ಧರ್ಮಗಳಿಗೆ ಸೇರಿದ, ಇಬ್ಬರು ಸಹಜೀವಿಗಳ ನಡುವಿನ ಘರ್ಷಣೆಗಳು ವ್ಯಕ್ತಿಮಟ್ಟದಲ್ಲೇ ಬಗೆಹರಿಯದೆ, ರಾಜಕೀಯ ಮತ್ತು ಜನಾಂಗೀಯ ಮೂಲದ ಅವಮಾನ–ದೈಹಿಕ ಆಕ್ರಮಣ–ಕ್ಷಮಾಯಾಚನೆ ಮತ್ತು ಪರಿಹಾರ ಕೋರಿಕೆಯ ಪ್ರಶ್ನೆಗಳಾಗಿ ಸ್ಥಳೀಯ ನ್ಯಾಯಾಲಯದ ಅಖಾಡದಲ್ಲಿ ತೀರ್ಮಾನವಾಗಬೇಕಾದ ಅನಿವಾರ್ಯತೆ ಏರ್ಪಡುತ್ತದೆ. ಪ್ಯಾಲಸ್ತೀನ್ ನಿರಾಶ್ರಿತರ ಪರವಾದ ಪೂರ್ವಗ್ರಹವನ್ನು ಹೊಂದಿದ ನ್ಯಾಯಾಧೀಶರ ಮುಂದೆ ವಿಚಾರಣೆ ನಡೆಯುತ್ತದೆ. ಯಾಸಿರ್ ಟೋನಿಯ ಪಕ್ಕೆಲಬು ಮುರಿಯುವಂತೆ ಹೊಡೆದದ್ದು ಹೌದೆಂದು ಒಪ್ಪಿಕೊಳ್ಳುತ್ತಾನೆ. ಆದರೆ ಅದಕ್ಕೆ ಟೋನಿ ಆಡಿದ ಜನಾಂಗ ನಿಂದನೆಯ ಮಾತುಗಳು ಕಾರಣ ಎಂದೂ ನ್ಯಾಯಾಲಯಕ್ಕೆ ತಿಳಿಸುತ್ತಾನೆ. ಆದರೆ ಅವನನ್ನು ದೈಹಿಕ ಹಲ್ಲೆಗೆ ಪ್ರಚೋದಿಸಿದ ಆ ನಿಂದನೆಯ ಮಾತುಗಳು ಯಾವುವು ಎಂಬುದನ್ನು ಮಾತ್ರ ನ್ಯಾಯಾಧೀಶರು ಎಷ್ಟೇ ಒತ್ತಾಯಿಸಿದರೂ ಹೇಳುವುದಿಲ್ಲ. ದೂರಿನ ಬಗ್ಗೆ ಪರ–ವಿರೋಧದ ವಿವರಗಳು ಪೂರ್ಣ ಲಭ್ಯವಿಲ್ಲದ ಕಾರಣವನ್ನೊಡ್ಡಿ ನ್ಯಾಯಾಧೀಶರು ಯಾಸಿರ್ ನನ್ನು ಖುಲಾಸೆಗೊಳಿಸುತ್ತಾರೆ. ಪ್ಯಾಲಸ್ತೀನರ ಪರವಾಗಿ ಪೂರ್ವಗ್ರಹ ಹೊಂದಿದ ನ್ಯಾಯಾಧೀಶರಿಂದ ತನಗೆ ನ್ಯಾಯ ಸಿಗುವುದು ಸಾಧ್ಯವಿಲ್ಲವೆಂದು ಟೋನಿ ಆಪಾದಿಸಿ ಹೊರನಡೆಯುತ್ತಾನೆ. ಮುರಿದ ಪಕ್ಕೆಲುಬಿನ ಟೋನಿ ವೈದ್ಯರ ಎಚ್ಚರಿಕೆಗೆ ವಿರುದ್ಧವಾಗಿ ಭಾರ ಎತ್ತಲು ಹೋಗಿ ಗ್ಯಾರೇಜಿನಲ್ಲಿ ಕುಸಿದು ಬೀಳುತ್ತಾನೆ. ಆಘಾತದಿಂದಾಗಿ ಹೆಂಡತಿಯ ಹೊಟ್ಟೆಯಲ್ಲಿರುವ ಮಗುವಿಗೆ ತೊಂದರೆಯಾಗುತ್ತದೆ. ಹೀಗೆ ಇಬ್ಬರು ವ್ಯಕ್ತಿಗಳ ನಡುವೆ ಇದ್ದ ವಿವಾದ ಈಗ ಮತ್ತಷ್ಟು ಗಂಭೀರವಾಗಿ ಮತೀಯ ಮತ್ತು ರಾಜಕೀಯ ಬಣ್ಣ ಪಡೆದು ಎರಡು ಜನಾಂಗಗಳ ನಡುವಿನ ವಿವಾದವಾಗಿ ಮಾರ್ಪಡುತ್ತದೆ. ಎರಡೂ ಕಡೆಗಳಿಂದ ಅವರವರ ಗುಂಪಿನ ಪರವಾಗಿ ವಾದಿಸಲು ವಕೀಲರು ಮುಂದೆ ಬರುತ್ತಾರೆ. ವಿವಾದಗಳನ್ನು ನಗದೀಕರಿಸಿಕೊಳ್ಳುವಲ್ಲಿ ನಿಷ್ಣಾತನಾದ, ಕ್ರೈಸ್ತ ಪಂಗಡಗಳ ಪರವಾದ ಹಿರಿಯ ವಕೀಲ ವಾಜ್ದಿ ವೆಹಬೆಯನ್ನು ಟೋನಿ ತನ್ನ ಪರವಾಗಿ ವಾದಿಸಲು ನೇಮಿಸಿಕೊಳ್ಳುತ್ತಾನೆ. ವೆಹಬೆಯ ಮಗಳು, ನ್ಯಾಯನಿಷ್ಠಳಾದ ನಾದಿನ್ ಬಡ ಆರೋಪಿ ಯಾಸಿರ್ ನ ಪರವಾಗಿ ಉಚಿತವಾಗಿ ವಕಾಲತ್ತು ವಹಿಸುತ್ತಾಳೆ.

ಆತ್ಮರಕ್ಷಣೆ–ಆಕ್ರಮಣ

ಎಂಥದೇ ಅವಮಾನಕರ ಮಾತುಗಳನ್ನು ಆಡಿದರೂ ಅದಕ್ಕೆ ಪ್ರತಿಯಾಗಿ ದೈಹಿಕ ಹಲ್ಲೆ ತಪ್ಪೆಂದು, ಆದ್ದರಿಂದ ಯಾಸಿರ್ ಶಿಕ್ಷಾರ್ಹನೆಂದು ವೆಹಬೆ ವಾದಿಸಿತ್ತಾನೆ. ಅಲ್ಲದೆ ಟೋನಿಯ ಹೆಂಡತಿಗಾದ ಮಾನಸಿಕ ಘಾಸಿ ಮತ್ತು ಸಮಯದಲ್ಲಿ ಆಕೆಯ ಹೊಟ್ಟೆಯೊಳಗಿದ್ದ ಮಗುವಿಗಾದ ತೊಂದರೆಗೂ ಯಾಸಿರ್ ಹೊಣೆಗಾರನಾಗಿ ಪರಿಹಾರ ಕೊಡಬೇಕಾಗುತ್ತದೆ ಎಂದೂ ಟೋನಿಯ ನಿಷ್ಣಾತ ವಕೀಲ ವಾದ ಮಂಡಿಸುತ್ತಾನೆ. ದೈಹಿಕ ನೋವಿಗಿಂತ ಹೆಚ್ಚಿನ ತೀವ್ರಮಾನಸಿಕ ನೋವನ್ನು ಉಂಟುಮಾಡುವ ಮಾತುಗಳಿಂದ ಪ್ರಚೋದನೆಗೆ ಒಳಗಾಗಿ ಎದುರಾಳಿಯ ಮೇಲೆ ಮಾಡಿದ ದೈಹಿಕ ಹಲ್ಲೆಯೂ ಸಹ ಆತ್ಮರಕ್ಷಣೆಯ ವ್ಯಾಪ್ತಿಯೊಳಕ್ಕೇ ಬರುವುದರಿಂದ ವಾಸಿರ್ ಟೋನಿಯ ಪಕ್ಕೆಲುಬು ಮುರಿದಿದ್ದು ಶಿಕ್ಷಾರ್ಹವಲ್ಲದ ಆತ್ಮರಕ್ಷಣೆಯೆಂದು ವಾಸಿರ್ ನ ಯುವ ವಕೀಲೆ ಪ್ರತಿವಾದ ಮಂಡಿಸುತ್ತಾಳೆ. ವೈದ್ಯರ ಎಚ್ಚರಿಕೆಯನ್ನು ನಿರ್ಲಕ್ಷಿಸಿ ತೊಂದರೆ ತಂದುಕೊಂಡು ಹೆಂಡತಿಗಾದ ಮಾನಸಿಕ ಆಘಾತ ಮತ್ತು ಹೊಟ್ಟೆಯಲ್ಲಿದ್ದ ಮಗುವಿಗಾದ ತೊಂದರೆಗೆ ಟೋನಿ ಕಾರಣನೇ ಹೊರತು ಯಾಸಿರ್ ಅಲ್ಲ ಎಂದು ನಾಡಿನ್ ಪ್ರತಿವಾದಿಸುತ್ತಾಳೆ. ಜೊತೆಗೆ ಇಸ್ರೇಲ್ ಆಕ್ರಮಣದ ವಿರುದ್ಧದ ಪ್ಯಾಲಸ್ತೀನರ ಹೋರಾಟದಲ್ಲಿ ಯಹೂದಿ–ಅರಬ್ಬರು–ಕ್ರೈಸ್ತರ ನಡುವಿನ ದ್ವೇಷ–ವೈಷಮ್ಯಗಳು, ದಮನ–ಅನ್ಯಾಯಗಳು ವಕೀಲರ ವಾದ–ಪ್ರತಿವಾದಗಳಿಗೆ ಆಧಾರವಾಗುತ್ತವೆ.

ಆದರೆ ಲೆಬನಾನ್ ನಲ್ಲಿ ಅರಬ್ಬರೊಟ್ಟಿಗೆ ಬದುಕುವ ಕ್ರೈಸ್ತ ಟೋನಿ ಪ್ಯಾಲಸ್ತೀನರ ವಿರುದ್ಧ ಯಹೂದಿ ಜನರಲ್ ಆಡಿದ ನಿಂದನೆಯ ಮಾತುಗಳನ್ನು ಯಾಕೆ ತನ್ನ ಸಹಜೀವಿ, ಸಜ್ಜನ ಯಾಸಿರ್ ನ ವಿರುದ್ಧ ಬಳಸಿದ ಎಂಬ ಪ್ರಶ್ನೆ ಮುನ್ನೆಲೆಗೆ ಬರುತ್ತದೆ. ಅಲ್ಲದೆ ಯಾಸಿರ್ ನನ್ನು ಅವನು ಅರಬ್ಬನೆಂಬ ಕಾರಣಕ್ಕಾಗಿಯಾದರೂ ದ್ವೇಷಿಸದ ಟೋನಿ ಅವನ ವಿರುದ್ಧ ಯಹೂದಿಯ ನಿಂದನೆಯ ಮಾತನ್ನು ಬಳಸಿದಾಗ ಯಾಕೆ ರೊಚ್ಚಿಗೆದ್ದ ಎಂಬ ಪ್ರಶ್ನೆ ಏಳುವುದರಿಂದ ಯಾಸಿರ್ ನ ದೈಹಿಕ ಆಕ್ರಮಣಕ್ಕೆ ಆತ್ಮರಕ್ಷಣೆಯ ಸಮರ್ಥನೆ ಸಿಗುವುದಿಲ್ಲ ಎಂದು ಟೋನಿಯ ವಕೀಲ ವಾದಿಸುತ್ತಾನೆ. ಇಸ್ರೇಲಿ ಆಕ್ರಮಣದ ವಿರುದ್ಧದ ಪ್ಯಾಲಸ್ತೀನಿಯರ ಹೋರಾಟದಲ್ಲಿ ಪ್ಯಾಲಸ್ತೀನ್ ಕ್ರೈಸ್ತರು ಯಹೂದಿಗಳ ಪರವಾಗಿದ್ದದ್ದರಿಂದ ಯಾಸಿರ್ ಯಹೂದಿಯ ಅವಮಾನಕರ ಮಾತುಗಳನ್ನು ಟೋನಿ ಯಾಸಿರ್ ನ ವಿರುದ್ಧ ಬಳಸಿದಾಗ ಯಾಸಿರ್ ರೊಚ್ಚಿಗೆದ್ದು ದೈಹಿಕ ಹಲ್ಲೆ ಮಾಡುವುದು ಅತ್ಯಂತ ಸಂಭವನೀಯ ಭಾವೋದ್ರೇಕದ ಕ್ರಮ, ಮತ್ತು ಹಾಗೆ ಪ್ರಚೋದಿಸಿದ್ದು ಟೋನಿಯೇ ಆದ್ದರಿಂದ ಆ ಪ್ರಚೋದನೆಯ ಪರಿಣಾಮಕ್ಕೂ ಅವನೇ ಹೊಣೆ, ಯಾಸಿರ್ ಅಲ್ಲ ಎಂದು ಯಾಸಿರ್ ನ ವಕೀಲೆ ಪ್ರತಿವಾದ ಮಂಡಿಸುತ್ತಾಳೆ.

ಇಬ್ಬರೂ ಸಂತ್ರಸ್ತರೇ

ಈ ವಾದಸರಣಿಗಳಿಗೊಂದು ತಿರುವು ಕೊಡುವಂತೆ, ಒಂದು ಬಗೆಯ ಫ್ಲಾಷ್ ಬ್ಯಾಕ್ ನಂತೆ, ಟೋನಿಯ ವಕೀಲ, ಟೋನಿ ಚಿಕ್ಕವನಾಗಿದ್ದಾಗ ಅವನಿದ್ದ ಪ್ರದೇಶದ ಮೇಲೆ ಪ್ಯಾಲಸ್ತೀನ್ ಹೋರಾಟಗಾರರು ದಾಳಿ ಮಾಡಿದಾಗ ಸಂಭವಿಸಿದ ಜನರ ಸಾವು–ನೋವುಗಳನ್ನು ಚಿತ್ರೀಕರಿಸಿದ ಫುಟೇಜನ್ನು ನ್ಯಾಯಾಲಯದಲ್ಲಿ ಪ್ರದರ್ಶಿಸುತ್ತಾನೆ. ಅದರಲ್ಲಿ ಎಳೆಯ ಟೋನಿ ತನ್ನವರೆಲ್ಲರನ್ನು ಕಳೆದುಕೊಂಡ ಸಂತ್ರಸ್ತನ ಸ್ಥಾನದಲ್ಲಿರುತ್ತಾನೆ. ಇಸ್ರೇಲ್–ಪ್ಯಾಲಸ್ತೀನ್ ನಡುವಿನ ದೌರ್ಜನ್ಯದ ರಾಜಕೀಯದಲ್ಲಿ ನರಳುವವರು ಪ್ಯಾಲಸ್ತೀನಿ ಅರಬ್ಬರೇ ಆಗಿರಬೇಕೆಂದಿಲ್ಲ, ಪ್ಯಾಲಸ್ತೀನಿ ಕ್ರಿಶ್ಚಿಯನ್ನರೂ ಆಗಿರುವುದು ಸಾಧ್ಯ. ಇನ್ನೂ ವಿಸ್ತರಿಸಿ ಹೇಳಿದರೆ ಯಾವುದೇ ಅಮಾಯಕ ಮಾನವಜೀವಿ ಯುದ್ಧ–ಹಿಂಸೆ–ಪ್ರತಿಹಿಂಸೆಗಳ ಬಲಿಪಶುವಾಗಬಹುದು. ಟೋನಿಯ ಎಳೆಮನಸ್ಸಿಗಾದ ತೀವ್ರಘಾಸಿ ಸಿಡಿಮದ್ದಿನಂತೆ ಅವನಲ್ಲಿ ಹುದುಗಿದ್ದು, ತನ್ನ ಸಹಜೀವಿ ಯಾಸಿರ್, ಅದು ಎಷ್ಟೇ ಕ್ಷುಲ್ಲಕವಾದದ್ದಾದರೂ, ತನ್ನ ಇಷ್ಟಕ್ಕೆ ವಿರುದ್ಧವಾದ ಕೃತ್ಯವೆಸಗಿ, ಎದುರುನಿಂತಾಗ ಆ ಕೃತ್ಯವೇ ಯಾಸಿರ್ ನ ಇಡೀ ಜನಾಂಗವನ್ನೇ ಅವಮಾನಿಸುವ ನಿಂದನೆಯಾಗಿ ಸ್ಫೋಟಿಸುತ್ತದೆ.

ಅವನು, ಪ್ಯಾಲಸ್ತೀನ್ ಅರಬ್ಬನಾದ ಸಜ್ಜನ ಯಾಸಿರ್ ನಿಂದ ನಿರೀಕ್ಷಿಸುವ ಕ್ಷಮಾಯಾಚನೆ ಮೇಲುನೋಟಕ್ಕೆ ಪೈಪನ್ನು ಒಡೆದದ್ದಕ್ಕಾಗಿ ಎಂದು ತೋರಿದರೂ ನಿಜವಾಗಿ ಅದು ಪ್ಯಾಲಸ್ತೀನ್ ಹೋರಾಟಗಾರರು ಎಳೆಯನಾಗಿದ್ದಾಗ ತನ್ನನ್ನು ಸಂತ್ರಸ್ತನನ್ನಾಗಿಸಿದ ಕೃತ್ಯಕ್ಕಾಗಿ. ಯಾಸಿರ್ ಟೋನಿಯ ಮೇಲೆ ಮಾಡುವ ದೈಹಿಕ ಹಲ್ಲೆಗೆ ಕಾರಣ ತನ್ನನ್ನು ಅವನು ವೈಯಕ್ತಿಕವಾಗಿ ಅವಮಾನಿಸಿದ ಎಂಬುದಾಗದೆ, ತಾನು ನಿರಾಶ್ರಿತ ಬಡ ಪ್ಯಾಲಸ್ತೀನಿಯನಾಗಿ ಬದುಕಲು ಕಾರಣರಾದ ಯಹೂದಿಗಳ ದೌರ್ಜನ್ಯದ ವಿರುದ್ಧದ ಸಾಮುದಾಯಿಕ ಕೋಪ. ಪ್ಯಾಲಸ್ತೀನಿಯರನ್ನು ದ್ವೇಷಿಸುವ ಯಹೂದಿ ಸೇನಾಧಿಕಾರಿಯ ಹೆಸರಿನಲ್ಲಿ ತೀವ್ರ ನಿಂದನೆಯ ಮಾತುಗಳನ್ನು ಟೋನಿ ತನ್ನ ವಿರುದ್ಧ ಬಳಸಿದಾಗ ಆ ಕೋಪ ಸಿಡಿಯುತ್ತದೆ. ಎಂದಿಗೂ ಮಾಯದ ಹುಣ್ಣಿನಂತೆ ಅವನಲ್ಲಿ ಸದಾ ಜೀವಂತವಾಗಿರುವ ನೋವಿನ ಸ್ಫೋಟಕ ಶಕ್ತಿ ಟೋನಿಯ ಪಕ್ಕೆಲುಬುಗಳನ್ನು ಮುರಿಯುವ ಅವನ ಮುಷ್ಟಿಗೆ ಹರಿಯುತ್ತದೆ.

ಚಿತ್ರದ ಕೊನೆಯ ತುಣುಕಿನಲ್ಲಿ ಯಾಸಿರ್ ಟೋನಿಯ ಬಳಿಗೆ ಹೋಗುತ್ತಾನೆ. ಅವನು ಏನನ್ನಾದರೂ ಹೇಳುವ ಮೊದಲೇ ಟೋನಿ ಅವನ ಪಕ್ಕೆಗೆ ಗುದ್ದುತ್ತಾನೆ. ವಾಸಿರ್ ನೋವು ತಿನ್ನುತ್ತಲೇ ‘ನನ್ನನ್ನು ಕ್ಷಮಿಸು’ ಎನ್ನುತ್ತಾನೆ.

ಚಾರಿತ್ರಿಕ ಹಿನ್ನೆಲೆ

1948 ರ ಮುಂಚೆ ಮೂಲ ಪ್ಯಾಲಸ್ತೀನ್ ಪ್ರದೇಶದಲ್ಲಿ ವಾಸಿಸುತ್ತಿದ್ದ ಜನರ ಪೈಕಿ ಅರಬ್ಬರು ಮತ್ತು ಕ್ರೈಸ್ತರೇ ಹೆಚ್ಚಿನ ಸಂಖ್ಯೆಯಲ್ಲಿದ್ದರು. ಕೇವಲ ಬೆರಳೆಣಿಕೆಯ ಯಹೂದಿಗಳು ಮಾತ್ರ ಅವರ ಮಧ್ಯೆ ವಾಸಿಸಿಸುತ್ತಿದ್ದರು. ಇಸ್ರೇಲ್ ಎಂಬ ರಾಜ್ಯವಾಗಲಿ, ಪ್ರದೇಶವಾಗಲಿ ಆಗ ಅಸ್ತಿತ್ವದಲ್ಲೇ ಇರಲಿಲ್ಲ. ವಿವಿಧ ರಾಷ್ಟ್ರಗಳ ನಾಗರಿಕರಾಗಿ ವಿಶ್ವದಾದ್ಯಂತ ಜೀವಿಸುತ್ತಿದ್ದ ಯಹೂದಿಗಳು ತಮಗೊಂದು ರಾಷ್ಟ್ರ ಬೇಕೆಂಬ ಕನಸಿನೊಂದಿಗೆ ಪ್ಯಾಲಸ್ತೀನ್ ಪ್ರದೇಶದಲ್ಲಿ ವಾಸಿಸುತ್ತಿದ್ದ ಅರಬ್ಬರನ್ನು ಬಲವಂತವಾಗಿ ಒಕ್ಕಲೆಬ್ಬಿಸಿ ಅವರ ಭೂಮಿಯನ್ನು ಮಿಲಿಟರಿ ಬಲದಿಂದ ಕಸಿದುಕೊಂಡಿದ್ದು ಈಗ ಚರಿತ್ರೆಯಾಗಿದೆ. ಬ್ರಿಟನ್ನಿನ ಕುಟಿಲ ರಾಜಕೀಯದಿಂದ ಪ್ರಾರಂಭವಾಗಿ ಅಮೆರಿಕದ ಎಡಪಂಥ–ವಿರೋಧೀ, ಬಂಡವಾಳ

ಪುಟ 15 ಕ್ಕೆ

ಎರಡಂಕಿಗಿಳಿಸಿದರೂ ಅಧಿಕಾರ ಉಳಿಸಿದ 'ಮೋದಿ ಮ್ಯಾಜಿಕ್'

22 ಕ್ಷೇತ್ರಗಳನ್ನು, ಅಂದರೆ 12% ಸೀಟುಗಳನ್ನು ಕಳಕೊಂಡರೂ 'ಮೋದಿ ಮ್ಯಾಜಿಕ್' ಗುಜರಾತಿನಲ್ಲಿ ಬಿಜೆಪಿ ಅಧಿಕಾರ ಮುಂದುವರೆಸುವಲ್ಲಿ ಯಶಸ್ವಿಯಾಗಿದೆ. ಆದರೆ ಈ ಪ್ರಕ್ರಿಯೆಯಲ್ಲಿ 'ಗುಜರಾತ್ ಮಾದರಿ' ಎಂಬುದೇನಾದರೂ ಇದ್ದರೆ ಅದು ವಿಫಲವಾಗಿದೆ ಎಂಬುದನ್ನು ಈ ಚುನಾವಣೆ ಸಾರಿ ಹೇಳುತ್ತಿದೆ. ನವ-ಉದಾರವಾದೀ ದಾರಿಯನ್ನು ಖಡಾಖಂಡಿತವಾಗಿ ತ್ಯಜಿಸುವ ಒಂದು ಪರ್ಯಾಯ ಧೋರಣೆಗಳ ದಿಕ್ಕಿನತ್ತ ತಿರುಗುವುದೇ ನಮ್ಮ ಮುಂದಿರುವ ಏಕೈಕ ದಾರಿ ಎಂಬುದನ್ನೂ ಮತ್ತೊಮ್ಮೆ ಮನವರಿಕೆ ಮಾಡಿಕೊಟ್ಟಿದೆ.



ಗುಜರಾತಿನಲ್ಲಿ ಬಿಜೆಪಿ ಸತತ ಆರನೇ ಬಾರಿಗೆ ಅಧಿಕಾರಕ್ಕೆ ಬಂದಿದೆ. 'ಇದೊಂದು ಮಹಾನ್ ವಿಜಯ' ಎನ್ನುವಾಗ ಪ್ರಧಾನಿಗಳು ಗದ್ಗದಿತರಾಗಿದ್ದರಂತೆ. ಇದು ಮಹಾ ಸಾಧನೆ ಎಂದ ಅವರು ಇದೇನೂ ಸುಲಭದ್ದಾಗಿರಲಿಲ್ಲ ಎಂದೂ ಹೇಳಿದರಂತೆ. ಹೌದು, ಕಳೆದ ಮೂರೂವರೆ ವರ್ಷಗಳ ಆಗು-ಹೋಗುಗಳನ್ನು ಪರಿಗಣಿಸದಿದ್ದರೆ, ಇದೊಂದು ದೊಡ್ಡ ಸಾಧನೆಯೇ ಸರಿ.

ಆದರೆ ಈ ಮೂರೂವರೆ ವರ್ಷಗಳ ಬೆಳವಣಿಗೆಗಳನ್ನು ಪರಿಗಣಿಸದಿರಲು ಸಾಧ್ಯವೇ?

* ಕಳೆದ ಎರಡು ದಶಕಗಳಲ್ಲಿ ಮೊದಲ ಬಾರಿಗೆ ಅದರ ಸೀಟುಗಳ ಸಂಖ್ಯೆ ಎರಡಂಕಿಗೆ ಇಳಿದಿದೆ ಎಂದು ಗಮನಿಸದಿರಲು ಸಾಧ್ಯವೇ?

* ಈ ರಾಜ್ಯದ ಮುಖ್ಯಮಂತ್ರಿ ದೇಶದ ಪ್ರಧಾನ ಮಂತ್ರಿಯಾದ ಮೇಲೆ ಮತದಾನದ ಪ್ರಮಾಣ 72%ದಿಂದ 68%ಕ್ಕೆ ಇಳಿದಿರುವುದೇಕೆ, ಅದೂ 30 ಸಂಪುಟ ಮಂತ್ರಿಗಳು, ಇತರ ಏಳು ರಾಜ್ಯಗಳ ಬಿಜೆಪಿ ಮುಖ್ಯಮಂತ್ರಿಗಳು ಪ್ರಚಾರಕ್ಕೆ ಬಂದರೂ ಕೂಡ; ಮತದಾನ ಮಾಡಿದವರಲ್ಲೂ 'ನೋಟ' ಅಂದರೆ 'ಯಾವ ಅಭ್ಯರ್ಥಿಯೂ ಯೋಗ್ಯರಲ್ಲ' ಎಂದು 5..5ಲಕ್ಷ ಮಂದಿ (29 ಕ್ಷೇತ್ರಗಳಲ್ಲಿ ಗೆದ್ದ ಅಭ್ಯರ್ಥಿಗಳ ವಿಜಯದ ಅಂತರಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ 'ನೋಟ'ಗಳು ದಾಖಲಾಗಿವೆಯಂತೆ) ಹೇಳಿರುವುದೇಕೆ, ಜನಗಳಿಗೆ 'ಅಚ್ಛೇದಿನ್'ಗಳ ಬಗ್ಗೆ ಭ್ರಮನಿರಸನ ಆರಂಭವಾಗಿದೆ ಎಂಬುದೇ ಇದರರ್ಥ ಎಂದು ಅನಿಸದಿರಲು ಸಾಧ್ಯವೇ?

ಚುನಾವಣಾ ಪ್ರಚಾರದ ಕೊನೆಯ ಹಂತದಲ್ಲಿ ಕಳೆದ ವಾರ ಪ್ರಕಾಶ್ ಕಾರಟ್ ಅವರು ಹೇಳಿದಂತೆ "ನಿಂದನಾತ್ಮಕ ಕೋಮುವಾದಿ ಅಬ್ಬರ ಮತ್ತು ಮುಸ್ಲಿಮರ ಮೇಲೆ ಗುರಿಯಿಟ್ಟ ಭೀತಿಕೋರತನ ಅತ್ಯಂತ ತುಚ್ಛ ಮಟ್ಟವನ್ನು ತಲುಪಿದ್ದನ್ನು ಕಂಡಿದ್ದೇವೆ.."

ಮಾತ್ರವಲ್ಲ, ಇದಕ್ಕೆ ಮೊದಲು 20,000 ಕೋಟಿ ರೂ.ಗಳಿಗೂ ಹೆಚ್ಚು ಮೌಲ್ಯದ ಕಾರ್ಯಕ್ರಮಗಳು, ಯೋಜನೆಗಳು, ಜಿಎಸ್‌ಟಿ ರಿಯಾಯ್ತಿ, ವಿನಾಯ್ತಿಗಳು- ಈ ಆರ್ಥಿಕ ಓಲೈಕೆಗಳು ಸಾಲದೆಂದು ಧಾರ್ಮಿಕ ಓಲೈಕೆಗಳು, ರಾಷ್ಟ್ರವಾದದ ಅಬ್ಬರದ ಮಾತುಗಳು ಯಾವವೂ ಅವರನ್ನು 100ರ ಮಟ್ಟದ ವರೆಗೂ ಒಯ್ಯಲಿಲ್ಲ, ಬಿಜೆಪಿ ಅಧ್ಯಕ್ಷರ 150+ ಮಿಶನ್‌ನ ಹತ್ತಿರವೂ ಸುಳಿಯದೆ ಎರಡಂಕಿಗೆ ಸೀಮಿತಗೊಂಡಿದ್ದೇಕೆ? ಈ ಪ್ರಶ್ನೆಯನ್ನು ತನ್ನ ಸಮರ್ಥಕರೇ ಕೇಳಬಹುದು ಎಂದೇ ಪ್ರಧಾನಿಗಳು "ಪ್ರತಿಪಕ್ಷಗಳ ಸುಳ್ಳು ಮಾಹಿತಿಗಳ ಪ್ರಚಾರದಿಂದ ಬಾಧಿತರಾಗಬೇಡಿ" ಎಂದು ಸಮಾಧಾನ ಹೇಳಿದ್ದಾರೆ.

ಕಳೆದ ಚುನಾವಣೆಗಳಲ್ಲಿ ಅವರಿಗೆ 115 ಸೀಟುಗಳು ಸಿಕ್ಕಿದ್ದವು. ನಂತರ ನಡೆದ ಉಪಚುನಾವಣೆಗಳಲ್ಲಿ ಮತ್ತೆ 6 ಸ್ಥಾನಗಳು ಸಿಕ್ಕಿದ್ದವು. ಅಂದರೆ ಅವರ ಸೀಟುಗಳ ಸಂಖ್ಯೆ ವಾಸ್ತವವಾಗಿ 121 ರಿಂದ 99ಕ್ಕೆ ಇಳಿಯಿತು. ಕಾಂಗ್ರೆಸಿನ ಬಲ 55ರಿಂದ 77ಕ್ಕೇರಿತು. ಜತೆಗೆ ಅದು ಬೆಂಬಲಿಸಿದ ಜಿಗ್ನೇಶ್ ಮೆವಾಣಿ ಸೇರಿದಂತೆ ಇತರ ಮೂವರು ಕೂಡ ಗೆದ್ದಿದ್ದಾರೆ.

2014 ಲೋಕಸಭಾ ಚುನಾವಣೆಗಳಿಗೆ ಹೋಲಿಸಿದರಂತೂ ಈ ಚುನಾವಣೆಗಳಲ್ಲಿ ಬಿಜೆಪಿಯ ಪತನದ ಪ್ರಮಾಣ ಇನ್ನೂ ಅಗಾಧ. ಅದರಲ್ಲಿ ಬಿಜೆಪಿ ಎಲ್ಲ 26 ಲೋಕಸಭಾ ಸೀಟುಗಳನ್ನು ಗೆದ್ದುಕೊಂಡಿತ್ತು. 165 ವಿಧಾನಸಭಾ ಕ್ಷೇತ್ರಗಳಲ್ಲಿ ಅದು ಮುನ್ನಡೆ ಹೊಂದಿತ್ತು.

ಸಾಲದ್ದಕ್ಕೆ ಪ್ರಧಾನ ಮಂತ್ರಿಗಳ ಸ್ವಂತ ಪಟ್ಟಣವಾದ ವಾಡ್ನಗರವನ್ನು ಒಳಗೊಂಡ ಉಂಝಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಬಿಜೆಪಿ ಅಭ್ಯರ್ಥಿಯನ್ನು 19,124 ಮತಗಳಿಂದ ಸೋಲಿಸಿದ್ದಾರೆ. ಐವರು ಮಂತ್ರಿಗಳು ಸೋತಿದ್ದಾರೆ. ಕಾಂಗ್ರೆಸಿನಿಂದ ಪಕ್ಷಾಂತರ ಮಾಡಿದ 12 ಮಂದಿಯಲ್ಲಿ ಇಬ್ಬರು ಮಾತ್ರ ಆರಿಸಿ ಬಂದಿದ್ದಾರೆ.

ಅಂದರೆ ಈ ಮೂರು ವರ್ಷಗಳಲ್ಲಿ ಕೇಂದ್ರ ಸರಕಾರದಲ್ಲಿ ಅವರ 'ಸಾಧನೆ'ಗಳು ಏನೇನೂ ಪ್ರಭಾವ ಬೀರಿಲ್ಲ ಎಂದೇ ಅರ್ಥವಲ್ಲವಲ್ಲವೇ?

ನಿಜ, ಅವರ ಬೆನ್ನೆಲುಬಾಗಿದ್ದ ಪಾಟೀದಾರರು ಈ ಬಾರಿ ತಿರುಗಿ ಬಿದ್ದರು. ಅವರ ನಡುವೆ ಮಾತ್ರವಲ್ಲ, ದಲಿತರ ನಡುವೆಯೂ, ಒಬಿಸಿಗಳ ನಡುವೆಯೂ ಮೂಡಿ ಬಂದ ಯುವ ಮುಖಂಡತ್ವದ ಸವಾಲನ್ನು ಎದುರಿಸಬೇಕಾಗಿ ಬಂದಿತು. ಅದನ್ನು ಕಾಂಗ್ರೆಸ್ ಬಳಸಿಕೊಂಡಿತು. ಇಂತಹ ಸವಾಲುಗಳ ನಡುವೆಯೂ ಆರನೇ ಬಾರಿಗೆ ಅಧಿಕಾರ ಪಡೆಯುವುದು ಅವರ ಕಾರ್ಪೊರೇಟ್ ಮಾಧ್ಯಮ ಮಿತ್ರರು(ಒಬ್ಬ ಪತ್ರಕರ್ತರೇ ಹೇಳಿದಂತೆ ಮಾಧ್ಯಮ ಕರಸೇವಕರು) ಬಾಯಿ ಬಡಿದುಕೊಳ್ಳುತ್ತಿರುವಂತೆ ಮಹಾಸಾಧನೆ ಅಲ್ಲವೇ?

ಆದರೆ, **ಪಾಟೀದಾರರು, ದಲಿತರು ಮತ್ತು ಒಬಿಸಿಗಳ ಯುವ ಮುಖಂಡರ ಸವಾಲುಗಳೇ ಮೋದಿಯವರ ನೇತೃತ್ವದಲ್ಲಿ ಬಿಜೆಪಿಯ ಆಳ್ವಿಕೆಯ ವಿಫಲತೆಯ ದ್ಯೋತಕಗಳಲ್ಲವೇ ಎಂದು ಈ ಮಾಧ್ಯಮ ಕರಸೇವಕರಿಗೆ ಪ್ರತಿಪ್ರಶ್ನೆ ಹಾಕಬೇಕಾಗುತ್ತದೆ.**

ಹೌದು, 'ಗುಜರಾತ್ ಮಾದರಿ' ಎಂಬುದೇನಾದರೂ ಇದ್ದರೆ ಅದು ವಿಫಲವಾಗಿದೆ ಎಂಬುದನ್ನು ಈ ಚುನಾವಣೆ ಸಾರಿ ಹೇಳುತ್ತಿದೆ ಎಂಬುದೇ ಇದರ ಒಂದು ಮಹತ್ವ. ವಾಸ್ತವವಾಗಿ ಇದು ಕಾರ್ಮಿಕರ, ರೈತರ ಹಿತಗಳನ್ನು ಬಲಿಗೊಟ್ಟು ದೊಡ್ಡ ಕಾರ್ಪೊರೇಟ್‌ಗಳ ಲಾಭಗಳನ್ನು ಹೆಚ್ಚಿಸುವ ಮಾದರಿ. ಕೃಷಿ ಬಿಕ್ಕಟ್ಟನ್ನು ಉಲ್ಬಣಗೊಳಿಸಿದ, ಕಾರ್ಮಿಕರ ಆದಾಯಗಳನ್ನು ಕೆಳಮಟ್ಟದಲ್ಲಿಟ್ಟ ಮಾದರಿ. ದೊಡ್ಡ ಬಂಡವಾಳಿಗರಿಗೆ, ಅದರಲ್ಲೂ ಅದಾಣಿ, ಅಂಬಾನಿಗಳಂತಹ ಅವರ ಚಮಚಾ ಬಂಡವಾಳಿಗರಿಗೆ ಅಪಾರ ಲಾಭ ಕೊಡಿಸಲು ಶಿಕ್ಷಣ, ಆರೋಗ್ಯ ಮತ್ತು ಸಾಮಾಜಿಕ ಕಲ್ಯಾಣದ ಕಾರ್ಯಕ್ರಮಗಳನ್ನು ಕಡಿತ ಮಾಡಿದ ಮಾದರಿ.

ಇದೂ ಸಾಲದೆಂಬಂತೆ, ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ಒತ್ತಡದಿಂದ ಕಿರು ಉತ್ಪಾದಕರನ್ನು, ಅನೌಪಚಾರಿಕ ಎಂದು ಹೇಳುವ, ಬಹುಪಾಲು ಉದ್ಯೋಗಗಳನ್ನು ನಿರ್ಮಿಸುವ ವಲಯವನ್ನು ಸದೆ ಬಡಿಯುವ ಕ್ರಮಗಳಾದ ನೋಟುರದ್ಧತಿ ಮತ್ತು ಜಿಎಸ್‌ಟಿಗಳ ಫಲವೇ ಈ ಮೂರು ವಿಭಾಗಗಳಿಂದ ಯುವ ಮುಖಂಡತ್ವದ ಸವಾಲುಗಳು ಬರಲು ಕಾರಣ ಎಂಬುದನ್ನು ಮಾಧ್ಯಮ ಕರಸೇವಕರುಗಳ ಗಮನಕ್ಕೆ ಬರದಿದ್ದರೆ ಅದರಲ್ಲಿ ಆಶ್ಚರ್ಯವೇನೂ ಇಲ್ಲ.

ನವ-ಉದಾರೀಕರಣ ಧೋರಣೆಗಳಿಂದಾಗಿ ಕೃಷಿರಂಗದ ಮೇಲೆ, ಸಣ್ಣ-ಮಧ್ಯಮ ಉದ್ದಿಮೆಗಳ ಮೇಲೆ ಉಂಟಾದ ದುಷ್ಪರಿಣಾಮಗಳೇ ಈ ಹಿಂದೆ ಮೀಸಲಾತಿಯನ್ನು ವಿರೋಧಿಸಿದ್ದ ಪಾಟೀದಾರ ಸಮುದಾಯದ ಹೊಸ ಪೀಳಿಗೆಯ ಯುವಜನರು ಮೀಸಲಾತಿಯ ಬೇಡಿಕೆಯನ್ನು ಮುಂದಿಡಲು ಕಾರಣವಾದರೆ, ಬಿಜೆಪಿಯನ್ನು ಗುಜರಾತಿನಲ್ಲೂ, ದೇಶದಲ್ಲೂ ಅಧಿಕಾರಕ್ಕೆ ತಂದ ಹಿಂದುತ್ವ ಎಂಬುದು ದಲಿತರ ಮೇಲೆ ಹಿಂಸಾಚಾರಕ್ಕೆ ನೀಡಿದ ಮೌನ ಉತ್ತೇಜನೆ ದಲಿತ ಯುವಜನರ ನಡುವೆ ಪ್ರತಿಕ್ರಿಯೆಗೂ ಕಾರಣವಾಯಿತು, ಉದ್ಯೋಗರಹಿತ ಬೆಳವಣಿಗೆ ಯಿಂದ ಒಬಿಸಿ ಯುವಜನರ ನಡುವೆಯೂ ಅಸಂತೃಪ್ತಿ ಉಲ್ಬಣಗೊಳ್ಳಲು ಕಾರಣವಾಯಿತು ಎಂಬುದು ಕಳೆದ ಕೆಲವು ವರ್ಷಗಳ ಬೆಳವಣಿಗೆಗಳನ್ನು ಗಮನಿಸಿದವರಿಗೆ ಕಾಣದಿರದು.

ನಿಜ, ಇವೆಲ್ಲ ಈ ಹಿಂದಿನ ಸರಕಾರಗಳು, ಮುಖ್ಯವಾಗಿ ಕಾಂಗ್ರೆಸ್ ನೇತೃತ್ವದ ಸರಕಾರಗಳು ಅನುಸರಿಸಿದ ಧೋರಣೆಗಳ ಫಲವೇ. ಆದರೂ 'ಕಾಂಗ್ರೆಸ್‌ಮುಕ್ತ' ಭಾರತ ಕಟ್ಟುತ್ತೇವೆಂದವರು ಅವರ ಧೋರಣೆಗಳನ್ನೇ ಇನ್ನಷ್ಟು ರಭಸದಿಂದ ಯಾವುದೇ ಲಂಗುಲಗಾಮಿಲ್ಲದೆ ಮುಂದೊಯ್ಯ

ಪುಟ 12-13 ನೋಡಿ

ಗುಜರಾತ್ ವಿಧಾನಸಭೆ: ಸೀಟುಗಳು-ಮತಗಳಿಕೆ

	2012		2017	
	ಸೀಟುಗಳು	ಮತಗಳಿಕೆ	ಸೀಟುಗಳು	ಮತಗಳಿಕೆ
ಬಿಜೆಪಿ	115	48%	99	49%
ಕಾಂಗ್ರೆಸ್+	61	39%	80	43%
ಇತರರು	3	13%	2	8%

ಬಿಜೆಪಿ 16 ಸಿಟುಗಳನ್ನು ಕಳಕೊಂಡರೂ ಅದರ ಮತಗಳಿಕೆ 1% ಏರಿದೆ. ಇದಕ್ಕೆ ಒಂದು ಕಾರಣ ಇತರರ ಮತಗಳಿಕೆ 5% ಇಳಿದಿರುವುದು. ಇದರಲ್ಲಿ 1% ಬಿಜೆಪಿಗೆ ಹೋದರೆ, 4% ಕಾಂಗ್ರೆಸಿಗೆ ಹೋಗಿದೆ. ಇನ್ನೊಂದು ಕಾರಣ ಬಿಜೆಪಿ ನಗರಪ್ರದೇಶಗಳಲ್ಲಿ ಹೆಚ್ಚಿನ ಸೀಟುಗಳನ್ನು ಪಡೆದ ಬಿಜೆಪಿಯ ಸರಾಸರಿ ಗೆಲುವಿನ ಅಂತರ 29,970, ಆದರೆ ಕಾಂಗ್ರೆಸಿನದ್ದು 13,354. ಎರಡು ಪಕ್ಷಗಳ ನಡುವೆ ಮತಗಳ ಧ್ರುವೀಕರಣ ಮತ್ತು ಒಂದು ವಿಶ್ವಸನೀಯ ಪರ್ಯಾಯ ಕೊಡುವಲ್ಲಿ ಕಾಂಗ್ರೆಸಿನ ವಿಫಲತೆ ಮತದಾರರ ವ್ಯಾಪಕ ಅಸಂತೃಪ್ತಿಯ ನಡುವೆಯೂ ಬಿಜೆಪಿಯ ಮತಗಳಿಕೆಯಲ್ಲಿ 1% ಹೆಚ್ಚಳದ ವೈರುಧ್ಯ ಎನಿಸುವ ಸಂಗತಿಗೆ ಕಾರಣವೇ ಹೊರತು ಬಿಜೆಪಿಯ 'ಜನಪ್ರಿಯತೆ' ಹೆಚ್ಚಿರುವುದು ಅಲ್ಲ ಎನ್ನುತ್ತಾರೆ ವಿಶ್ಲೇಷಕರು

52 ಪಾಟೀದಾರ್ ಬಾಹುಳ್ಯದ ಕ್ಷೇತ್ರಗಳಲ್ಲಿ

	2012		2017	
	ಸೀಟುಗಳು	ಮತಗಳಿಕೆ	ಸೀಟುಗಳು	ಮತಗಳಿಕೆ
ಬಿಜೆಪಿ	36	49%	28	50%
ಕಾಂಗ್ರೆಸ್+	14	36%	23	43%

ಎಸ್‌ಟಿ ಕ್ಷೇತ್ರಗಳಲ್ಲಿ

	2012		2017	
	ಸೀಟುಗಳು	ಮತಗಳಿಕೆ	ಸೀಟುಗಳು	ಮತಗಳಿಕೆ
ಬಿಜೆಪಿ	10	40.0%	9	45.0%
ಕಾಂಗ್ರೆಸ್+	16	45.6%	17	46.2%

ಎಸ್‌ಸಿ ಕ್ಷೇತ್ರಗಳಲ್ಲಿ

	2012		2017	
	ಸೀಟುಗಳು	ಮತಗಳಿಕೆ	ಸೀಟುಗಳು	ಮತಗಳಿಕೆ
ಬಿಜೆಪಿ	10	48.4%	9	45.0%
ಕಾಂಗ್ರೆಸ್+	3	40.6%	17	46.2%

ಕೃಪೆ: ನ್ಯೂಸ್‌ಕ್ಲಿಕ್.ಇನ್

ವ್ಯಂಗ್ಯಚಿತ್ರ: ಅಲೋಕ್ ನಿರಂತರ್











ಹುರುಪು ಹೆಚ್ಚಿಸಿದ ಸಿಪಿಐ(ಎಂ) ದ.ಕ.ಜಿಲ್ಲಾ ಸಮ್ಮೇಳನ

– ವಾಸುದೇವ ಉಚ್ಚಿಲ –

(ಸಮ್ಮೇಳನದ ಉದ್ಘಾಟನೆ ಬಗ್ಗೆ ಪುಟ 11 ಮತ್ತು ನಿರ್ಣಯಗಳ ಬಗ್ಗೆ ಪುಟ 5 ರಲ್ಲಿ ಇದೆ)



17, 18 ಡಿಸೆಂಬರ್ 2017 ಎರಡೂ ದಿನಗಳಲ್ಲಿ ಮಂಗಳೂರಿನ ಕಾ|ಪ್ರಸನ್ನ ಕುಮಾರ್ ನಗರದ ಕಾ|ಪೂವಪ್ಪ ಸಾಲ್ಯಾನ್ ಸಭಾಂಗಣದ ಕಾ|ಅಬ್ರಹಾಂ ಕರ್ಕಡ ವೇದಿಕೆಯಲ್ಲಿ ಬೋಳಾರದ ಎಸ್.ಕೆ.ಟೈಲ್ ವರ್ಕರ್ಸ್ ಯೂನಿಯನ್ ಕಚೇರಿ ಸಭಾಂಗಣ) ನಡೆದ ಸಿಪಿಐ(ಎಂ) ದ.ಕ.ಜಿಲ್ಲಾ ಸಮ್ಮೇಳನವು ಭಾಗವಹಿಸಿದ ಪ್ರತಿನಿಧಿಗಳಲ್ಲಿ ಹೊಸ ಹುರುಪನ್ನು ಹುಟ್ಟಿಸಿತು. 150 ಮಂದಿ ಭಾಗವಹಿಸಿದ್ದ ಸಮ್ಮೇಳನವು ಕಳೆದ ಮೂರು ವರ್ಷಗಳಲ್ಲಿ ಜಿಲ್ಲಾ ಮಟ್ಟದಲ್ಲಿ ಪಕ್ಷದ ರಾಜಕೀಯ ಚಟುವಟಿಕೆಗಳು ಹಾಗೂ ಸಂಘಟನಾ ಪರಿಸ್ಥಿತಿಗಳನ್ನು ತೀವ್ರ ವಿಮರ್ಶೆಗೆ ಒಳಪಡಿಸಿತು.


ವಸಂತ ಆಚಾರಿ

ಹಿಂದಿನ ಸಮ್ಮೇಳನದ ವೇಳೆಗೆ ಗುರುತಿಸಲಾಗಿದ್ದ ಕರ್ತವ್ಯಗಳಲ್ಲಿ ಎಷ್ಟನ್ನು ಸಾಧಿಸಲಾಗಿದೆ ಎಂಬ ಪ್ರಶ್ನೆಯೊಡನೆ ಜಿಲ್ಲಾ ಕಾರ್ಯದರ್ಶಿ ಸಮ್ಮೇಳನದ ಕರಡು ವರದಿಯನ್ನು ಮುಂದಿಟ್ಟರು. ಹೊಸ ವಿಭಾಗಗಳ ನಡುವೆ ಕೆಲಸ ಮಾಡಲು ಮುತುವರ್ಜಿ ವಹಿಸಲು ಕಳೆದ ಸಮ್ಮೇಳನದಲ್ಲಿ ಕರೆ ಕೊಡಲಾಗಿತ್ತು. ಆ ಪೈಕಿ ಮಂಗಳೂರು ನಗರ ಕೇಂದ್ರದಲ್ಲಿ ಬೀದಿ ಬದಿ ವ್ಯಾಪಾರಿಗಳ ಸಂಘಟನೆ ಮತ್ತು ಹೋರಾಟಗಳು ಪ್ರಮುಖ ಸಾಧನೆಯಾಗಿವೆ. ಡಿವೈಎಫ್ಐಯಿಂದ ಸಾಮಾಜಿಕ, ಆರೋಗ್ಯ, ಶೈಕ್ಷಣಿಕ ವಿಷಯಗಳ ಬಗ್ಗೆ ಸಕಾಲಿಕವಾಗಿ ಚಳುವಳಿಗಳನ್ನು ನಡೆಸಲಾಗಿದೆ.

ದಲಿತರ ಆದಿವಾಸಿಗಳ ಮಧ್ಯೆ ಮಾಡಿದ ಕೆಲಸ ನಿರೀಕ್ಷೆಯಷ್ಟು ಆಗಿಲ್ಲವಾದರೂ, ಹಿಂದಿನ ಸಮ್ಮೇಳನದ ವೇಳೆಗೆ ಹೆದ್ದಾರಿ ವಿಸ್ತರಣೆಗಾಗಿ ಬೀದಿಗೆ ಬಿದ್ದು ವಸತಿರಹಿತರಾಗಿ ಹೋಗಿದ್ದ ಕೊರಗ ಆದಿವಾಸಿ 8 ಕುಟುಂಬಗಳಿಗೆ ಸರಕಾರದ ನೆರವು ಮಾತ್ರವಲ್ಲದೆ ದಾನಿಗಳ ಸಹಾಯವನ್ನೂ ಪಡೆದು ತಲಾ ರೂ.6 ಲಕ್ಷ ವೆಚ್ಚದ ಮನೆ ಕಟ್ಟಿಸಲು ಮಂಗಳೂರು ನಗರದಲ್ಲಿ ಪಕ್ಷಕ್ಕೆ ಸಾಧ್ಯವಾದುದು ಪ್ರಶಂಸನೀಯ ಕೆಲಸವಾಗಿದೆ. ಮಂಗಳೂರು ನಗರದ ನಿವೇಶನ ರಹಿತರು ಜಿ+3 ಮಾದರಿಯ ವಸತಿ ಗೃಹಗಳಲ್ಲಿ ನೋಂದಣೆಗೊಳ್ಳಲು ಬಲಯುತವಾದ ಹೋರಾಟವನ್ನು ಮಂಗಳೂರು ನಗರ ಸಮಿತಿಗಳು ಮಾಡಿವೆ.

ಕೋಮುವಾದದ ಪ್ರಯೋಗ ಶಾಲೆಯಾಗಿರುವ ದ.ಕ.ಜಿಲ್ಲೆಯಲ್ಲಿ ಅದರ ವಿರುದ್ಧ ವಿಶಾಲವಾದ ವೇದಿಕೆ ಕಟ್ಟಬೇಕಿದೆ. ಪಕ್ಷ ಜಿಲ್ಲಾ ಸಮಿತಿ ಈ ನಿಟ್ಟಿನಲ್ಲಿ ಮಂಗಳೂರಿನಲ್ಲಿ ಯುವ ಜನರ ಪಾದಯಾತ್ರೆ, (ಐಕ್ಯತೆ ಎಡೆಗೆ ಸೌಹಾರ್ದ ನಡಿಗೆ) ಜನತಾ ಸಮಾವೇಶಗಳನ್ನು ಆಯೋಜಿಸಿದ್ದಲ್ಲದೆ, ಅವೆಲ್ಲಕ್ಕೂ ಕಿರೀಟ ಪ್ರಾಯವಾಗಿ ಕೋಮುವಾದಿಗಳಿಗೆ ಬಲವಾದ ಎಚ್ಚರಿಕೆ ನೀಡಿದ ಕರಾವಳಿ ಸೌಹಾರ್ದ ರ್‍ಯಾಲಿಯನ್ನು 2017 ಫೆಬ್ರವರಿ 25 ರಂದು ಮಂಗಳೂರಿನಲ್ಲಿ ಸಂಘ ಪರಿವಾರ ಕರೆಕೊಟ್ಟಿದ್ದ ಬಂದ್‌ನ ನಡುವೆಯೂ ಯಶಸ್ವಿಗೊಳಿಸಲು ಸಾಧ್ಯವಾಯಿತು; ಕೇರಳದ ಮುಖ್ಯಮಂತ್ರಿ ಪಿನರಾಯಿ ವಿಜಯನ್ ಈ ರ್‍ಯಾಲಿಯಲ್ಲಿ ಭಾಗವಹಿಸಿದ್ದರು. ಪಕ್ಷದ ಸಾಮೂಹಿಕ ಸಂಘಟನೆಗಳಿಗೂ ಹೊರಗಿರುವ ಜನಸಮೂಹ ಈ ಕಾರ್ಯಕ್ರಮಕ್ಕೆ ಬೆಂಬಲ ನೀಡಿದ್ದು ಗಮನರ್ಹ.

ಭೂಮಿಯ ಪ್ರಶ್ನೆಯನ್ನು ಮುಂದಿಟ್ಟುಕೊಂಡು ಕರ್ನಾಟಕ ಪ್ರಾಂತ ರೈತ ಸಂಘವು 2016 ನವಂಬರ್ 18 ರಂದು ರಾಜ್ಯಾದ್ಯಂತ ಜೈಲ್‌ಭರೋ ಕಾರ್ಯಕ್ರಮ ಹಮ್ಮಿಕೊಂಡಿತ್ತು. ರೈತ ಸಂಘದ ಚಟುವಟಿಕೆಗಳನ್ನು ಚುರುಕುಗೊಳಿಸುವ ನಿಟ್ಟಿನಲ್ಲಿ ಈ ಕಾರ್ಯಕ್ರಮ ಸ್ಫೂರ್ತಿಯಾಗಿರಲು ಪಕ್ಷದ ಜಿಲ್ಲಾ ಸಮಿತಿಯು ಎಲ್ಲ ಪಕ್ಷ ಸಮಿತಿಗಳಿಗೆ ಕರೆಕೊಟ್ಟ ಮೇರೆಗೆ, ಭಾರೀ ಪಕ್ಷ ಹಿತೈಷಿಗಳು ಭಾಗವಹಿಸಿದ್ದಲ್ಲದೆ, 86 ಜನ ಬಂಧನಕ್ಕೆ ಒಳಗಾಗಿದ್ದುದು ಉಲ್ಲೇಖನೀಯ. ಹಾಗಿದ್ದರೂ ರೈತ ಸಂಘ ವಿಸ್ತೃತ ಬೆಳವಣಿಗೆ ಪಡೆಯಲಿಲ್ಲ ಎಂಬುದನ್ನು ಪಕ್ಷದ ವರದಿ ಗುರುತಿಸಿದೆ.

ದ.ಕ.ಜಿಲ್ಲೆಯಲ್ಲಿ ಪಕ್ಷ ಚಟುವಟಿಕೆ ಯಾವಾಗಲೂ ಕ್ರಿಯಾಶೀಲವಾಗಿದೆ. ಕಾರ್ಮಿಕ ರಂಗದ ಸಂಘಟನೆಗಳಲ್ಲಿ ಕಟ್ಟಡ ಕಾರ್ಮಿಕ ರಂಗದ ಸಂಘಟನೆ ಸದಸ್ಯತ್ವ ಹೆಚ್ಚಳವಾಗಿದೆ. ಬೀಡಿ ಕೈಗಾರಿಕೆಯಲ್ಲಿನ ನಮ್ಮ ಸಂಘಟನೆಯ ಸದಸ್ಯತ್ವ ದೊಡ್ಡ ಸಂಖ್ಯೆಯಲ್ಲಿದ್ದರೂ,

ಪುಟ 11 ಕ್ಕೆ



ಸಿ.ಪಿ.ಐ. (ಎಂ.) 10ನೇ ಉತ್ತರ ಕನ್ನಡ ಜಿಲ್ಲಾ ಸಮೇಳನ

ಶಾಂತಿ–ಸೌಹಾರ್ದತೆ, ಸಹಬಾಳ್ವೆಯನ್ನು ಎತ್ತಿ ಹಿಡಿಯಲು ಸಮ್ಮೇಳನ ಕರೆ

ಉತ್ತರ ಕನ್ನಡ ಜಿಲ್ಲೆಯಲ್ಲಿ ಶಾಂತಿ, ಸೌಹಾರ್ದತೆಗೆ ಕೋಮುವಾದಿಗಳು ಭಂಗತರುತ್ತಿರುವ ಸಂದರ್ಭದಲ್ಲಿ ನಡೆದ ಸಿ.ಪಿ.ಐ.(ಎಂ.) 10ನೇ ಜಿಲ್ಲಾ ಸಮ್ಮೇಳನ ಕೈಗಾರಿಕಾ ನಗರ ದಾಂಡೇಲಿಯಲ್ಲಿ ಯಶಸ್ವಿಯಾಗಿ ಡಿಸೆಂಬರ್ 17 ಮತ್ತು 18 ರಂದು ನಡೆಯಿತು. ಜಿಲ್ಲೆಯಲ್ಲಿ ಹಿಂದು ಮತೀಯವಾದಿ ಸಂಘಟನೆಗಳಾದ ಆರ್.ಎಸ್.ಎಸ್., ವಿ.ಹೆಚ್.ಪಿ, ಭಜರಂಗದಳ, ಶ್ರೀರಾಮ ಸೇನೆ ಇತ್ಯಾದಿ ಸಂಘಟನೆಗಳು ಮತ್ತು ಕೇಂದ್ರ ಮಂತ್ರಿ ಅನಂತಕುಮಾರ ಹೆಗಡೆಯವರ ಪ್ರಚೋದನೆಕಾರಿ ಹೇಳಿಕೆಯನ್ನು ನೀಡಿ ಗಲಭೆಯನ್ನು ಸೃಷ್ಟಿಸಿರುವುದನ್ನು ಸಮ್ಮೇಳನ ತೀವ್ರವಾಗಿ ಖಂಡಿಸಿ ನಿರ್ಣಯ ಅಂಗೀಕರಿಸಿದೆ. ಹೊನ್ನಾವರ, ಶಿರಸಿ, ಕುಮಟಾ ಗಳಲ್ಲಿ ಸಾರ್ವಜನಿಕ ಆಸ್ತಿ–ಪಾಸ್ತಿ, ನಷ್ಟ, ಅಲ್ಪಸಂಖ್ಯಾತರ ಅಂಗಡಿಗಳು, ಮಸೀದಿಗಳಿಗೆ ಹಾನಿಯುಂಟು ಮಾಡಿರುವುದನ್ನು ಖಂಡಿಸಲಾಯಿತು. ಸುಳ್ಳು ಸುದ್ದಿಗಳನ್ನು ಹಬ್ಬಿಸಿ ಗಲಭೆಯನ್ನು ಸೃಷ್ಟಿಸುವವರನ್ನು ಕಠಿಣ ಶಿಕ್ಷೆಗೆ ಒಳಪಡಿಸಬೇಕೆಂದು ಒತ್ತಾಯಿಸಲಾಯಿತು. ಸಾಮಾಜಿಕ ಜಾಲತಾಣದ ಮೂಲಕ ಸುಳ್ಳು ಸುದ್ಧಿ ಹಬ್ಬಿಸುವವರ ಮೇಲೆ ಕ್ರಮ ಕೈಗೊಳ್ಳಬೇಕು. ಹೊನ್ನಾವರದ ಯುವಕ ಪರೇಶ ಮೇಸ್ತಾ ಅಸ್ವಾಭಾವಿಕ ಸಾವಿಗೆ ಕಾರಣರಾದವರನ್ನು ಪತ್ತೆ ಹಚ್ಚಿ ಕಠಿಣ ಕ್ರಮ ತೆಗೆದುಕೊಳ್ಳಬೇಕೆಂದು ಸಮ್ಮೇಳನ ಆಗ್ರಹಿಸಿತು. ಜಿಲ್ಲೆಯ ಜನತೆ ಶಾಂತಿ–ಸೌಹಾರ್ದತೆ ಮತ್ತು ಸಹಬಾಳ್ವೆ ಎತ್ತಿ ಹಿಡಿಯಲು ಕರೆ ನೀಡಲಾಯಿತು.


ಶಾಂತಾರಾಮ ನಾಯಕ

ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ನಿಯಂತ್ರಿಸಿ, ದೌರ್ಜನ್ಯಮುಕ್ತ ಬದುಕನ್ನು ಖಾತ್ರಿಗೊಳಿಸಲು ಒತ್ತಾಯ, ಅರಣ್ಯ ಸಾಗುವಳಿ ಜಮೀನು ಹಕ್ಕು ಪತ್ರಕ್ಕಾಗಿ, ಆಶಯ, ನಿವೇಶನದ ಪಟ್ಟಕ್ಕೆ, ಕನಿಷ್ಠ ಕೂಲಿಗೆ ಆಗ್ರಹಿಸಿ, ಕುಣಬಿ, ಹಾಲಕ್ಕಿ, ಗೌಳಿ ಮತ್ತು ಕುಂಬ್ರಿ ಮರಾಠಿ ಸಮುದಾಯನ್ನು ಬುಡಕಟ್ಟು ಪಟ್ಟಿಗೆ ಸೇರಿಸಬೇಕೆಂದು, ದಾಂಡೇಲಿ ಕೇಂದ್ರವಾಗಿಟ್ಟುಕೊಂಡು ಪ್ರವಾಸೋದ್ಯಮ ಅಭಿವೃದ್ಧಿಗೆ ನಿರ್ಧಿಷ್ಟ ಯೋಜನೆ ರೂಪಿಸಲು, ದಾಂಡೇಲಿ ತಾಲೂಕು ರಚನೆ ಸ್ಥಾಪನೆ ಒತ್ತಾಯಿಸಿ ಮುಂತಾದ ನಿರ್ಣಯಗಳನ್ನು ಸಮ್ಮೇಳನ ಅಂಗೀಕರಿಸಿತು.



ಉದ್ಘಾಟನೆ:

10ನೇ ಜಿಲ್ಲಾ ಸಮ್ಮೇಳನವನ್ನು ಡಿಸೆಂಬರ್ 17ರಂದು ದಾಂಡೇಲಿಯ ಡಾ|| ಅಂಬೇಡ್ಕರ ಭವನದಲ್ಲಿ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ. ನಿತ್ಯಾನಂದ ಸ್ವಾಮಿಯವರು ಉದ್ಘಾಟಿಸಿದರು. ಅವರು ಉದ್ಘಾಟನೆ ಮಾಡುತ್ತಾ ಜಗತ್ತು ಸಮಾಜವಾದಿ ಕ್ರಾಂತಿಯ ಶತಮಾನೋತ್ಸವನ್ನು ಆಚರಿಸುತ್ತಿರುವ ಸಂದರ್ಭದಲ್ಲಿ ರೈತ, ಕಾರ್ಮಿಕ, ಕೂಲಿಕಾರ ಹಾಗೂ ಇನ್ನಿತರ ವಿಭಾಗದ ಜನತೆಯ ನೆಮ್ಮದಿಯ ಭವಿಷ್ಯಕ್ಕಾಗಿ ಈಗಾಗಲೇ ಕಳೆದುಕೊಳ್ಳುತ್ತಿರುವ ಹಕ್ಕುಗಳನ್ನು ಮರಳಿ ಪಡೆಯಲು ಚಳುವಳಿ ಮಾರ್ಗ ಅನಿವಾರ್ಯವಾಗಿದೆ. ಸಾಮಾನ್ಯ ಜನತೆ ರಾಜಕೀಯ ಹೋರಾಟಗಳಿಗೆ ಸನ್ನದ್ಧವಾಗಬೇಕಾಗಿದೆ. ಬಡತನ ನಿರ್ಮೂಲನೆ, ನಿರುದ್ಯೋಗ ಸಮಸ್ಯೆ ನಿವಾರಣೆ, ಕೂಲಿಕಾರರ ಮತ್ತು ಜನಸಾಮಾನ್ಯರ ನೋವಿಗೆ ಧ್ವನಿಯಾಗುವುದರ ಮೂಲಕ ದೇಶ ಕಟ್ಟುವ ಕಾರ್ಯದಲ್ಲಿ ಸಿ.ಪಿ.ಐ.(ಎಂ.) ತನ್ನನ್ನು ತಾನು ಅರ್ಪಿಸಿಕೊಂಡಿದೆ ಎಂದರು. ಕೇಂದ್ರ ಸರ್ಕಾರ ನೋಟ ಬ್ಯಾನ್, ಜಿ.ಎಸ್.ಟಿ. ಮೂಲಕ ಬಡ ಜನತೆಯ ಮೇಲೆ ದಬ್ಬಾಳಿಕೆ ಮಾಡ ಹೋರಟಿರುವುದು ಖಂಡನೀಯ ಎಂದು ಹೇಳಿದರು. ಮುಖ್ಯ ಅತಿಥಿಗಳಾಗಿ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ. ಕೆ. ಶಂಕರ ಪಾಲ್ಗೊಂಡಿದ್ದರು. ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ. ಶಾಂತಾರಾಮ ನಾಯಕ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಸಮಿತಿ ಕಾರ್ಯದರ್ಶಿ ಯಮುನಾ ಗಾಂವಕಾರ ಪ್ರಸ್ತಾವಿಕ ಮಾತನಾಡಿದರು. ಸ್ವಾಗತ ಸಮಿತಿಯ ಪ್ರಧಾನ ಕಾರ್ಯದರ್ಶಿ ಹರೀಶ ನಾಯ್ಕ ಸ್ವಾಗತಿಸಿದರು. ಖಜಾಂಚಿ ಸಲಿಂ ಸಯ್ಯದ್ ವಂದಿಸಿದರು. ಪ್ರಾರಂಭದಲ್ಲಿ ಪಕ್ಷದ ಧ್ವಜಾರೋಹಣವನ್ನು ಹಿರಿಯ ಸಂಗಾತಿ ಸಿ.ಆರ್. ಶ್ಯಾನಭಾಗ ನೆರವೇರಿಸಿದರು.

2ನೇ ದಿನ ಪ್ರತಿನಿಧಿ ಅಧಿವೇಶನದಲ್ಲಿ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ. ಮೀನಾಕ್ಷಿ ಸುಂದರಂ ಭಾಗವಹಿಸಿ ಪ್ರತಿನಿಧಿಗಳನ್ನುದ್ದೇಶಿಸಿ ಮಾತನಾಡಿದರು. ಜಿಲ್ಲಾ ಸಮ್ಮೇಳನವು ನೂತನ ಜಿಲ್ಲಾ ಸಮಿತಿಯನ್ನು ಹಾಗೂ ರಾಜ್ಯ ಸಮ್ಮೇಳನಕ್ಕೆ ಪ್ರತಿನಿಧಿಗಳನ್ನು ಆಯ್ಕೆಮಾಡಿತು. ಜಿಲ್ಲೆಯಲ್ಲಿ 144 ಕಲಂ ಜಾರಿಯಿದ್ದರಿಂದ ಮೆರವಣಿಗೆ ಮತ್ತು ಬಹಿರಂಗ ಸಭೆ ನಡೆಸಲು ಸಾಧ್ಯವಾಗಿಲ್ಲ.

ಗೌರವಾರ್ಪಣೆ:

ಹಿರಿಯ ಸಂಗಾತಿಗಳಾಗಿ ಸುಮಾರು 60 ವರ್ಷಗಳಿಗಿಂತಲೂ ಹೆಚ್ಚು ಕಾಲ ಪಕ್ಷದ ಮತ್ತು ರೈತ ಸಂಘದ ಚಟುವಟಿಕೆಯಲ್ಲಿ ಕ್ರೀಯಾಶೀಲರಾಗಿದ್ದ, ಪಕ್ಷದ ಮಾಜಿ ಜಿಲ್ಲಾ ಸಮಿತಿ ಕಾರ್ಯದರ್ಶಿಗಳು ಹಾಗೂ ಈ ಸಮ್ಮೇಳನದವರೆಗೂ ಜಿಲ್ಲಾ ಸಮಿತಿ ಸದಸ್ಯರಾಗಿದ್ದ ಕಾಂ. ಮಂಜುನಾಥ ಪುಲ್ಕರರವರಿಗೆ ಹಾಗೂ ಕುಣಬಿ ಬುಡಕಟ್ಟು ಹಿರಿಯ ಕಲಾವಿದ, ರೈತ ಸಂಘದ ಕಾರ್ಯಕರ್ತರೂ ಆಗಿರುವ ಮಹಾದೇವ ಬುಧೋ ವೇಳಿಪರವರಿಗೆ ಗೌರವಾರ್ಪಣೆ ಸಲ್ಲಿಸಿತು. ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು ಹಿರಿಯರನ್ನು ಸನ್ಮಾನಿಸಿದರು.

ಪುಟ 11 ಕ್ಕೆ



10ನೇ ಹಾಸನ ಜಿಲ್ಲಾ ಸಿಪಿಐ(ಎಂ) ಸಮ್ಮೇಳನ

ಕಮ್ಯೂನಿಸ್ಟರು ಎಂದೆಂದಿಗೂ ದುಡಿಯುವ ವರ್ಗದ ಪಕ್ಷಪಾತಿಗಳು : ವರಲಕ್ಷ್ಮಿ



ಎಚ್.ಆರ್. ನವೀನ್ ಕುಮಾರ್

ಮಲೆನಾಡಿನ ನಿಸರ್ಗದ ತಪ್ಪಲಿನಲ್ಲಿ ಕೆಂಬಾವುಟಗಳ ಹಾರಾಟ ಭರ್ಜರಿಯಾಗಿತ್ತು. ಕೆಳಬಾವುಟ ಹಿಡಿದು ಕೆಂಪು ಸಮವಸ್ತ್ರ ತೊಟ್ಟು ಸಕಲೇಶಪುರದ ಪ್ರಮುಖ ಬೀದಿಯಲ್ಲಿ ಶಿಸ್ತಿನ ಮೆರವಣಿಗೆಯಲ್ಲಿ ತೆರಳಿದ ಸಾವಿರಾರು ಕಾರ್ಯಕರ್ತರನ್ನು ನೋಡಿ ಜನ ಒಂದು ಕ್ಷಣ ಆಶ್ಚರ್ಯದಿಂದ ನೋಡಿದರು ಇದಕ್ಕೆ ಕಾರಣ ಕೇಸರಿ ಪಡೆಗಳು ನಡೆಸಿದ ಪುಂಡಾಟಿಕೆಗಳನ್ನು ನೋಡುತ್ತಿದ್ದ ಜನಕ್ಕೆ ಇದು ವಿಶೇಷವಾಗಿತ್ತು. ಇದೆಲ್ಲ ನಡೆದದ್ದು ಹಾಸನ ಜಿಲ್ಲಾ ಸಿಪಿಐ(ಎಂ)ನ 10ನೇ ಸಮ್ಮೇಳನದ ಸಂದರ್ಭದ ಮೆರವಣಿಗೆಯ ಸಂದರ್ಭದಲ್ಲಿ.


ಧರ್ಮೇಶ್

ಸಕಲೇಶಪುರದಲ್ಲಿ ಸಮ್ಮೇಳನ ನಡೆಸುತ್ತಿರುವುದಕ್ಕೆ ಹಲವು ಪ್ರಮುಖ ಕಾರಣಗಳಿವೆ. ಹಾಸನ ಜಿಲ್ಲೆಯ ಕಮ್ಯೂನಿಸ್ಟ್ ಪಕ್ಷದ ಚಳುವಳಿಗೆ ಸಕಲೇಶಪುರ ತಾಲ್ಲೂಕಿನ ಕೊಡುಗೆ ಅನನ್ಯವಾದುದು. 60 ವರ್ಷಗಳ ಹಿಂದೆಯೇ ಅಂದರೆ 1956ರಲ್ಲಿ ಈ ತಾಲ್ಲೂಕಿನ ಕಾಡುಮನೆ ಎಸ್ಟೇಟ್ ಕಾರ್ಮಿಕರ ಹೋರಾಟದೊಂದಿಗೆ ಆರಂಭವಾದ ಕೆಂಬಾವುಟದ ಚಳುವಳಿ ಕಾರ್ಮಿಕರ, ರೈತರ, ದಲಿತರ ಹಾಗೂ ದಮನಿತರ ಪರವಾಗಿ ನಿರಂತರವಾಗಿ ನಿಂತಿದೆ. 1960ನೇ ಇಸವಿಯಲ್ಲಿಯೇ ಈ ಪ್ರದೇಶದಲ್ಲಿ ಇಲ್ಲಿನ ಕಾರ್ಮಿಕರು ಪಕ್ಷದ ಪ್ರಾಥಮಿಕ ಶಾಖೆಯನ್ನು ಆರಂಭಿಸಿದ ಇತಿಹಾಸವಿದೆ. ಪಕ್ಷದ ನೇತೃತ್ವದಲ್ಲಿ ತೊಟ ಕಾರ್ಮಿಕರ ಹಲವಾರು ಸಮರಧೀರ ಹೋರಾಟಗಳು ನಡೆದಿವೆ. ಮಾಲೀಕರ ತೋಟಗಳಲ್ಲಿ ಅಕ್ಷರಶಃ ಗುಲಾಮರಾಗಿ ಹಗಲು ರಾತ್ರಿ ದುಡಿಯುತ್ತಾ ಅತ್ಯಂತ ಕೆಳಹಂತದ ಜೀವನ ಸಾಗಿಸುತ್ತಿದ್ದ ಕಾರ್ಮಿಕರಿಗೆ ಸ್ವಾಭಿಮಾನದ ಬದುಕು ಕಟ್ಟಿಕೊಟ್ಟಿದ್ದೇ ಈ ಕೆಂಬಾವುಟ. ನಂತರದ ವರ್ಷಗಳಲ್ಲಿ ಪಕ್ಷದ ನೇತೃತ್ವದಲ್ಲಿ ಅಂಗನವಾಡಿ, ಗ್ರಾಮ ಪಂಚಾಯತಿ ನೌಕರರು, ಮಧ್ಯಾಹನದ ಬಿಸಿಯೂಟ ಕಾರ್ಮಿಕರು, ರೈತರು, ವಿದ್ಯಾರ್ಥಿಗಳು, ಯುವಜನರು ಹಾಗೂ ದಲಿತರ ನಡುವೆ ಸಂಘಟನೆ ಮತ್ತು ಕೆಲವು ನಿರ್ಣಾಯಕ ಹೋರಾಟಗಳನ್ನು ನಡೆಸಲು ಪಕ್ಷ ಮಾರ್ಗದರ್ಶನ ನೀಡಿದೆ.

ಸಮ್ಮೇಳನದ ಅಂಗವಾಗಿ ನಡೆದ ಬಹಿರಂಗ ಸಭೆಯನ್ನು ಉಧ್ಘಾಟಿಸಿ ಮಾತನಾಡಿದ ಪಕ್ಷದ ರಾಜ್ಯ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿಯವರು ಕಮ್ಯೂನಿಸ್ಟ್ ಪಕ್ಷದಲ್ಲಿ ಮಾತ್ರವೇ ನಿಜವಾದ ಆಂತರಿಕ ಪ್ರಜಾಪ್ರಭುತ್ವ ಜೀವಂತವಾಗಿರುವುದು. ಇಲ್ಲಿ ಪ್ರತಿ ಮೂರು ವರ್ಷಕ್ಕೊಮ್ಮೆ ಕೆಳಹಂತದಿಂದ ಅಖಿಲ ಭಾರತ ಮಟ್ಟದವರೆಗೆ ಸಮ್ಮೇಳನಗಳನ್ನು ನಡೆಸಿ ರಾಜಕೀಯ, ಸಾಮಾಜಿಕ, ಆರ್ಥಿಕ ಪರಿಸ್ಥಿತಿಗಳ ಕುರಿತು ಚರ್ಚಿಸಿ ಪ್ರಜಾಸತ್ತಾತ್ಮಕವಾಗಿ ನಾಯಕತ್ವವನ್ನು ಆಯ್ಕೆ ಮಾಡಲಾಗುತ್ತದೆ. ಈ ವಿಧಾನ ದೇಶದ ಬೇರಾವ ರಾಜಕೀಯ ಪಕ್ಷಗಳಲ್ಲೂ ಕಾಣಲು ಸಾಧ್ಯವಿಲ್ಲ ಎಂದರು. ಸಭೆಯಲ್ಲಿ ಮಾತಾನಾಡುತ್ತ ಅವರು ಕೇಂದ್ರದಲ್ಲಿ ಅಧಿಕಾರ ನಡೆಸುತ್ತಿರುವ ಬಿಜೆಪಿ ನೇತೃತ್ವದ ಸರ್ಕಾರ ತನ್ನ ಫ್ಯಾಸಿಸ್ಟ್ ದೋರಣೆಯಿಂದಾಗಿ ಜನರ ಹಕ್ಕುಗಳನ್ನು ದಮನ ಮಾಡುವುದು ಮಾತ್ರವಲ್ಲದೆ ಜನರ ಜೀವನ ಶೈಲಿ ಯಾವ ರೀತಿಯಲ್ಲಿರಬೇಕು ಎಂಬುದನ್ನು ನಿರ್ದೇಶಿಸುತ್ತಿದೆ. ಇದು ಮೂಲಭೂತವಾಗಿ ನಮ್ಮ ದೇಶದ ಸಂವಿಧಾನದ ಆಶಯಗಳಿಗೆ ವಿರುದ್ದವಾದದ್ದು. ಇಂತಹ ನೀತಿಗಳನ್ನು ಭಾರತೀಯರಾರೂ ಸಹಿಸಿಕೊಳ್ಳಲು ಸಾಧ್ಯವಿಲ್ಲ ಎಂದರು.





ಪುಟ 10 ಕ್ಕೆ

22ನೇ ಬೆಂಗಳೂರು ದಕ್ಷಿಣ ಸಿಪಿಐ(ಎಂ) ಸಮ್ಮೇಳನ

ಬಿಬಿಎಂಪಿ ವಿಭಜನೆಗೆ ಸಿಪಿಎಂ ಒತ್ತಾಯ

–ಲಿಂಗರಾಜು–


ಜಿಗಣಿ ಪ್ರದೇಶದಲ್ಲಿ ಸಿಪಿಎಂ ಕಾರ್ಯಕರ್ತರು ಕೆಂಬಾವುಟ ಹಿಡಿದು ಮೆರವಣಿಗೆ ನಡೆಸಿದರು

1.25 ಕೋಟಿಗೂ ಅಧಿಕ ಜನಸಂಖ್ಯೆ, 741 ಚದರ ಕಿಮೀ ವಿಸ್ತೀರ್ಣ, 198 ವಾರ್ಡುಗಳು ಇರುವ ಬೆಂಗಳೂರು ನಗರವನ್ನು ಒಬ್ಬ ಮೇಯರ್, ಒಂದು ಪಾಲಿಕೆ ನಿರ್ವಹಣೆ ಮಾಡುವುದು ಅವೈಜ್ಞಾನಿಕವಾಗಿದ್ದು, ಆಡಳಿತ ವಿಕೇಂದ್ರೀಕರಣದ ದೃಷ್ಟಿಯಿಂದ ಬಿಬಿಎಂಪಿಯನ್ನು ವಿಭಜಿಸುವುದು ಸೂಕ್ತವಾಗಿದ್ದು, ಸರ್ಕಾರ ಬಿಬಿಎಂಪಿಯನ್ನು ವಿಭಜಿಸಬೇಕೆಂದು ಸಿಪಿಐ(ಎಂ) ಒತ್ತಾಯಿಸಿದೆ.


ಕೆ.ಎನ್. ಉಮೇಶ್

ಡಿಸೆಂಬರ್ 15 ರಿಂದ 17ರವರೆಗೆ ಆನೇಕಲ್ ತಾಲ್ಲೂಕಿನ ಜಿಗಣಿಯಲ್ಲಿ ನಡೆದ ಸಿಪಿಐ(ಎಂ) ಬೆಂಗಳೂರು ದಕ್ಷಿಣ ಜಿಲ್ಲಾ ಸಮ್ಮೇಳನದಲ್ಲಿ ಈ ನಿರ್ಣಯ ಕೈಗೊಳ್ಳಲಾಗಿದೆ. ಇದಕ್ಕಾಗಿ ಸಾರ್ವಜನಿಕ ಅಭಿಪ್ರಾಯ ಪಡೆಯಬೇಕೆಂದು ಅದು ಸಲಹೆ ಮಾಡಿದೆ. ಜತೆಗೆ ಚಂದಾಪುರವನ್ನು ಕೇಂದ್ರವಾಗಿರಿಸಿಕೊಂಡು ಜಿಗಣಿ, ಬೊಮ್ಮಸಂದ್ರ, ಅತ್ತಿಬೆಲೆ ಪ್ರದೇಶಗಳನ್ನು ಒಳಗೊಂಡು ನಗರ ಪಾಲಿಕೆಯನ್ನು ರಚಿಸಬೇಕೆಂದೂ ಅದು ಒತ್ತಾಯಿಸಿದೆ. ಇದಕ್ಕಾಗಿ ಆನೇಕಲ್‌ನಲ್ಲಿ ಬೃಹತ್ ಹೋರಾಟ ಸಂಘಟಿಸಲು ನಿರ್ಣಯಕ್ಕೆ ಬರಲಾಗಿದೆ.

ಕಾರ್ಮಿಕರು, ಬಡವರು, ದಲಿತರು ಹಾಗು ಅಲ್ಪಸಂಖ್ಯಾತರು ವಾಸಿಸುವ ಪ್ರದೇಶಗಳು ಮೂಲಸೌಕರ್ಯಗಳಿಂದ ವಂಚಿತವಾಗಿವೆ. ಬಿಬಿಎಂಪಿಯಲ್ಲಿ ಭ್ರಷ್ಟಾಚಾರ ಮಿತಿಮೀರಿದೆ. ವಾರ್ಡುಗಳಿಗೆ ಅನುದಾನ ನೀಡುವಲ್ಲಿ ತಾರತಮ್ಯ ಮಾಡಲಾಗುತ್ತಿದೆ. ಪ್ರತಿಷ್ಠಿತ ಜನ ವಾಸಿಸುವ ವಾರ್ಡ್‌ಗಳಲ್ಲಿ ಎಲ್ಲ ಮೂಲ ಸೌಕರ್ಯಗಳನ್ನು ಒದಗಿಸುವ ಬಿಬಿಎಂಪಿ, ಕಾರ್ಮಿಕರು ಬಡಜನ ವಾಸಿಸುವ ಜನವಸತಿ ಪ್ರದೇಶಗಳಿಗೆ ಅನುದಾನ ನೀಡದೆ, ತಾರತಮ್ಯ ಧೋರಣೆ ಅನುಸರಿಸುತ್ತಿದೆ. ಆದ್ದರಿಂದ ಮುಂಬರುವ ದಿನಗಳಲ್ಲಿ ಬಿಬಿಎಂಪಿ ಭ್ರಷ್ಟಾಚಾರದ ವಿರುದ್ಧ ಹೋರಾಟಗಳನ್ನು ತೀವ್ರಗೊಳಿಸುವ ಮಹತ್ವದ ನಿರ್ಧಾರ ಕೈಗೊಂಡಿದೆ.

ಮೆಟ್ರೋ ರೈಲು ಯೋಜನೆ ವಿಸ್ತರಣೆಯಲ್ಲೂ ಈ ತಾರತಮ್ಯ ಮುಂದುವರಿದಿದ್ದು, ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ನೇರ ಮೆಟ್ರೋ ರೈಲು ಯೋಜನೆ ರೂಪಿಸಿದೆ. ಆದರೆ ಕೈಗಾರಿಕಾ ಕಾರ್ಮಿಕರು ವಾಸಿಸುವ ಮತ್ತು ಕೈಗಾರಿಕಾ ಪ್ರದೇಶಗಳಿಗೆ ಮೆಟ್ರೋ ಯೋಜನೆ ವಿಸ್ತರಣೆ ಮಾಡದೆ ಇಲ್ಲಿಯೂ ದುಡಿಯುವ ಸಾಮಾನ್ಯ ಜನರನ್ನು ನಿರ್ಲಕ್ಷಿಸಲಾಗಿದೆ. ಸದ್ಯ ಬೊಮ್ಮಸಂದ್ರದವರೆಗೆ ಯೋಜಿಸಲಾದ ವಿಸ್ತರಣೆಯನ್ನು ಪರಿಷ್ಕರಿಸಿ, ಅತ್ತಿಬೆಲೆವರೆಗೆ ಹಾಗು ನಾಗವಾರದಿಂದ ಗೊಟ್ಟಿಗೆರೆವರೆಗೆ ಇರುವ ಯೋಜನೆಯನ್ನು ಜಿಗಣಿವರೆಗೆ ವಿಸ್ತರಣೆ ಮಾಡಬೇಕೆಂದು ಒತ್ತಾಯಿಸಿದೆ. ಇದಕ್ಕಾಗಿ ಜನವರಿ 18 ರಂದು ಮೆಟ್ರೋ ಪ್ರಧಾನ ಕಛೇರಿ ಎದುರು ಪ್ರತಿಭಟನೆ ನಡೆಸಲು ಅದು ತೀರ್ಮಾನಿಸಿದೆ.

ಬಗರ್‌ಹುಕುಂ ಜಮೀನನ್ನು ಅಕ್ರಮವಾಗಿ ಶ್ರೀಮಂತರಿಗೆ, ರೈತರಲ್ಲದವರಿಗೆ ಮಂಜೂರು ಮಾಡಿದವರ ಮೇಲೆ ಕಾನೂನು ಕ್ರಮ ಜರುಗಿಸಬೇಕು, ಗೌರಿ ಲಂಕೇಶ್ ಹತ್ಯೆ ಶೀಘ್ರ ತನಿಖೆ ಆಗಬೇಕು ಇತ್ಯಾದಿ 14 ನಿರ್ಣಯಗಳನ್ನು ತೆಗೆದುಕೊಳ್ಳಲಾಗಿದೆ. ಸಮ್ಮೇಳನದಲ್ಲಿ 17 ಜನರ ನೂತನ ಜಿಲ್ಲಾ ಸಮಿತಿ ಆಯ್ಕೆಯಾಗಿದ್ದು, ಕೆ.ಎನ್.ಉಮೇಶ್

ಪುಟ 10 ಕ್ಕೆ

ಜನಶಕ್ತಿ ಪ್ರಸಾರಕ್ಕೊಂದು ಹೊಸ ಮಾದರಿ

ಜನಶಕ್ತಿ ಪ್ರಸಾರಕ್ಕೊಂದು ರಾಜ್ಯದಾದ್ಯಂತ ಎಲ್ಲಾ ಜಿಲ್ಲೆಗಳಿಗೆ ಮಾದರಿಯಾಗಬಹುದಾದ ವಿಧಾನವನ್ನು ಬೆಂಗಳೂರು ದಕ್ಷಿಣ ಜಿಲ್ಲಾ ಸಮಿತಿ ರೂಪಿಸಿದೆ. ಜನಶಕ್ತಿ ಪ್ರಸಾರ ಮತ್ತು ಸಾಮಾಜಿಕ ಮಾಧ್ಯಮ ಕುರಿತು ಚರ್ಚೆಗೆ ವಿಶೇಷ ಅಧಿವೇಶನ ಸಂಘಟಿಸಲಾಯಿತು. ಈ ಅಧಿವೇಶನದಲ್ಲಿ ಡಿಸೆಂಬರ್ 31ರೊಳಗೆ (ಅಂದರೆ ರಾಜ್ಯ ಸಮ್ಮೇಳನದ ಒಳಗೆ) ಪಕ್ಷದ ಸದಸ್ಯತ್ವದ ಎರಡು ಪಟ್ಟು ಜನಶಕ್ತಿ ಚಂದಾ ಮಾಡಿಸುವ ನಿರ್ಣಯ ಮಾಡಲಾಯಿತು. ಬರಿಯ ನಿರ್ಣಯಕ್ಕೆ ನಿಲ್ಲದೆ, ಪ್ರತಿ ವಲಯ/ತಾಲೂಕು ಸಮಿತಿಗಳ ನಾಯಕತ್ವಕ್ಕೆ ಅದರ ಸದಸ್ಯತ್ವದ ಎರಡು ಪಟ್ಟು ಜನಶಕ್ತಿ ಸಂಚಿಕೆಗಳನ್ನು ವೇದಿಕೆಯ ಮೇಲಿದ್ದ ನಾಯಕರಿಂದ ಕೊಡಿಸಲಾಯಿತು.

ಜನಶಕ್ತಿಯ ಕಾರ್ಯನಿರತ ಸಂಪಾದಕ ವಸಂತರಾಜ್ ಎನ್.ಕೆ. "ಜನಶಕ್ತಿ ಪ್ರಸಾರ ಮತ್ತು ಸಾಮಾಜಿಕ ಮಾಧ್ಯಮ"ಗಳ ಮಹತ್ವ, ಸಾಧಿಸಿರುವ ಪ್ರಗತಿ ಹಾಗೂ ಮುಂದಿನ ಯೋಜನೆಗಳ ಕುರಿತು ಮಾತನಾಡಿದರು. ಜನಶಕ್ತಿ ಪ್ರಸಾರ ವಿಭಾಗದ ಮುಖ್ಯಸ್ಥ ಜಿ ಚಂದ್ರಶೇಖರ್ ಉಪಸ್ಥಿತರಿದ್ದರು.


ಜನಶಕ್ತಿ ಪ್ರಸಾರ ಹೆಚ್ಚಿಸುವ ವಿಶೇಷ ಚರ್ಚೆ ಸಂದರ್ಭದಲ್ಲಿ ವಸಂತರಾಜ್ ಅವರಿಂದ ಜನಶಕ್ತಿ ಪತ್ರಿಕೆಯನ್ನು ಸ್ವೀಕರಿಸುತ್ತಿರುವ ಒಂದು ವಲಯ ನಾಯಕತ್ವ

ಕಮ್ಯೂನಿಸ್ಟರು ಎಂದೆಂದಿಗೂ ದುಡಿಯುವ ವರ್ಗದ ಪಕ್ಷಪಾತಿಗಳು............ ಪುಟ 9 ರಿಂದ

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಡಿವೈಎಫ್ಐನ ರಾಜ್ಯ ಅಧ್ಯಕ್ಷರಾದ ಮುನೀರ್ ಕಾಟಿಪಳ್ಳರವರು ಮಾತನಾಡುತ್ತ ಸಕಲೇಶಪುರ ಪ್ರದೇಶದ ಯುವ ಜನರು ಹಿಂದು ಮತಾಂಧವಾದಿ ಶಕ್ತಿಗಳ ಜೊತೆ ಮತ್ತು ಅಲ್ಪಸಂಖ್ಯಾತ ಮೂಲಭೂತವಾದಿಗಳ ಜೊತೆ ದಾರಿ ತಪ್ಪಿ ಹೋಗುತ್ತಿದ್ದಾರೆ. ಆ ಸಂಘಟನೆಗಳು ಈ ಮುಗ್ಧ ಯುವಕರಲ್ಲಿ ಧರ್ಮದ ಅಮಲನ್ನು ತುಂಬಿಸುತ್ತಿವೆ. ಆದರೆ ಇವರ್‍ಯಾರು ಜನರ ಬದುಕಿನ ಪ್ರಶ್ನೆಗಳ ಕುರಿತು ಮಾತನಾಡುವುದಿಲ್ಲ. ರೈತರ ಆತ್ಮಹತ್ಯೆಗಳ ಬಗ್ಗೆ ಮಾತನಾಡುವುದಿಲ್ಲ, ಸರ್ಕಾರಿ ಆಸ್ಪತ್ರೆಗಳ ದುಸ್ಥಿತಿಗಳ ಬಗ್ಗೆ ಮಾತನಾಡುವುದಿಲ್ಲ, ನಿರುದ್ಯೋಗದ ಬಗ್ಗೆ ಮಾತನಾಡುವುದಿಲ್ಲ, ಕೂಲಿಯ ಬಗ್ಗೆ ಮಾತನಾಡುವುದಿಲ್ಲ. ಮಹಿಳೆಯರ, ದಲಿತರ ಅಲ್ಪಸಂಖ್ಯಾತರಲ್ಲಿರುವ ಜನಸಾಮಾನ್ಯರ ಬದುಕಿನ ಬವಣೆಗಳ ಬಗ್ಗೆ ಇವರ್‍ಯಾರು ಧ್ವನಿ ಎತ್ತಿದವರಲ್ಲ ಹಾಗಾದರೆ ಇವರನ್ನೆಲ್ಲ ಬಿಟ್ಟ ನೀವು ಯಾವ ಧರ್ಮವನ್ನು ಕಟ್ಟಲು ಹೊರಟಿದ್ದೀರಿ ಎಂದು ಪ್ರಶ್ನಿಸಿದರು.

ಮತ್ತೋರ್ವ ಮುಖ್ಯ ಅತಿಥಿಗಳಾಗಿದ್ದ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್. ವರಲಕ್ಷ್ಮಿಯವರು ಮಾತನಾಡಿ ಈ ದೇಶದಲ್ಲಿ ಬಹುಪಾಲು ಜನ ದುಡಿಯುವ ವರ್ಗವೇ ಇರುವುದು. ಅವರನ್ನು ಸಂಘಟಿಸಿ ಅವರ ಬದುಕನ್ನ ಉತ್ತಮಗೊಳಿಸಲು ನಿರಂತರವಾಗಿ ಶ್ರಮಿಸುತ್ತಿರುವುದು ಕೆಂಬಾವುಟ ಮಾತ್ರ. ಕಮ್ಯೂನಿಸ್ಟರು ಎಂದೆಂದಿಗೂ ದುಡಿಯುವ ವರ್ಗದ ಪಕ್ಷಪಾತಿಗಳು ಎಂದರು.

ಪಕ್ಷದ ಜಿಲ್ಲಾ ಕಾರ್ಯದರ್ಶಿ ಧರ್ಮೇಶ್ ಮಾತನಾಡಿ ಸಕಲೇಶಪುರದಂತಹ ಪ್ರದೇಶದಲ್ಲಿ ಭಜರಂಗದಳದ ಕಛೇರಿಯಲ್ಲಿ ವಿಜಯ ದಶಮಿಯ ಸಂದರ್ಭದಲ್ಲಿ ತ್ರಿಶೂಲ ಮತ್ತು ಮಾರಕಾಸ್ತ್ರಗಳನ್ನು ಪೂಜೆಮಾಡಿ ಅದರ ವಿಡಿಯೋವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿದ್ದರೂ ಪೋಲೀಸ್ ಇಲಾಖೆ ಯಾವ ರೀತಿಯ ಕ್ರಮವನ್ನೂ ತೆಗೆದುಕೊಂಡಿಲ್ಲ ಎಂದರು. ಸಭೆಯ ಅಧ್ಯಕ್ಷತೆಯನ್ನು ಸ್ವಾಗತ ಸಮಿತಿಯ ಅಧ್ಯಕ್ಷರಾದ ವಿ.ಸುಕುಮಾರ್ ವಹಿಸಿದ್ದರು.

ನಂತರ ನಡೆದ ಪ್ರತಿನಿಧಿ ಅಧಿವೇಶನದಲ್ಲಿ ಕಳೆದ ಮೂರುವರ್ಷಗಳಲ್ಲಿ ಹಾಸನ ಜಿಲ್ಲೆಯಲ್ಲಿ ನಡೆದ ರಾಜಕೀಯ, ಸಾಮಾಜಿಕ, ಆರ್ಥಿಕ ಬೆಳವಣಿಗೆಗಳನ್ನು ಚರ್ಚಿಸುವ ಜೊತೆಗೆ ಈ ಅವಧಿಯಲ್ಲಿ ಪಕ್ಷದ ಮಧ್ಯಪ್ರವೇಶದಿಂದ ನಡೆದ ಚಳುವಳಿಗಳು ಮತ್ತು ಮುಂದೆ ನಡೆಸಬೇಕಾದ ಹೋರಾಟಗಳ ಕುರಿತು ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು.

ಕಳೆದ ಮೂರು ವರ್ಷದ ಅವಧಿಯಲ್ಲಿ ಹಾಸನ ಜಿಲ್ಲೆಯಲ್ಲಿ ನಡೆದ ಪ್ರಮುಖ ಹೋರಾಟಗಳು

ಸಿಗರನಹಳ್ಳಿ ದಲಿತರ ದೇವಸ್ಥಾನ ಮತ್ತು ಸಮುದಾಯ ಭವನ ಪ್ರವೇಶ:

ಹಾಸನ ಜಿಲ್ಲೆಯಲ್ಲಿ ನಡೆದ ಪ್ರಮುಖ ಸಾಮಾಜಿಕ ಚಳುವಳಿಯಲ್ಲಿ ಇದು ಒಂದು. ಇದು ಕೇವಲ ಜಿಲ್ಲೆಯಲ್ಲಿ ಮಾತ್ರವಲ್ಲ ರಾಜ್ಯ ಮತ್ತು ಅಖಿಲ ಭಾರತ ಮಟ್ಟದಲ್ಲೂ ಗಮನ ಸೆಳೆದಂತಹ ಒಂದು ನಿರ್ಣಾಯಕ ಹೋರಾಟ. ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲ್ಲೂಕಿನ ಸಿಗರನಹಳ್ಳಿಯಲ್ಲಿ ದಲಿತರಿಗೆ ದೇವಸ್ಥಾನ ಮತ್ತು ಸಮುದಾಯ ಭವನ ಪ್ರವೇಶಕ್ಕೆ ದಂಡ ವಿಧಿಸಿದ ಪ್ರಕರಣದಿಂದ ಆರಂಭವಾಗಿ ಸತತವಾಗಿ ಎರಡು ತಿಂಗಳುಗಳ ಕಾಲ ನಡೆದ ವಿವಿಧ ಹಂತದ ಹೋರಾಟದ ಫಲವಾಗಿ ಅಂತಿಮವಾಗಿ ದಲಿತರು ದೇವಸ್ಥಾನ ಪ್ರವೇಶ ಮಾಡುವಂತಾಯಿತು. ಈ ಹೋರಾಟವನ್ನು ಸಂಘಟಿಸುವಲ್ಲಿ ಪಕ್ಷದ ಮಧ್ಯಪ್ರವೇಶ ಮತ್ತು ಮುತುವರ್ಜಿ ಗಮನಾರ್ಹವಾದದ್ದು. ದಲಿತ ಹಕ್ಕುಗಳ ಸಮಿತಿ ಜೊತೆಗೆ ಜಿಲ್ಲೆಯ ಎಲ್ಲಾ ದಲಿತ ಸಂಘಟನೆಗಳು, ಪ್ರಗತಿಪರ ಸಂಘಟನೆಗಳು ಮತ್ತು ವ್ಯಕ್ತಿಗಳನ್ನು ಈ ಹೋರಾಟದಲ್ಲಿ ತೊಡಗಿಸಲು ಸಾಧ್ಯವಾಗಿದೆ. ಇಡೀ ಚಳುವಳಿ ಜಿಲ್ಲೆಯಲ್ಲಿ ದಲಿತ ಸಮುದಾಯದ ನಡುವೆ ಉತ್ತಮ ಪ್ರಭಾವವನ್ನು ತಂದುಕೊಟ್ಟಿದೆ ಮಾತ್ರವಲ್ಲಾ ಕಮ್ಯೂನಿಸ್ಟರಿಂದ ಮಾತ್ರ ಇಂತಹ ಚಳುವಳಿಗಳನ್ನು ನಿರ್ಣಾಯಕ ಹಂತಕ್ಕೆ ಕೊಂಡೊಯ್ಯಲು ಸಾಧ್ಯ ಎಂಬ ಭಾವನೆಯನ್ನು ಮೂಡಿಸಿದೆ.

ಅಡವಿಬಂಟೇನಹಳ್ಳಿ, ಹರುವನಹಳ್ಳಿ ಮತ್ತು ಹೊಸಗದ್ದೆ ರೈತರ ಭೂಮಿ ಹೋರಾಟ :

ಈ ಅವಧಿಯಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ನೇತೃತ್ವದಲ್ಲಿ ಮೂರು ಪ್ರಮುಖ ಭೂಮಿ ಹೋರಾಟಗಳನ್ನು ನಡೆಸಲಾಗಿದೆ. ಬೇಲೂರು ತಾಲ್ಲೂಕಿನ ಅಡವಿ ಬಂಟೇನಹಳ್ಳಿ ಗ್ರಾಮದಲ್ಲಿ ಸಾಗುವಳಿ ಮಾಡುತ್ತಿದ್ದ ಅರಣ್ಯ ಭೂಮಿಯಿಂದ ರೈತರನ್ನು ಒಕ್ಕಲೆಬ್ಬಿಸಲು ಅರಣ್ಯ ಇಲಾಖೆ ಕಾರ್ಯಾಚರಣೆ ನಡೆಸಿದಾಗ ಕೆಪಿಆರ್‌ಎಸ್ ನೇತೃತ್ವದಲ್ಲಿ ಸ್ಥಳದಲ್ಲೇ ಪ್ರತಿಭಟನೆ ನಡೆಸಿ ಕಾರ್ಯಾಚರಣೆಯನ್ನು ತಡೆಯಲಾಯಿತು. ನಂತರ ಸರ್ಕಾರಿ ಕರ್ತವ್ಯಕ್ಕೆ ಅಡ್ಡಿಪಡಿಸಿದರು ಎಂದು ರಾತ್ರೋರಾತ್ರಿ ಮೊಕದ್ದಮೆ ದಾಖಲಿಸಿ ನವೀನ್‌ಕುಮಾರ್, ಎಂ.ಜಿ.ಪೃಥ್ವಿ, ರಾಘವೇಂದ್ರ, ಮತ್ತು ಗ್ರಾಮದ ವಿರೂಪಾಕ್ಷರನ್ನು ಅಂದು ರಾತ್ರಿಯೇ ಬಂಧಿಸಿ ಜೈಲಿಗೆ ಕಳುಹಿಸಲಾಯಿತು. ಈ ಸಂದರ್ಭದಲ್ಲಿ ಮರುದಿನವೇ ಪಕ್ಷದ ರಾಜ್ಯ ಕಾರ್ಯದರ್ಶಿ ಕಾಂ.ಜಿ.ವಿ.ಶ್ರೀರಾಮರೆಡ್ಡಿ ಮತ್ತು ಉಸ್ತುವಾರಿ ಕಾಂ.ವರಲಕ್ಷ್ಮಿ, ರೈತ ಸಂಘದ ರಾಜ್ಯಾಧ್ಯಕ್ಷರಾಗಿದ್ದ ಕಾಂ.ಮಾರುತಿ ಮಾನ್ಪಡೆಯವರ ನೇತೃತ್ವದಲ್ಲಿ ಹಾಸನದಲ್ಲಿ ರಸ್ತೆ ತಡೆ ನಡೆಸಿ ಪ್ರತಿಭಟನೆ ನಡೆಸಲಾಯಿತು. ಮತ್ತೆ ಪ್ರತಿಭಟನೆ ಮುಂದುವರೆದು ಮಾರನೆ ದಿನ ಜಿಲ್ಲಾಧಿಕಾರಿ ಕಛೇರಿ ಎದುರು ಪ್ರತಿಭಟನೆ ನಡೆಸಲಾಯಿತು. ನಾಲ್ಕು ದಿನಗಳ ನಂತರ ಸಂಗಾತಿಗಳು ಜಾಮೀನಿನ ಮೇಲೆ ಬಿಡುಗಡೆಯಾದರು.

ಇದೇ ರೀತಿಯ ಭೂಮಿ ಹೋರಾಟವನ್ನು ಹಾಸನ ತಾಲ್ಲೂಕಿನ ಹರುವನಹಳ್ಳಿಯಲ್ಲಿ ಮತ್ತು ಸಕಲೇಶಪುರ ತಾಲ್ಲೂಕಿನ ಹೊಸಗದ್ದೆಯಲ್ಲಿ ನಡೆಸಲಾಗಿದೆ. ಇಲ್ಲಿಯೂ ಪೋಲೀಸರು ಕೇಸುಗಳನ್ನು ದಾಖಲಿಸಿದ್ದಾರೆ. ಈ ಮೂರೂ ಪ್ರದೇಶಗಳಲ್ಲಿ ನಡೆದ ಹೋರಾಟದಿಂದ ಸಾಗುವಳಿ ಮಾಡುತ್ತಿದ್ದ ಭೂಮಿಯನ್ನು ರೈತರಿಗೇ ಉಳಿಸಲು ಸಾಧ್ಯವಾಗಿದೆ.

ವಸತಿ ಮನೆ ನಿವೇಶನದ ಪ್ರಶ್ನೆಯ ಮೇಲೆ ನಡೆದ ವಿವಿಧ ಹಂತದ ಹೋರಾಟಗಳು:

ಜಿಲ್ಲೆಯ ಚಳುವಳಿಯ ಇತಿಹಾಸದಲ್ಲೇ ಈ ಹೋರಾಟ ಒಂದು ಹೊಸ ಮಾದರಿಯ ಹೋರಾಟ. ರಾಜ್ಯ ಸಮಿತಿಯ ಮಾರ್ಗದರ್ಶನದಿಂದ ಪಕ್ಷದ ಜಿಲ್ಲಾ ಸಮಿತಿಯು ಜಿಲ್ಲೆಯಲ್ಲಿರುವ ನಿವೇಶನ–ರಹಿತರ ಪ್ರಶ್ನೆಯನ್ನು ಗಂಭೀರವಾಗಿ ತೆಗೆದುಕೊಂಡು ಹೋರಾಟಕ್ಕೆ ಯೋಜನೆಯೊಂದನ್ನು ರೂಪಿಸಿತು. ಈ ಯೋಜನೆಯ ಪ್ರಕಾರ ಜಿಲ್ಲೆಯ 6 ತಾಲ್ಲೂಕುಗಳ 52 ಕೇಂದ್ರಗಳಲ್ಲಿ 3500ಕ್ಕೂ ಹೆಚ್ಚು ಮನೆ, ನಿವೇಶನ ರಹಿತರಿಂದ ಗ್ರಾಮಪಂಚಾಯಿತಿ, ಪಟ್ಟಣ ಪಂಚಾಯಿತಿ ಮತ್ತು ನಗರಸಭೆಗಳಿಗೆ ಅರ್ಜಿ ಹಾಕಿಸಿ ಸ್ಥಳೀಯ ಮಟ್ಟದಲ್ಲಿ ಹೋರಾಟ ಮತ್ತು ಸಮಾವೇಶಗಳನ್ನು ನಡೆಸಿ 2016 ನವೆಂಬರ್ 18 ರಂದು ಸಾವಿರಾರು ಸಂಖ್ಯೆಯಲ್ಲಿ ನಿವೇಶನ–ರಹಿತರಿಂದ ಹಾಸನದ ಜಿಲ್ಲಾಧಿಕಾರಿ ಕಛೇರಿಗೆ ಮುತ್ತಿಗೆ ಹಾಕಿ ಬೃಹತ್ "ಜೈಲ್ ಭರೋ" ಚಳುವಳಿಯನ್ನು ನಡೆಸಲಾಯಿತು. ಈ ಹೋರಾಟದಲ್ಲಿ ಉಸ್ತುವಾರಿ ಕಾಂ.ಎಸ್.ವರಲಕ್ಷ್ಮಿಯವರು ಸೇರಿದಂತೆ ನೂರಾರು ಜನರನ್ನು ಸಾಮೂಹಿಕವಾಗಿ ಬಂಧಿಸಿ ಬಿಡುಗಡೆ ಮಾಡಲಾಯಿತು.

ಸಮ್ಮೇಳನದಲ್ಲಿ ಕೈಗೊಂಡ ಸ್ಥಳೀಯ ಪ್ರಶ್ನೆಗಳ ಪ್ರಮುಖ ನಿರ್ಣಯಗಳು

- ಕೋಮುವಾದ ವಿರೋಧಿಸಿ, ಸೌಹಾರ್ದತೆಗಾಗಿ ಆಗ್ರಹಿಸಿ ಮತ್ತು "ಸೌಹಾರ್ದತೆಗಾಗಿ ಕರ್ನಾಟಕ" ಮಾನವ ಸರಪಳಿಯನ್ನು ಬೆಂಬಲಿಸಿ
- ಹಾಸನ ನಗರದ ಎನ್.ಆರ್. ವೃತ್ತದಿಂದ ಹೊಸ ಬಸ್‌ನಿಲ್ದಾಣದವರೆಗೆ ಮೇಲ್ ಸೇತುವೆ ನಿರ್ಮಿಸಲು ಆಗ್ರಹಿಸಿ
- ಮಲೆನಾಡಿ ಭಾಗದಲ್ಲಿನ ಕಾಡಾನೆ ಹಾವಳಿಯನ್ನು ನಿಯಂತ್ರಿಸಲು ಅದಕ್ಕಾಗಿ ಆನೆ ಕಾರಿಡಾರ್, ಆನೆಧಾಮ ನಿರ್ಮಿಸಬೇಕೆಂದು ಒತ್ತಾಯಿಸಿ
- ಪ್ಲಾಂಟೇಷನ್ ಕಾರ್ಮಿಕರಿಗೆ ಸರ್ಕಾರ ನಿಗದಿ ಪಡಿಸಿದ ಕನಿಷ್ಠ ಕೂಲಿಗಿಂತ ಕಡಿಮೆಯಿಲ್ಲದಂತೆ ಕೂಲಿಗೆ ಆಗ್ರಹಿಸಿ
- ರೈತರ ಬೆಳೆಗೆ ಬೆಂಬಲ ಬೆಲೆ ನಿಗದಿ ಪಡಿಸಲು ಮತ್ತು ರೈತರ ಸಂಪೂರ್ಣ ಸಾಲ ಮನ್ನಾಕ್ಕೆ ಆಗ್ರಹಿಸಿ
- ಹಾಸನ ಜಿಲ್ಲೆಯ ಎಲ್ಲ ತಾಲ್ಲೂಕು ಕೇಂದ್ರ ಮತ್ತು ಗ್ರಾಮಗಳಲ್ಲಿ ಶುದ್ಧ ಕುಡಿಯುವ ನೀರು, ವೈಜ್ಞಾನಿಕ ಕಸದ ನಿರ್ವಹಣೆ ಹಾಗೂ ಸ್ವಚ್ಛತೆ ಮತ್ತು ರಸ್ತೆಗಳ ದುರಸ್ತೀಕರಣಕ್ಕೆ ಆಗ್ರಹಿಸಿ
- ಎಲ್ಲಾ ಬಡವರಿಗೂ ಮನೆ ನಿವೇಶನಕ್ಕೆ ಆಗ್ರಹಿಸಿ
- ಬಗರ್‌ಹುಕುಂ ಮತ್ತು ಅರಣ್ಯ ಭೂಮಿ ಸಾಗುವಳಿಯನ್ನು ಸಕ್ರಮ ಮಾಡಲು ಒತ್ತಾಯಿಸಿ ಸೇರಿದಂತೆ ಇನ್ನು ಹಲವು ನಿರ್ಣಯಗಳನ್ನು ಕೈಗೊಳ್ಳಲಾಯಿತು.

ನೂತನ ಜಿಲ್ಲಾ ಸಂಘಟನಾ ಸಮಿತಿ ಆಯ್ಕೆ:

ಸಿಪಿಐ(ಎಂ) ಜಿಲ್ಲಾ ಸಮ್ಮೇಳನವು ನೂತನ ಜಿಲ್ಲಾ ಸಂಘಟನಾ ಸಮಿತಿಯನ್ನು ಸರ್ವಾನುಮತದಿಂದ ಆಯ್ಕೆ ಮಾಡಿದ್ದು ಧರ್ಮೇಶ್‌ರವರು ಜಿಲ್ಲಾ ಕಾರ್ಯದರ್ಶಿಯಾಗಿ ಪುನರ್ ಆಯ್ಕೆಯಾಗಿದ್ದಾರೆ. ಮತ್ತು ಜಿಲ್ಲಾ ಸಂಘಟನಾ ಸಮಿತಿ ಸದಸ್ಯರುಗಳಾಗಿ ವಿ. ಸುಕುಮಾರ್, ಜಿ.ಪಿ. ಸತ್ಯನಾರಾಯಣ, ಎಚ್. ಆರ್. ನವೀನ್‌ಕುಮಾರ್, ಎಂ.ಜಿ. ಪೃಥ್ವಿ ಡಿ.ಎಲ್. ರಾಘವೇಂದ್ರ, ಎ. ಹರೀಶ್, ಕೆ.ಎಲ್. ಮಂಜುನಾಥ್, ಅರವಿಂದ್, ಸೌಮ್ಯ ಮತ್ತು ವಸಂತ್ ಕುಮಾರ್ ರವರು ಆಯ್ಕೆಯಾಗಿದ್ದಾರೆ. ■

ಬಿಬಿಎಂಪಿ ವಿಭಜನೆಗೆ ಸಿಪಿಎಂ ಒತ್ತಾಯ............ ಪುಟ 9 ರಿಂದ

ಕಾರ್ಯದರ್ಶಿಯಾಗಿ ಪುನರಾಯ್ಕೆ ಆಗಿದ್ದಾರೆ.

ಸಮ್ಮೇಳನಕ್ಕೂ ಪೂರ್ವದಲ್ಲಿ ಸಿಪಿಎಂ ಕಾರ್ಯಕರ್ತರು ಜಿಗಣಿ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಸಿದರು. ಸಮ್ಮೇಳನದ ಅಂಗವಾಗಿ ಬೃಹತ್ ಸಾರ್ವಜನಿಕ ಸಭೆ ಏರ್ಪಡಿಸಲಾಗಿತ್ತು. ಸಭೆಯಲ್ಲಿ ಸಿಪಿಎಂ ಮುಖಂಡರಾದ ಜಿಎನ್ ನಾಗರಾಜ್, ಮೀನಾಕ್ಷಿ ಸುಂದರಂ, ಕೆ ಪ್ರಕಾಶ್ ಹಾಗು ಪತ್ರಕರ್ತ ಶೂದ್ರ ಶ್ರೀನಿವಾಸ್ ಮಾತನಾಡಿದರು.

ಗೌರಿ ಸ್ಮರಣಾರ್ಥ ಏರ್ಪಡಿಸಿದ್ದ ಗೌರಿ ಕಾರ್ನರ್ ಛಾಯಾಚಿತ್ರ ಪ್ರದರ್ಶನ ಉದ್ಘಾಟಿಸಿ ವೀಕ್ಷಿಸುತ್ತಿರುವ ಶೂದ್ರ ಶ್ರೀನಿವಾಸ್, ಕೆಎಸ್ ವಿಮಲಾ, ಕೆಎನ್ ಉಮೇಶ್, ಮೀನಾಕ್ಷಿ ಸುಂದರಂ.



ಗೌರವಾರ್ಪಣೆ:

ಇದೇ ವೇದಿಕೆಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಾಧಕರನ್ನು ಗೌರವಿಸಲಾಯಿತು. ಗೌರವ ಸ್ವೀಕರಿಸಿದವರು: ಪತ್ರಕರ್ತ & ಸಾಹಿತಿ ಶೂದ್ರ ಶ್ರೀನಿವಾಸ್, ವಿಜ್ಞಾನಿ ವೈ.ಸಿ.ಸುಬ್ರಮಣ್ಯ, ಹಿರಿಯ ಕಾರ್ಮಿಕ ಮುಖಂಡ ಕೆಎಸ್ ಸುಬ್ರಮಣ್ಯ, ನಿವೃತ್ತ ಟೆಲಿಕಾಂ ಅಧಿಕಾರಿ ಸಬ್ರಮಣ್ಯಗುಪ್ತ.

ವಿಶೇಷ ಗೋಷ್ಠಿ:

ಸೌಹಾರ್ದ ಕರ್ನಾಟಕಕ್ಕಾಗಿ ಪ್ರಗತಿಪರರು ಜನವರಿ 30 ರಂದು ಸಂಘಟಿಸಿರುವ ಚಾರಿತ್ರಿಕ ಮಾನವ ಸರಪಳಿ ಯಶಸ್ವಿಗೊಳಿಸುವ ವಿಶೇಷ ಗೋಷ್ಠಿ ನಡೆಯಿತು. ಗೋಷ್ಠಿ ಉದ್ದೇಶಿಸಿ ಜಿಎನ್ ನಾಗರಾಜ್ ಮಾತನಾಡಿದರು. ಈ ಸಂಬಂಧ ಕೈಗೊಳ್ಳಲಾದ ನಿರ್ಣಯವನ್ನು ಬೆಂಬಲಿಸಿ ಪ್ರತಿನಿಧಿಗಳು ಮಾತನಾಡಿದರು.

ರಾಜ್ಯದಲ್ಲಿ ಮುಂಬರುವ ವಿಧಾನಸಭೆ ಮತ್ತು ಪದವೀಧರರ



ಕ್ಷೇತ್ರದ ವಿಧಾನಪರಿಷತ್ ಚುನಾವಣೆ ಎದುರಿಸುವ ಬಗೆ, ಪಕ್ಷದ ಸ್ಪರ್ಧೆ, ಪೂರ್ವ ತಯಾರಿ ಸಂಬಂಧ ವಿಶೇಷ ಚರ್ಚೆ ನಡೆಸಲಾಯಿತು.

'ಗೌರಿ ಕಾರ್ನರ್' – ಸಮ್ಮೇಳನದಲ್ಲಿ ಪತ್ರಕರ್ತೆ ಗೌರಿ ಲಂಕೇಶ್ ಸ್ಮರಣಾರ್ಥ ಗೌರಿ ಕಾರ್ನರ್ ಎಂಬ ಛಾಯಾಚಿತ್ರ ಪ್ರದರ್ಶನದ ಜತೆ ಕೋಮುವಾದಿ ದಾಳಿಗಳ ಕುರಿತ ಚಿತ್ರ ಪ್ರದರ್ಶನ ಏರ್ಪಡಿಸಲಾಗಿತ್ತು. ಪತ್ರಕರ್ತ ಶೂದ್ರ ಶ್ರೀನಿವಾಸ್ ಇದನ್ನು ಉದ್ಘಾಟಿಸಿದರು.

ಪುಸ್ತಕ ಲೋಕಾರ್ಪಣೆ:

ಅರ್ಥಶಾಸ್ತ್ರಜ್ಞ ಪ್ರಭಾತ್ ಪಟ್ನಾಯಕ್ ಬರೆದಿರುವ "ರಾಷ್ಟ್ರೀಯವಾದ–ಹಿಂದುತ್ವ ಮತ್ತು ಪ್ರಜಾಪ್ರಭುತ್ವ", "ನೋಟು ರದ್ದತಿ, ಜಿಎಸ್‌ಟಿ, ಸುಧೀಶ್ ಮಿನ್ನಿ ಬರೆದಿರುವ ನರಕದ ಗರ್ಭಗುಡಿಯೊಳಗೆ ಈ ಮೂರು ಪುಸ್ತಕಗಳನ್ನು ಲೋಕಾರ್ಪಣೆ ಮಾಡಲಾಯಿತು.

ಪುಸ್ತಕ ಮಾಲಾ ಮತ್ತು ಕ್ರಿಯಾ ಮಾಧ್ಯಮ ದಿಂದ ಪುಸ್ತಕ ಪ್ರದರ್ಶನ–ಮಾರಾಟ ಏರ್ಪಾಡಾಗಿದ್ದು, 20 ಸಾವಿರ ರೂಪಾಯಿ ಮೌಲ್ಯದ ಪುಸ್ತಕ ಮಾರಾಟವಾಯಿತು. ■

ಸಿಪಿಐ(ಎಂ) ದ.ಕ.ಜಿಲ್ಲಾ ಸಮ್ಮೇಳನ ಉದ್ಘಾಟನೆ

ಜಾತ್ಯಾತೀತ ಮೌಲ್ಯಗಳು ನಾಶವಾದರೆ ಸ್ವಾತಂತ್ರ್ಯ ಸಾರ್ವಭೌಮತೆ ಉಳಿಯುವುದಿಲ್ಲ: ಜಿ.ವಿ.ಎಸ್.

ಬಹು ನಾಗರಿಕತೆ, ಬಹುಸಂಸ್ಕೃತಿ, ಬಹುಭಾಷೆ, ಬಹುಧರ್ಮ, ಬಹುಜಾತಿಗಳು ಭಾರತದ ಬಹುತ್ವದ ಕಲ್ಪನೆಯ ಆಧಾರವಾಗಿದೆ. ಭಿನ್ನತೆಯಲ್ಲಿ ಏಕತೆ. ಬಹುತ್ವದಿಂದಾಗಿ ಒಂದು ಸಹಜ ಸಮಾನತೆ ನಮ್ಮ ದೇಶದಲ್ಲಿತ್ತು. ಭಾರತದ ಸಂವಿಧಾನವು ಅದನ್ನು ದೃಢಪಡಿಸಿತು. ಸಂವಿಧಾನದ ಅಡಿಪಾಯವಾದ ಜಾತ್ಯತೀತ ಮೌಲ್ಯಗಳು ನಾಶವಾದರೆ ದೇಶದ ಸ್ವಾತಂತ್ರ್ಯ ಸಾರ್ವಭೌಮತೆ ಉಳಿಯುವುದಿಲ್ಲ. ಈ ಜಾತ್ಯತೀತ ಮೌಲ್ಯಗಳನ್ನು ಕಾಪಾಡಲು ಭಾರತದ ಜನತೆ ಎದ್ದು ನಿಲ್ಲಬೇಕಾಗಿದೆ. ಜನತೆಯನ್ನು ಈ ನಿಟ್ಟಿನಲ್ಲಿ ಸಜ್ಜುಗೊಳಿಸುವಲ್ಲಿ ಸಿಪಿಐ(ಎಂ) ಮತ್ತು ಎಡಪಕ್ಷಗಳಿಗೆ ವಿಶೇಷ ಪಾತ್ರವಿದೆ ಎಂಬುದಾಗಿ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ ನುಡಿದರು.

ಅವರು ಮಂಗಳೂರಿನ ಬೋಳಾರದ ಕಾಪ್ರಸನ್ನ ಕುಮಾರ್ ನಗರದ, ಕಾಪೂವಪ್ಪ ಸಾಲ್ಯಾನ್ ಸಭಾಂಗಣದ ಕಾಅಬ್ರಹಾಂ ಕರ್ಕಡ ವೇದಿಕೆಯಲ್ಲಿ ಡಿಸೆಂಬರ್ 17 ರಂದು ಸಿಪಿಐ(ಎಂ) 22ನೇ ದ.ಕ.ಜಿಲ್ಲಾ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಸಿಪಿಐ(ಎಂ) ಪಕ್ಷದ ಸಮ್ಮೇಳನ ನಡೆಯುತ್ತಿರುವ ಸಂದರ್ಭದಲ್ಲಿ ನಮ್ಮ ದೇಶ ಯಾವ ಒಂದು ಆರ್ಥಿಕ, ಸಾಮಾಜಿಕ, ರಾಜಕೀಯ ಪರಿಸ್ಥಿತಿಗಳನ್ನು ಎದುರಿಸುತ್ತಿದೆ ಎಂಬುದನ್ನು ಅರ್ಥೈಸಬೇಕಾಗಿದೆ. ಕೋಮುವಾದ ಮತ್ತು ನವ ಉದಾರೀಕರಣ ನೀತಿಗಳು ಇಂದಿನ ನಮ್ಮ ದೇಶದ ಆಳ್ವಿಕೆಯ ಕೇಂದ್ರ ಕಲ್ಪನೆಯಾಗಿದೆ. ಅವು ಒಂದೆಡೆ ದೇಶದ ಕಲ್ಪನೆಯನ್ನೂ ಇನ್ನೊಂದೆಡೆ ಸಾರ್ವಭೌಮತೆಯನ್ನೂ ನಾಶ ಮಾಡಿವೆ.

ಬೌದ್ಧ, ಜೈನ, ಸಿಖ್, ಹಿಂದೂ ಧರ್ಮಗಳು ನಮ್ಮ ದೇಶದಲ್ಲೇ ಹುಟ್ಟಿ ಬಂದ ಧರ್ಮಗಳು. 1200 ವರ್ಷಗಳಷ್ಟು ಹಿಂದೆಯೇ ಇಸ್ಲಾಂ ಧರ್ಮ ಭಾರತಕ್ಕೆ ಬಂದಿದೆ. ಕ್ರೈಸ್ತ ಧರ್ಮವೂ ಸಾವಿರ ವರ್ಷಗಳ ಹಿಂದೆಯೇ ಭಾರತಕ್ಕೆ ಬಂದಿದೆ. ಇಷ್ಟಿದ್ದರೂ ಹಿಂದೂತ್ವದ ಏಕ ಸಂಸ್ಕೃತಿಯನ್ನು ಸಾರುವ ಅಪಾಯಕಾರಿ ಶಕ್ತಿಗಳು ಇವತ್ತು ಕೇಂದ್ರದಲ್ಲಿ ಅಧಿಕಾರದಲ್ಲಿದೆ.



ಇನ್ನೊಂದೆಡೆ ನವ ಉದಾರೀಕರಣದ ನೀತಿಗಳನ್ನೇ ಕೇಂದ್ರದಲ್ಲಿರುವ ಸರಕಾರ ಮುಂದುವರಿಸುತ್ತಿದ್ದು, ಇದರಿಂದಾಗಿ ಬಹು ಸಂಖ್ಯಾ ನಾಗರಿಕರ ಬದುಕು ನಾಶವಾಗಿ ಹೋಗಿದೆ. ಆರ್ಥಿಕ ಅಸಮಾನತೆ ವಿಪರೀತವಾಗಿದೆ. 99% ದೇಶದ ಸಂಪತ್ತು ಕೇವಲ 1% ಜನರ ಕೈಯಲ್ಲಿದೆ. 99% ಜನರಲ್ಲಿ ಕೇವಲ 1% ಸಂಪತ್ತು ಇದೆ. ದಿನಕ್ಕೆ ರೂ.20 ಆದಾಯ 60% ಜನರದ್ದಾಗಿದೆ ಇದಕ್ಕೆ ವಿರುದ್ಧವಾಗಿ ಅಂಬಾನಿಗಳ ಆದಾಯ ಕೋಟಿ ರೂಪಾಯಿಗಳಲ್ಲಿದೆ. ದೇಶದಲ್ಲಿ 30 ಕೋಟಿ ಕುಟುಂಬಗಳಿಗೆ ವಾಸ ಮಾಡಲು ಯೋಗ್ಯವಾದ ಮನೆಗಳಿಲ್ಲ. ಆದರೆ ಮುಕೇಶ್ ಅಂಬಾನಿ ಒಬ್ಬರೇ ರೂ.5500 ಕೋಟಿ ಬೆಲೆಯ ಮನೆ ಹೊಂದಿದ್ದಾರೆ.

ಇನ್ನೂರು ವರ್ಷ ಬ್ರಿಟಿಷರ ವಿರುದ್ಧ ಹೋರಾಟ ನಡೆಸಿ ಗಳಿಸಿದ ಸ್ವಾತಂತ್ರ್ಯ ಮತ್ತು ಸಂವಿಧಾನ ಕೊಡಮಾಡಿದ ಸಾರ್ವಭೌಮತೆಯನ್ನು ದೇಶ ಕಳೆದುಕೊಳ್ಳುವಂತಹ ಪರಿಸ್ಥಿತಿ ಇದೆ. ಭಾರತದ ಸಂಪತ್ತು ಶಾಸನ ಸಭೆಗಳು ದೇಶದ ಆರ್ಥಿಕ ನೀತಿಗಳನ್ನು ರೂಪಿಸುವ ಬದಲು ಅಂತಾರಾಷ್ಟ್ರೀಯ ಹಣಕಾಸು ಸಂಸ್ಥೆಗಳು ರೂಪಿಸುತ್ತಿವೆ. ಭಾರತದ ಜನತೆಯ ಕೈಯಲ್ಲಿ ಉಳಿದಿರುವುದು ಮತ ಚಲಾಯಿಸುವ ಹಕ್ಕು ಮಾತ್ರ ಎಂಬುದಾಗಿ ಜಿ.ವಿ.ಶ್ರೀರಾಮರೆಡ್ಡಿ ವ್ಯಂಗ್ಯವಾಡಿದರು.

ಸಮ್ಮೇಳನದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ಹಿರಿಯ ಕಮ್ಯೂನಿಸ್ಟ್ ನಾಯಕ ಕೆ.ಆರ್.ಶ್ರೀಯಾನ್ ವಹಿಸಿದ್ದರು. ಮೂರು ವರ್ಷಗಳ ಹಿಂದೆ ಸಿಪಿಐ(ಎಂ) ಸಮ್ಮೇಳನಗಳು ನಡೆಯುವ ವೇಳೆ ಬಿಜೆಪಿ ನೇತೃತ್ವದ ಸರಕಾರ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಿತ್ತು. ಬಿಜೆಪಿ ಒಂದು ಕೋಮುವಾದಿ ಪಕ್ಷ; ಅದು ಅಧಿಕಾರಕ್ಕೆ ಬರಕೂಡದು ಎಂದು ಸಿಪಿಐ(ಎಂ) ಪಕ್ಷ ಅದಕ್ಕೂ ಮೊದಲು ಸತತ ಹೋರಾಟ ಮಾಡಿತ್ತು. ಈಗ ಅಧಿಕಾರಕ್ಕೆ ಬಂದಿರುವ ಬಿಜೆಪಿಯನ್ನು ಶತಾಯ ಗತಾಯ ಸೋಲಿಸಬೇಕಾದ ನಿರ್ಣಾಯಕ ಹೋರಾಟ ನಮ್ಮ ಮುಂದಿದೆ ಎಂಬ ಸವಾಲನ್ನು ಪಕ್ಷದ ಕಳೆದ ಸಮ್ಮೇಳನ ಮುಂದಿಟ್ಟಿತ್ತು. ಅದನ್ನು ನಡೆಸಿ ಕೊಡಬೇಕಾದ ಸವಾಲು ಇಂದಿಗೂ ಇದೆ ಎಂದು ಕೆ.ಆರ್.ಶ್ರೀಯಾನ್ ಹೇಳಿದರು.

ಜನತೆಗೆ ಲೋಕಸಭಾ ಚುನಾವಣೆಯ ವೇಳೆಗೆ ಹಲವು ಭರವಸೆಗಳನ್ನು ಬಿಜೆಪಿ ನೀಡಿತ್ತು. ಕಾರ್ಪೊರೇಟ್ ಬೆಂಬಲದಲ್ಲಿ ದೊಡ್ಡ ಪ್ರಮಾಣದಲ್ಲಿ ನಡೆದಿದ್ದ ಬಿಜೆಪಿ ಪ್ರಚಾರವನ್ನು ನಂಬಿ ಜನ ಅವರನ್ನು ಅಧಿಕಾರಕ್ಕೆ ತಂದರು. ಆದರೆ ಅವರ ಭರವಸೆಗಳೇನಾಗಿದೆ? 100 ದಿನಗಳಲ್ಲಿ ವಿದೇಶೀ ಕಪ್ಪುಹಣ ತರುತ್ತೇವೆಂಬ ಮಾತು ಸುಳ್ಳಾಗಿದೆ. ವರ್ಷಕ್ಕೆ 2 ಕೋಟಿ ಬಿಡಿ 15 ಲಕ್ಷ ಉದ್ಯೋಗವಷ್ಟೇ ಸೃಷ್ಟಿ ಮಾಡಲಾಗಿದೆ. ರೈತರಿಗೆ ಮೂರುಪಟ್ಟು ಬೆಲೆ ಕೊಡುವ ಮಾತು ಗಾಳಿಯಲ್ಲೇ ಕರಗಿ ಹೋಗಿದೆ. ಅದರ ಬದಲು ವರ್ಷದ ಹಿಂದೆ ಮಾಡಿದ ನೋಟು ಅಮಾನ್ಯೀಕರಣದಿಂದ ರೈತರು, ಕಾರ್ಮಿಕರು, ಸಾಮಾನ್ಯ ಜನ ತೀರಾ ಬಳಲಿ ಹೋಗುವಂತಾಗಿದೆ. ಇತ್ತೀಚೆಗೆ ಪಾರ್ಲಿಮೆಂಟಿನಲ್ಲಿ ಮಂಡಿತವಾಗಿರುವ ವಿಮೆ ಹಾಗೂ ಬ್ಯಾಂಕಿಂಗ್ ಸಂಬಂಧಿತ ಮಸೂದೆಯ, ಬ್ಯಾಂಕ್‌ಗಳಲ್ಲಿ ಉದ್ಯಮಿ ಸಾಲಗಾರರ ಮರುಪಾವತಿ ಬಾಕಿ ಕೊರತೆ ಭರ್ತಿ ಮಾಡಲು ಜನಸಾಮಾನ್ಯರ ಠೇವಣಿಯನ್ನು ಕಿತ್ತುಕೊಳ್ಳಲು ಅವಕಾಶ ಮಾಡಿಕೊಟ್ಟಿರುವ ಅನರ್ಥಕಾರಿ ಮಸೂದೆ ಎಂಬುದಾಗಿ ಕೆ. ಆರ್. ಶ್ರೀಯಾನ್ ಟೀಕಿಸಿದರು.

ಜನವಿರೋಧಿ ಆರ್ಥಿಕ ನೀತಿಗಳ ಜೊತೆಗೆ ಕೋಮುವಾದಿ ದಾಳಿಗಳೊಂದಿಗೆ ಭಾರತದ ಜನತೆಗೆ ಅಪಾಯಕಾರಿಯಾದ ಶಕ್ತಿಗಳನ್ನು ಎದುರಿಸಲು ಸಿಪಿಐ(ಎಂ) ಸಜ್ಜಾಗಬೇಕೆಂದು ಕೆ.ಆರ್.ಶ್ರೀಯಾನ್ ಕರೆ ನೀಡಿದರು.

ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿ ಸ್ವಾಗತಿಸಿದರು. ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಯಾದವ ಶೆಟ್ಟಿ ಧನ್ಯವಾದವಿತ್ತರು. ಪಕ್ಷದ ಜಿಲ್ಲಾ ಸಮಿತಿ ಸದಸ್ಯರಾದ ಜೆ.ಬಾಲಕೃಷ್ಣ ಶೆಟ್ಟಿ, ಯು.ಬಿ.ಲೋಕಯ್ಯ, ಸುನಿಲ್ ಕುಮಾರ್ ಬಜಾಲ್, ಕೃಷ್ಣಪ್ಪ ಸಾಲ್ಯಾನ್, ಪದ್ಮಾವತಿ ಶೆಟ್ಟಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಮೊದಲಲ್ಲಿ ನಡೆದ ಪಕ್ಷದ ಧ್ವಜಾರೋಹಣವನ್ನು ಹಿರಿಯ ಸಿಪಿಐ(ಎಂ) ಮುಖಂಡ ಬಿ.ವಾಸು ಗಟ್ಟಿ ನೆರವೇರಿಸಿ, ಶುಭಕೋರಿದರು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೋಮುವಾದಿ ಶಕ್ತಿಗಳನ್ನು ಸೋಲಿಸಿ, ಜಾತ್ಯಾತೀತ ಹಾಗೂ ಸೌಹಾರ್ದ ಶಕ್ತಿಗಳನ್ನು ಬಲಪಡಿಸಬೇಕೆಂಬ ನಿರ್ಣಯವನ್ನು ಉದ್ಘಾಟನಾ ಸಮಾರಂಭದಲ್ಲಿ ಕೈಗೊಳ್ಳಲಾಯಿತು. ●

ಹುರುಪು ಹೆಚ್ಚಿಸಿದ ಸಿಪಿಐ(ಎಂ) ದ.ಕ. ಸಮ್ಮೇಳನ... ಪುಟ 8 ರಿಂದ

ಬೀಡಿ ಉದ್ಯಮ ತುಂಬಾ ಬಿಕ್ಕಟ್ಟಿನಲ್ಲಿರುವುದು ದೊಡ್ಡ ಸವಾಲಾಗಿದೆ.

ಸಮ್ಮೇಳನದ ಕರಡು ವರದಿಯು ಜಿಲ್ಲೆಯಲ್ಲಿ ಪಕ್ಷದ ವಲಯವಾರು ಪ್ರಮುಖ ಚಟುವಟಿಕೆಗಳನ್ನು ಹಾಗೂ ಸಂಘಟನಾ ಪರಿಸ್ಥಿತಿಗಳನ್ನು ವಿಶ್ಲೇಷಿಸಿತು. ಕೆಲವು ವಲಯಗಳಲ್ಲಿ ಇದ್ದ ಅನೈಕ್ಯವನ್ನು ಸರಿಪಡಿಸುವಲ್ಲಿ ಜಿಲ್ಲಾ ಸಮಿತಿಯು ಪಕ್ಷದ ಸಂಘಟನಾ ತತ್ವಗನುಗುಣವಾಗಿ ಹೇಗೆ ಕೆಲಸ ಮಾಡಿತು ಎಂಬುದನ್ನು ವರದಿ ವಿವರಿಸಿತು. ವರದಿ ಮಂಡನೆ ಬಳಿಕ ವಿವಿಧ ವಲಯಗಳ 21 ಪ್ರತಿನಿಧಿಗಳು ನಡೆಸಿದ ಚರ್ಚೆಯಲ್ಲಿ ಜಿಲ್ಲೆಯಲ್ಲಿ ಒಂದು ಸಂಘಟನಾ ಏಕತೆಯನ್ನು ಮೂಡಿಸಬೇಕಾಗಿದೆ ಎಂಬ ಅಂಶದ ಬಗ್ಗೆ ಒತ್ತು ಕಂಡು ಬಂದಿತು. ಈ ಉತ್ಸಾಹದಲ್ಲಿ, ವರದಿಯಲ್ಲಿ ಕಾಣಿಸಿದ ಶ್ಲಾಘನೀಯ ಚಟುವಟಿಕೆಗಳ ಬಗ್ಗೆ ಎತ್ತಿ ಹೇಳುವಲ್ಲಿ ಪ್ರತಿನಿಧಿಗಳು ಹಿಂದೆ ಬಿದ್ದರು. ಪ್ರತಿನಿಧಿಗಳ ಆತಂಕಕ್ಕೆ ಕಾರ್ಯದರ್ಶಿ ವಸಂತ ಆಚಾರಿಯವರು ಜಿಲ್ಲಾ ಸಮಿತಿಯ ಪರವಾಗಿ ನೀಡಿದ ಉತ್ತರವು ಪ್ರತಿನಿಧಿಗಳಿಗೆ ತಮ್ಮ ಸಂಘಟಿತ ಶಕ್ತಿಯ ಬಗ್ಗೆ ಭರವಸೆ ಹುಟ್ಟಿಸಿ ಹೊಸ ಹುರುಪು ಮೂಡಿಸಿತು.

ಜಿಲ್ಲಾ ಸಮ್ಮೇಳನ ರಾಜ್ಯ ಸಮ್ಮೇಳನಕ್ಕೆ ಪ್ರತಿನಿಧಿಗಳನ್ನೂ, ಜಿಲ್ಲಾ ಸಮಿತಿಯ ಸದಸ್ಯರನ್ನೂ ಹಾಗೂ ಜಿಲ್ಲಾ ಕಾರ್ಯದರ್ಶಿಯನ್ನೂ ಆಯ್ಕೆ ಮಾಡಿತು. ಕಾ. ವಸಂತ ಆಚಾರಿಯವರು ಜಿಲ್ಲಾ ಕಾರ್ಯದರ್ಶಿಯಾಗಿ ಪುನರಾಯ್ಕೆಯಾದರು.

ಪಕ್ಷದ ರಾಜ್ಯ ಸಮಿತಿ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿಯವರು ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ್ದಲ್ಲದೆ, ಸಮ್ಮೇಳನಕ್ಕೆ ಮಾರ್ಗದರ್ಶನ ನೀಡಿದರು.

ಕಾಸುಂದರ ಶೆಟ್ಟಿಯವರಿಗೆ ಸಮ್ಮೇಳನದಲ್ಲಿ ಸನ್ಮಾನ:

ಎರಡನೆಯ ದಿನ ಮಧ್ಯಂತರದಲ್ಲಿ ಸಂಗಾತಿಗಳನ್ನು ಸ್ಪೂರ್ತಿ ತುಂಬಿ ರೋಮಾಂಚನಗೊಳಿಸಿದ ವಿಶೇಷ ನಡೆಯಿತು. ಹಿಂದೆ ಮುಂಬಯಿಯಲ್ಲಿ ಏರ್ ಇಂಡಿಯಾದಲ್ಲಿ ನೌಕರರಾಗಿ ನಿವೃತ್ತರಾದ ಕಾಸುಂದರ ಶೆಟ್ಟಿ ಅವರಿಗೆ ಈಗ 82 ವರ್ಷ ಪ್ರಾಯ. ಮೂಡಬಿದ್ರಿ ವಲಯದ ಪಕ್ಷ ಚಟುವಟಿಕೆಗಳಲ್ಲಿ ಅವರು ಯಾವಾಗಲೂ ಚುರುಕಾಗಿ ಓಡಾಡಿಕೊಂಡಿರುತ್ತಾರೆ. ಮೂಡಬಿದ್ರಿ ನಗರದಲ್ಲಿ ಅವರು 5.5 ಲಕ್ಷ ಗಳಿಗೆ ಜಮೀನನ್ನು ಖರೀದಿಸಿ ಪಕ್ಷಕ್ಕೆ ಹಸ್ತಾಂತರಿಸುವ ಪ್ರಕ್ರಿಯೆ ನಡೆದಿದೆ. ಈ ವಿಷಯ ವಸಂತ ಆಚಾರಿಯವರು ಪ್ರಕಟಿಸಿದ, ಎರಡೇ ನಿಮಿಷಗಳಲ್ಲಿ ರಾಜ್ಯ ಸಮಿತಿ ಸದಸ್ಯ ಕಾಯಾದವ ಶೆಟ್ಟಿಯವರು ಕಾಸುಂದರ ಶೆಟ್ಟಿಯವರನ್ನು ಸಮ್ಮೇಳನ ವೇದಿಕೆಗೆ ಕರೆ ತಂದಾಗ ಇಡೇ ಸಭಾಂಗಣವೇ ಆನಂದತುಂದಿಲವಾಯಿತು.

ರಾಜ್ಯದ ಹಿರಿಯ ಪಕ್ಷದ ನಾಯಕ ಕೆ.ಆರ್.ಶ್ರೀಯಾನ್ ಮತ್ತು ರಾಜ್ಯ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ ಯವರು ಕಾಸುಂದರ ಶೆಟ್ಟಿಯವರಿಗೆ ಶಾಲು ಹೊದಿಸಿ, ಹಾರ ತೊಡಿಸಿ ಸನ್ಮಾನಿಸಿದರು. ಇಡೀ ಸಭಾಂಗಣದ ತುಂಬ ಲಾಲ್ ಸಲಾಮ್, ರೆಡ್ ಸೆಲ್ಯೂಟ್ ಘೋಷಣೆಗಳು ಕಿವಿಗಪ್ಪಳಿಸಿತು. ●

ಸಿಪಿಐ(ಎಂ) 10ನೇ ಉ.ಕನ್ನಡ ಜಿಲ್ಲಾ ಸಮೇಳನ... ಪುಟ 8 ರಿಂದ

ನೂತನ ಸಮಿತಿ ಆಯ್ಕೆ:

15 ಜನರ ನೂತನ ಜಿಲ್ಲಾ ಸಮಿತಿಗೆ ಕಾರ್ಯದರ್ಶಿಯಾಗಿ ಶಾಂತಾರಾಮ ನಾಯಕ, ಕಾರ್ಯದರ್ಶಿ ಮಂಡಳಿ ಸದಸ್ಯರಾಗಿ ಯಮುನಾ ಗಾಂವಕರ, ತಿಲಕ ಗೌಡ, ಸುಭಾಷ ಕೊಪ್ಪಿಕರ, ಹರೀಶ ನಾಯ್ಕ, ಜಿಲ್ಲಾ ಸಮಿತಿಯ ಸದಸ್ಯರಾಗಿ ಸಿ.ಆರ್. ಶ್ಯಾನಭಾಗ, ಹೆಚ್.ಬಿ. ನಾಯಕ, ತಿಮ್ಮಪ್ಪ ಗೌಡ, ಶ್ಯಾಮನಾಥ ನಾಯ್ಕ, ಹರೀಶ ನಾಯ್ಕ, ಮೋಹಿನಿ ನಮಸೇಕರ, ಪ್ರೇಮಾನಂದ ವೇಳಿಪ, ನಾಗಪ್ಪ ನಾಯ್ಕ, ಆರ್.ಎಂ. ಮುಲ್ಲಾ, ಗೀತಾ ನಾಯ್ಕ ಭಟ್ಕಳ ಮತ್ತು ಜಯಶ್ರೀ ಹಿರೇಕರ ಆಯ್ಕೆಯಾದರು. ●



2ಜಿ ಪ್ರಕರಣಕ್ಕೂ ಮತ್ತೊಂದು ಚುನಾವಣಾ ಲೊಳಲೊಟ್ಟೆಯ 'ಸ್ಥಾನಮಾನ'?




1.76 ಲಕ್ಷ ಕೋಟಿ ರೂ.ಗಳಷ್ಟು ದೇಶದ ಖಜಾನೆಗೆ ನಷ್ಟ ಮಾಡಿದೆ ಎನ್ನಲಾದ 2ಜಿ ಹಗರಣ ನಿಜವಾಗಿಯೂ ಹಗರಣವೇ ಅಲ್ಲವೇನು? ಡಿಸೆಂಬರ್ 22ರಂದು ಹೊರಬಂದ ವಿಶೇಷ ಸಿಬಿಐ ನ್ಯಾಯಾಲಯದ ತೀರ್ಪಿನಂತೆ ಎಲ್ಲ ಆರೋಪಿಗಳ ಬಿಡುಗಡೆ ಅದೇ ಅರ್ಥ ಕೊಡುತ್ತದೆ. ಆರೋಪಿಯಾಗಿದ್ದ ದೂರಸಂಪರ್ಕ ಮಂತ್ರಿಗಳು ಮಾತ್ರವಲ್ಲ ಮಾಜಿ ಪ್ರಧಾನಿಗಳೂ ಸೇರಿದಂತೆ ಕಾಂಗ್ರೆಸ್ ಮುಖಂಡರು ಮತ್ತು ಆಗಿನ ಯುಪಿಎ ಅಂಗಪಕ್ಷಗಳ ಮುಖಂಡರು ಹಾಗೆಂದೇ ಹೇಳುತ್ತಿದ್ದಾರೆ.

2014ರಲ್ಲಿ ಗುಜರಾತಿನ ಮುಖ್ಯಮಂತ್ರಿಗಳು ದೇಶದ ಪ್ರಧಾನ ಮಂತ್ರಿಗಳಾಗಲು ಪ್ರತಿಯೊಬ್ಬರ ಖಾತೆಗೆ 15ಲಕ್ಷ ರೂ., ಯುವಜನರಿಗೆ 10 ಕೋಟಿ ಉದ್ಯೋಗ ಸೃಷ್ಟಿ, ರೈತರಿಗೆ ವೆಚ್ಚದ ಒಂದೂವರೆ ಪಟ್ಟು ಬೆಂಬಲ ಬೆಲೆಗಳ ಭರವಸೆಗಳೊಂದಿಗೆ ಪ್ರಮುಖ ಪಾತ್ರ ವಹಿಸಿದ '2ಜಿ ಹಗರಣ'ವೂ ಇನ್ನು ಆ ಭರವಸೆಗಳ ಸಾಲಿಗೆ ಸೇರುತ್ತದೆಯೇ? ಅಂದರೆ ಕೇವಲ ಚುನಾವಣಾ 'ಜುಮ್ಲಾ' ಅಂದರೆ ಲೊಳಲೊಟ್ಟೆಯಾಗುತ್ತದೆಯೇ? ಹಲವು ವಿಶ್ಲೇಷಕರು ಎತ್ತಿರುವ ಪ್ರಶ್ನೆ ಇದು.

ತೀರ್ಪಿನಲ್ಲಿ ಸಿಬಿಐ ಬಗ್ಗೆ ಇರುವ ಖಾರವಾದ ಟಿಪ್ಪಣಿಗಳೇ ಈ ಸಂದೇಹಗಳಿಗೆ ಆಧಾರ. "ಆರಂಭದಲ್ಲಿ ಹುಮ್ಮಸ್ಸು, ಕಟ್ಟಕ್ಕರೆಯಿಂದ" ತುಂಬಿದ್ದ ಸಿಬಿಐ ವಕೀಲರುಗಳು ಕೊನೆಯ ಹಂತಗಳಲ್ಲಿ "ದಿಕ್ಕು ತೋಚದವರು ಮತ್ತು ಹಿಂಜರಿಕೆಯವರು" ಆದರು ಎಂದು ಅಂತಿಮ ಆದೇಶದಲ್ಲಿ ನ್ಯಾಯಾಧೀಶರು ಹೇಳಿರುವುದಾಗಿ ವರದಿಯಾಗಿದೆ. ವಕೀಲರ ಮಂಡನೆಗಳನ್ನು ಇಲಾಖೆಯೇ ತಮ್ಮ ಮಂಡನೆಗಳು ಎಂದು ಒಪ್ಪಲು ಸಿದ್ಧವಿರಲಿಲ್ಲ, ಯಾವುದೇ ಹಿರಿಯ ಅಧಿಕಾರಿ ಅದಕ್ಕೆ ಸಹಿ ಮಾಡುತ್ತಿರಲಿಲ್ಲ, ಯಾರೋ ಒಬ್ಬ ಕೆಳಹಂತದ ಸಿಬಿಐ ಇನ್ಸ್‌ಪೆಕ್ಟರ್ ಸಹಿ ಹಾಕುತ್ತಿದ್ದರು ಎಂದೂ ತೀರ್ಪಿನಲ್ಲಿ ಹೇಳಲಾಗಿದೆಯಂತೆ.

4 ಜಿ ವೀಡಿಯೋ ಕಾಲ್‌ಗೆ 2ಜಿ ಏಕೆ ಬೇಕು?
ವ್ಯಂಗ್ಯಚಿತ್ರ, ಮಂಜುಲ್, ಫಸ್ಟ್‌ಪೋಸ್ಟ್



ಅಲ್ಲದೆ ವಿಚಾರಣೆಯ ನಡುವೆ ಸಿಬಿಐ ನೇಮಿಸಿಕೊಂಡಿದ್ದ ಒಬ್ಬ ಹಿರಿಯ ವಕೀಲರ ಮೇಲೆ ವಿಭಾಗೀಯ ತನಿಖೆ ನಡೆಸಿ ಅವರನ್ನು ತೆಗೆದು ಹಾಕಲಾಯಿತು ಎಂದೂ ತಿಳಿದು ಬಂದಿದೆ. ಸಿಬೀಐನನು ದಕ್ಷಗೊಳಿಸುವ ಮಾತಾಡಿ ಮೂರೂವರೆ ವರ್ಷಗಳ ನಂತರ ಇಂತಹ ಟಿಪ್ಪಣಿಯನ್ನು ತಳ್ಳಿ ಹಾಕುವಂತಿಲ್ಲ ತಾನೇ.

ಹಣಕಾಸು ಮಂತ್ರಿಗಳು ಕಾಂಗ್ರೆಸ್ ಮತ್ತು ಇತರ ಯುಪಿಎ ಮಂದಿ ಇದು ತಮ್ಮ ಗೆಲುವಿನ ಪದಕ ಎಂದು ಹೇಳಿಕೊಳ್ಳುವಂತಿಲ್ಲ ಎಂದಿದ್ದಾರೆ. ಸಿಬಿಐ ಈ ತೀರ್ಪಿನ ವಿರುದ್ಧ ಅಪೀಲು ಹೋಗುವುದಾಗಿಯೂ ವರದಿಯಾಗಿದೆ. ಆದರೆ ಇವು ಯಾವವೂ ತೀರ್ಪುಎತ್ತಿರುವ ಪ್ರಶ್ನೆಗಳಿಗೆ ಉತ್ತರ ಕೊಡುವುದಿಲ್ಲ.

ಜತೆಗೆ ಇತ್ತೀಚೆಗೆ ಚೆನ್ನೈ ಭೇಟಿ ಕಾಲದಲ್ಲಿ ಪ್ರಧಾನ ಮಂತ್ರಿಗಳು ಡಿಎಂಕೆ ಮುಖಂಡರನ್ನು ಮತ್ತು ಅವರ ಸಮಸ್ತ ಕಟುಂಬಸ್ಥರನ್ನು, 2ಜಿ ಆರೋಪಿಗಳನ್ನು ಕೂಡ ಭೇಟಿ ಮಾಡಿರುವುದು ಮತ್ತು ವಿಚಾರಣೆಯ ವೇಳೆಯಲ್ಲಿ 'ನನಗೆ ನೆನಪಿಲ್ಲ' ಎಂದಷ್ಟೇ ಹೇಳುತ್ತಿದ್ದ, ಒಂದು ಹಂತದಲ್ಲಿ 'ಬಹಳಷ್ಟನ್ನು ಮರೆತಿರುವಂತೆ ಕಾಣುತ್ತಿದೆ' ಎಂದು ನ್ಯಾಯಾಲಯದ ಟಿಪ್ಪಣಿಗೂ ಒಳಗಾದ ಸಿಬಿಐ ಸಾಕ್ಷಿ ದೊಡ್ಡ ಉದ್ಯಮಿ ಅನಿಲ್ ಅಂಬಾನಿ ಈಗ ಪ್ರಧಾನಿಗಳ ಜೊತೆಗೆ ಪಯಣಿಸುತ್ತಿದ್ದು 21000 ಕೋಟಿ ರೂ.ಗಳ ರಫೆಲ್ ರಕ್ಷಣಾ ಕಾಂಟ್ರಾಕ್ಟ್ ಪಡೆದಿರುವುದು ಈ ಜುಮ್ಲೀಕರಣದ ಸಂದೇಹಕ್ಕೆ ಇನ್ನಷ್ಟು ರೆಕ್ಕೆ ಪುಕ್ಕ ಸೇರಿಸಿದೆ.

ಇಷ್ಟೇ ಅಲ್ಲ, ಇದು ನಿಜವಾಗಿಯೂ 'ವಿನೋದ್ ರಾಯ್' ಹಗರಣ ಎಂದು ಆಗಿನ ದೂರಸಂಪರ್ಕ ಮಂತ್ರಿ ಈಗ ಟೀಕಿಸಿದರೂ, ಈ ಹಗರಣದಲ್ಲಿ 1.76ಲಕ್ಷ ಕೋಟಿ ರೂ. ದೇಶದ ಖಜಾನೆಗೆ ಆಗಿರುವ ನಷ್ಟ ಎಂದು ಲೆಕ್ಕಹಾಕಿದ್ದ ಆಗಿನ ಸಿಎಜಿ ವಿನೋದ್ ರಾಯ್‌ರೀಗ ಪ್ರಧಾನಿಗಳ ನಿಕಟ ಪರಿಣಿತರಲ್ಲಿ ಒಬ್ಬರಾಗಿದ್ದರೂ ಇದುವರೆಗೆ ಪ್ರತ್ಯುತ್ತರ ನೀಡಿಲ್ಲ. ಇವೆಲ್ಲ ಸಹಜವಾಗಿಯೇ ಭ್ರಷ್ಟಾಚಾರದ ವಿರುದ್ಧ ಹೋರಾಡುವ ಪ್ರಧಾನಿಗಳ ಅಬ್ಬರದ ಮಾತುಗಳಿಗೆ ಸವಾಲು ಹಾಕಿವೆ.

ಉರ್ದು ಭಾಷೆಯಲ್ಲಿ ಪ್ರತಿಜ್ಞೆ–ಕಾರ್ಪೊರೇಟರ್ ಮೇಲೆ ಹಲ್ಲೆ, ಜಾಮೀನುರಹಿತ ವಾರಂಟ್

ಇದು ಉತ್ತರಪ್ರದೇಶದ ಅಲಿಗಡ್‌ನಿಂದ ಬಂದಿರುವ ಸುದ್ದಿ. ಇತ್ತೀಚಿನ ಚುನಾವಣೆಗಳಲ್ಲಿ ಅಲಿಗಡ ನಗರಸಭೆಗೆ ಚುನಾಯಿತನಾದ ಬಿಎಸ್‌ಪಿ ಕಾರ್ಪೊರೇಟರ್ ಮುಷರ್ರಫ್ ಹುಸೇನ್ ಮೇಲೆ ಪೋಲಿಸರು ಧಾರ್ಮಿಕ ಭಾವನೆಗಳನ್ನು ಕದಡಿದ್ದಾರೆಂದು ಜಾಮೀನುರಹಿತ ಕೇಸ್ ಜಡಿದಿದ್ದಾರೆ. ಆತ ಉರ್ದು ಭಾಷೆಯಲ್ಲಿ ನಗರಸಭಾ ಸದಸ್ಯತ್ವದ ಪ್ರತಿಜ್ಞೇ ತಗೊಂಡದ್ದೇ 'ಧಾರ್ಮಿಕ ಭಾವನೆ ಕದಡಿದ ಆತನ ಕೃತ್ಯ!

ಎಲ್ಲ ಚುನಾಯಿತ ಕಾರ್ಪೊರೇಟರ್‌ಗಳು ಹಿಂದಿಯಲ್ಲಿ ಪ್ರತಿಜ್ಞೆ ಕೈಗೊಂಡರೆ ಈತ ಮಾತ್ರ ಇತರರ ಧಾರ್ಮಿಕ ಭಾವನೆಗಳನ್ನು ನೋಯಿಸಲೆಂದೇ ಉರ್ದುನಲ್ಲಿ ಪ್ರತಿಜ್ಞೆ ಕೈಗೊಂಡಿದ್ದಾರೆಂದು ಮತ್ತೊಬ್ಬ ಕಾರ್ಪೊರೇಟರ್ ಪುಷ್ಪೇಂದ್ರ ಸಿಂಗ್ ಪೋಲೀಸ್ ದೂರು ಕೊಟ್ಟರಂತೆ. ಅದರ ಮೊದಲು ಬಿಜೆಪಿ ಕಾರ್ಪೊರೇಟರುಗಳು ಆತನನ್ನು ಅದೇ ಕಾರಣಕ್ಕಾಗಿ ಥಳಿಸಿದ್ದರು.

ಉರ್ದು ಉತ್ತರಪ್ರದೇಶದ ಅಧಿಕೃತ ಭಾಷೆಯಲ್ಲಿ ಸೇರಿದೆ. ಮತ್ತು ಸಂವಿಧಾನದಲ್ಲಿ ಪಟ್ಟಿ ಮಾಡಿರುವ ಭಾಷೆ ಕೂಡ. ಆದ್ದರಿಂದ ಅದರಲ್ಲಿ ಪ್ರತಿಜ್ಞೆ ತಗೊಳ್ಳುವುದು ಕಾನೂನುಬಾಹಿರವಲ್ಲ ಎಂದು ಪೋಲಿಸ್ ಒಪ್ಪಿಕೊಂಡರೂ ಆತ ಹಾಗೆ ಮಾಡಿದ್ದರಿಂದ ಹಿಂಸಾಚಾರದ ವಾತಾವರಣ ಉಂಟಾದ್ದರಿಂದ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಸಮರ್ಥಿಸಿಕೊಂಡಿದ್ದಾರೆ.

ಆದರೆ ಮುಷರ್ರಫ್ ಹುಸೇನ್ ತನ್ನ ಮೇಲೆ ಹಲ್ಲೆ ಮಾಡಿದ ಬಗ್ಗೆ ಕೊಟ್ಟ ದೂರನ್ನು ದಾಖಲು ಮಾಡಿಕೊಳ್ಳಲಿಲ್ಲ.

ನಯಾ ಭಾರತ್ ನಿರ್ಮಾಣದಲ್ಲಿ

ಹೊಸದಾಗಿ ಮೇಯರ್ ಆಗಿ ಚುನಾಯಿತರಾಗಿರುವ ಬಿಎಸ್‌ಪಿಯ ಮಹಮ್ಮದ್ ಫುರ್ಖಾನ್ 'ಚುನಾವಣೆಯಲ್ಲಿ ಸೋಲನ್ನು ಗೌರವಯುತವಾಗಿ ಸ್ವೀಕರಿಸಿ, ಭಾವನಾತ್ಮಕ ಪ್ರಶ್ನೆಗಳನ್ನು ಅನಗತ್ಯವಾಗಿ ಎತ್ತಿ ತಿಕ್ಕಾಟವನ್ನು ಹುಟ್ಟಿಸಬೇಡಿ, ಇದು ನಗರದ ಅಭಿವೃದ್ಧಿ ಕೆಲಸಗಳ ಹಳಿ ತಪ್ಪಿಸುತ್ತದೆ ಎಂದು ಬಿಜೆಪಿಗೆ ಮನವಿ ಮಾಡಿಕೊಂಡಿದ್ದಾರಂತೆ.

ರಾಜಸ್ತಾನ: ಕೊಲೆಗಡುಕನಿಗೆ ಧನಸಂಗ್ರಹ ಜಿಲ್ಲಾ ಕೋರ್ಟಿನಲ್ಲಿ ಕೇಸರೀ ಬಾವುಟ

ಪಶ್ಚಿಮ ಬಂಗಾಲದ ವಲಸೆ ಕಾರ್ಮಿಕ ಮಹಮ್ಮದ್ ಆಫ್ರಜುಲ್‌ನನ್ನು ಹಾಡುಹಗಲೇ ಚಚ್ಚಿ ಕೊಂದು ಸುಟ್ಟು ಹಾಕುವದನ್ನು ವೀಡಿಯೋ ಮಾಡಿ ಹರಡಿಸಿದ ರಾಜಸ್ತಾನದ ಶಂಭೂಲಾಲ್ ರೇಗರ್‌ನ ಕೃತ್ಯವನ್ನು ಇದುವರೆಗೂ ಪ್ರಧಾನ ಮಂತ್ರಿಗಳೂ ಸೇರಿದಂತೆ ಬಿಜೆಪಿಯ ಕೇಂದ್ರೀಯ ಮುಖಂಡರು ಖಂಡಿಸಿಲ್ಲ. ಬಹುಶಃ ಇದರಿಂದ ಉತ್ಸಾಹಿತರಾದ ಆತನ ಹೀನ ಕೃತ್ಯವನ್ನು ಬೆಂಬಲಿಸುವ ಮಂದಿ ಇನ್ನೂ ಮುಂದೆ ಹೋಗಿದ್ದಾರೆ. ಇದುವರೆಗೆ ಆತನ ಹೆಸರಲ್ಲಿ 3 ಲಕ್ಷ ರೂ.ಗಳನ್ನು ಸಂಗ್ರಹಿಸಿರುವುದಾಗಿ ವರದಿಯಾಗಿದೆ.

ಸಾಲದ್ದಕ್ಕೆ ರಾಜ್ಯದ ರಾಜಧಾನಿ ಜಯಪುರದಲ್ಲಿ ಡಿಸೆಂಬರ್ 15 ರಂದು ಪೋಲೀಸರೊಂದಿಗೆ ತಿಕ್ಕಾಟ ನಡೆಸಿ 30 ಪೋಲಿಸರನ್ನು ಗಾಯಗೊಳಿಸಿ ಜಿಲ್ಲಾ ಮತ್ತು ಸೆಶನ್ಸ್ ಕೋರ್ಟಿನ ದ್ವಾರದಲ್ಲಿ ಭಗವಾ ಧ್ವಜವನ್ನು ಹಾರಿಸಿದ್ದಾರೆ ಎಂದು ಪತ್ರಿಕೆಗಳು ವರದಿ ಮಾಡಿವೆ, ಈತನನ್ನು ಹೀರೋನನ್ನಾಗಿ ಪ್ರಯತ್ನ ನಡೆಯುತ್ತಿದೆ ಎನ್ನಲಾಗಿದೆ.

ಕ್ರಿಸ್‌ಮಸ್ ಹಾಡುಗಾರರ ಮೇಲೆ ಹಲ್ಲೆ–ಅವರದ್ದೇ ಬಂಧನ

ಅದೇ ದಿನ ಮಧ್ಯಪ್ರದೇಶದ ಸಾತ್ನಾ ಜಿಲ್ಲೆಯಲ್ಲಿ ಒಂದು ಬಲಪಂಥೀಯ ಗುಂಪು ಕ್ರಿಸ್‌ಮಸ್‌ಗೆ ತಯಾರಿಯಾಗಿ ಕರೊಲ್ ಹಾಡುವ ತಂಡದ ಮೇಲೆ ದಾಳಿ ಮಾಡಿದೆ, ಪಾದ್ರಿಯ ಕಾರನ್ನು ಸುಟ್ಟು ಹಾಕಿದೆ ಎಂದು ವರದಿಯಾಗಿದೆ. ರಾಜಸ್ತಾನದಲ್ಲಿ 'ಲವ್‌ಜಿಹಾದ್' ಇಲ್ಲಿ 'ಮತಾಂತರ'ದ ಪುಕಾರು.

ಯಥಾಪ್ರಕಾರ ಪೋಲೀಸರು ದಾಳಿಕೋರರ ಮೇಲೆ ಕ್ರಮ ಕೈಗೊಳ್ಳುವ ಬದಲು ಹಲ್ಲೆಗೊಳಗಾದ ಹಾಡುಗಾರರನ್ನೇ ಹಿಡಿದು ಪೋಲೀಸ್ ಠಾಣೆಗೆ ಒಯ್ದಿದ್ದಾರಂತೆ. ಆ ಬಗ್ಗೆ ವಿಚಾರಿಸಲು ಹೋದ ಎಂಟು ಪಾದ್ರಿ ತರಬೇತಿ ಪಡೆಯುತ್ತಿರುವವರನ್ನೂ ಕಸ್ಟಡಿಗೆ ತೆಗೆದುಕೊಳ್ಳಲಾಗಿದೆ. ತಾವು ಎಂದಿನಂತೆ ಕ್ರಿಸ್‌ಮಸ್‌ಗೆ ಸಿದ್ಧತೆ ನಡೆಸುತ್ತಿದೇವೆಯೇ ಹೊರತು ಯಾವುದೇ ಮತಾಂತರ ಚಟುವಟಿಕೆ ನಡೆಸುತ್ತಿರಲಿಲ್ಲ ಎಂದು ಅವರು ಹೇಳಿದ್ದಾರೆ.


ಎರಡಂಕಿಗಿಳಿಸಿದರೂ ಅಧಿಕಾರ ಉಳಿಸಿದ 'ಮೋದಿ ಮ್ಯಾಜಿಕ್'

ಪುಟ 7 ರಿಂದ

ಬಯಸುತ್ತಿರುವುದು ಮತ್ತು ಈ ಪ್ರಕ್ರಿಯೆಯಲ್ಲಿ ಅಂತರ್‍ರಾಷ್ಟ್ರೀಯ ಬಂಡವಾಳಕ್ಕೆ ತಮ್ಮ ಹೇಯ ಶರಣಾಗತಿಯನ್ನು ಮರೆಮಾಚಲು 'ಹಿಂದುತ್ವ'ದ ಹೊದಿಕೆ ಹಾಕುತ್ತಿರುವುದು ನಾವೀಗ ಕಾಣುತ್ತಿರುವ ಸನ್ನಿವೇಶ.

ಇಲ್ಲಿ ಇನ್ನೊಂದು ಪ್ರಶ್ನೆಯೂ ಏಳುತ್ತದೆ. 'ಗುಜರಾತ್ ಮಾದರಿ', ನೋಟುರದ್ಧತಿ, ಜಿಎಸ್‌ಟಿ ಜನಗಳ ಮೇಲೆ ಅಷ್ಟೊಂದು ಸಂಕಟಗಳನ್ನು ಹೇರಿದ್ದರೆ, ಬಿಜೆಪಿಯನ್ನು ಆರನೇ ಬಾರಿಗೆ ಗುಜರಾತಿನ ಮತದಾರರು ಆರಿಸಿದ್ದೇಕೆ, ಕಾಂಗ್ರೆಸಿಗೆ ಈ ಅಸಂತೃಪ್ತಿಯ ಪೂರ್ಣ ಲಾಭ ಪಡೆಯಲು ಏಕೆ ಆಗಲಿಲ್ಲ?

ಇದಕ್ಕೆ ಉತ್ತರ ಬಹಳ ಕಷ್ಟವೇನೂ ಅಲ್ಲ. ಕೆಲವು ವಿಶ್ಲೇಷಕರು ಹೇಳುವಂತೆ **ಈ ಚುನಾವಣೆ ಬಿಜೆಪಿಯ ವಿಫಲತೆಗಳೊಂದಿಗೆ ಕಾಂಗ್ರೆಸಿನ ವಿಫಲತೆಗಳನ್ನು ಕೂಡ ಬಯಲಿಗೆ ತಂದಿದೆ**. ಮೂವರು ಯುವ ಮುಖಂಡರನ್ನು ಮತ್ತು ಅವರ ನೇತೃತ್ವದ ಆಂದೋಲನಗಳನ್ನೇನೋ ಕಾಂಗ್ರೆಸ್ ತಮ್ಮತ್ತ ಒಲಿಸಿಕೊಳ್ಳುವಲ್ಲಿ ಯಶಸ್ವಿಯಾಯಿತು. ಆದರೆ ಈ ಹೊಸಶಕ್ತಿಗಳ ಉದಯಕ್ಕೆ ಮೂಲಕಾರಣವಾದ, ಅದಕ್ಕಿಂತ ಮೊದಲು ಬಿಜೆಪಿಯನ್ನು ಬಲಪಡಿಸಿದ ತನ್ನ ಜನ-ವಿರೋಧಿ ಧೋರಣೆಗಳ ವಿಮರ್ಶೆಯನ್ನೇನೂ ಅದು ಮಾಡಲಿಲ್ಲ. ಅದರಿಂದಾಗಿ ಜನಗಳ ವಿಶ್ವಾಸ ಗಳಿಸಬಲ್ಲ ಪರ್ಯಾಯವನ್ನು ಗುಜರಾತಿನ ಮತದಾರರ ಮುಂದಿಡಲು, ಮತ್ತೆ ಅವರ ವಿಶ್ವಾಸ ಗಳಿಸಲು ಅದಕ್ಕೆ ಸಾಧ್ಯವಾಗಿಲ್ಲ ಎಂಬುದನ್ನು ಕೂಡ ಈ ಚುನಾವಣೆಯ ಫಲಿತಾಂಶ ಸಾರಿ ಹೇಳುತ್ತಿದೆ.



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ

ಸಿಎಸ್‌ಡಿಎಸ್ ಮಾಡಿದ ಸರ್ವೆ ತೋರಿಸಿರುವಂತೆ ಆಗಸ್ಟ್‌ನಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ಮತನೀಡುವ ಆಶಯದಲ್ಲಿ ಕಂಡಿದ್ದ 30% ಅಂತರ (ಬಿಜೆಪಿಗೆ 59% , ಕಾಂಗ್ರೆಸ್‌ಗೆ 29%), ಅಕ್ಟೋಬರ್‌ನಲ್ಲಿ 8%ಕ್ಕೆ(ಬಿಜೆಪಿ 47% ಮತ್ತು ಕಾಂಗ್ರೆಸ್ 41%)ಕ್ಕೆ ಇಳಿದು ನವಂಬರ್ ವೇಳೆಗೆ ಸಮ-ಸಮ ಮಟ್ಟಕ್ಕೆ (43%) ತಲುಪಿದ್ದರೂ ಅಂತಿಮವಾಗಿ ಬಿಜೆಪಿ 49% ತಲುಪಲು ಮತ್ತು ಕಾಂಗ್ರೆಸ್ 41%ಕ್ಕೆ ಇಳಿಯಲು ಒಂದೆಡೆಯಲ್ಲಿ ಗಂಡಾಂತರಕಾರೀ ಮಟ್ಟಕ್ಕಿಳಿದ 'ಮೋದಿ ಮ್ಯಾಜಿಕ್' ನೆರವಾದರೆ, ಇನ್ನೊಂದೆಡೆಯಲ್ಲಿ ಕಾಂಗ್ರೆಸ್‌ನ ವಿಫಲತೆಯನ್ನೂ ಅದು ತೋರಿದೆ ಎಂದರೆ ತಪ್ಪಾಗಲಾರದು.

ಮತದಾನದ ಪ್ರಮಾಣ ಇಳಿದಿರುವುದು, 'ನೋಟ' ಹೆಚ್ಚಿರುವುದು ಬಿಜೆಪಿಯ ಬಗ್ಗೆ ಭ್ರಮನಿರಸನದೊಂದಿಗೆ ಕಾಂಗ್ರೆಸಿನ ಬಗ್ಗೆ ವಿಶ್ವಾಸ ಮೂಡದಿರುವುದನ್ನು ಕೂಡ ತೋರಿಸುತ್ತದೆ.

ಅಂದರೆ ನವ-ಉದಾರವಾದೀ ದಾರಿಯನ್ನು ಖಡಾಖಂಡಿತವಾಗಿ ತ್ಯಜಿಸುವ ಒಂದು ಪರ್ಯಾಯ ಧೋರಣೆಗಳ ದಿಕ್ಕಿನತ್ತ ತಿರುಗುವುದೇ ನಮ್ಮ ದೇಶದ ಜನರ ಸಂಕಟಗಳ ಪರಿಹಾರಕ್ಕೆ, ಅವರ ಏಳಿಗೆಗೆ ಮತ್ತು ಈ ದೇಶದ ಜಾತ್ಯತೀತ ಪ್ರಜಾಪ್ರಭುತ್ವ ಮೌಲ್ಯಗಳ ರಕ್ಷಣೆಗೆ ಇರುವ ಏಕೈಕ ದಾರಿ ಎಂದು ಮನವರಿಕೆ ಮಾಡಿಕೊಟ್ಟಿರುವುದು ಈ ಚುನಾವಣೆಯ ಇನ್ನೊಂದು ಮಹತ್ವ.

ಅದೇನೇ ಇರಲಿ, 'ತಮ್ಮ' ಮೋದಿಯವರ ಬಗ್ಗೆ ⇨

ಹಳ್ಳಿ–ಪಟ್ಟಣ–ಚುನಾವಣಾ ಕ್ಷೇತ್ರಗಳು

	ಗ್ರಾಮಿಣ(98)		ಅರೆ ಪಟ್ಟಣ(45)		ನಗರ(39)	
	2012	2017	2012	2017	2012	2017
ಬಿಜೆಪಿ	50	40	30	26	35	33
ಕಾಂಗ್ರೆಸ್	43	55	14	19	4	6
ಇತರರು	5	3	1	0	0	0

ಹಳ್ಳಿ–ಪಟ್ಟಣ–ಮತಗಳಿಕೆ%

	ಗ್ರಾಮಿಣ(98)		ಅರೆ ಪಟ್ಟಣ(45)		ನಗರ (39)	
ಬಿಜೆಪಿ	2012	2017	2012	2017	2012	2017
ಕಾಂಗ್ರೆಸ್	44	45	44	49	59	59
ಇತರರು	41	45	39	43	33	36

ಬ್ಯಾಂಕುಗಳ ಅಪಾರ ಎನ್‌ಪಿಎ ಗಳಿಗೆ ನೀವೂ ಕೂಡ ಹೊಣೆ, ಮೋದಿಯವರೇ!



ಆಯ್ದ ಕಾರ್ಪೋರೇಟ್ ಕುಳಗಳಿಗೆ ಸಾಲ ನೀಡಲು ಬ್ಯಾಂಕುಗಳನ್ನು ಯುಪಿಎ ಸರಕಾರ ಬಲವಂತ ಪಡಿಸಿದ್ದರಿಂದಾಗಿ ಭಾರೀ ಪ್ರಮಾಣದಲ್ಲಿ ಎನ್‌ಪಿಎಗಳು ಉಂಟಾದವು ಆಪಾದಿಸಿರುವ ಶ್ರೀ. ಮೋದಿಯವರು, ಕೂಡ ಅನುಸರಿಸುತ್ತಿರುವದು ಅದೇ ಮಾರ್ಗವನ್ನು, ಮತ್ತು ಅವೇ ಆರಿಸಿದ ಕಾರ್ಪೋರೇಟ್‌ಗಳಿಗೆ ತಮ್ಮ ಔದಾರ್ಯವನ್ನು ಧಾರೆಯೆರೆಯುತ್ತಿದ್ದಾರೆ. ಜತೆಗೆ ದೇಶದ ಬ್ಯಾಂಕುಗಳನ್ನು ಲೂಟಿ ಹೊಡೆದಿರುವವರಿಗೇ ದೇಶದ ರಕ್ಷಣಾ ಗುತ್ತಿಗೆಗಳನ್ನೂ ನೀಡಬೇಕು ಎಂದು ಅವರು ಭಾವಿಸಿರುವಂತಿದೆ.

ಬೋದಪಟಿ ಸೃಜನಾ **ಅನುವಾದ: ಭಾರತಿ ಗಾಂವ್ಕರ್**

ಉದ್ದಿಮೆದಾರರ ಸಂಘವಾದ 'ಫಿಕಿ' (ಎಫ್‌ಐಸಿಸಿಐ) ಸಭೆಯಲ್ಲಿ ಮಾತನಾಡುತ್ತಾ, ಬ್ಯಾಂಕಿಂಗ್ ವಲಯದಲ್ಲಿ ಕಾರ್ಯನಿರ್ವಹಿಸದ ಸ್ವತ್ತುಗಳಿಂದಾಗಿ (ಸುಸ್ತಿ ಸಾಲ) ಉಂಟಾಗಿರುವ ಅವ್ಯವಸ್ಥೆಗೆ ತಾನೇನೂ ಜವಾಬ್ದಾರನಲ್ಲ, ಈ ಎಲ್ಲ ಬಿಕ್ಕಟ್ಟಿಗೆ ಯುಪಿಎ ಸರಕಾರವೊಂದೆ ಹೊಣೆ ಎಂದು ಘೋಷಿಸಿಬಿಟ್ಟಿದ್ದಾರೆ. ಯುಪಿಎ ಸರಕಾರ ದೊಡ್ಡ ಪ್ರಮಾಣದ ಮೊತ್ತವನ್ನು ಆಯ್ದ ಕಾರ್ಪೋರೇಟ್ ಉದ್ಯೋಗಪತಿಗಳಿಗೆ ಸಾಲವಾಗಿ ನೀಡಲು ಒತ್ತಾಯಪಡಿಸಿತ್ತು, ಹಾಗಾಗಿಯೇ ಈ ಬಿಕ್ಕಟ್ಟು ಉದ್ಭವವಾಯಿತು ಎಂದು ಹೇಳುತ್ತಾರೆ. ಆನಂತರ, ಶ್ರೀ. ಮೋದಿ ತನ್ನನ್ನು ಒಬ್ಬ ಉದ್ಧಾರಕನಂತೆ ಬಿಂಬಿಸಿಕೊಳ್ಳುತ್ತಾ ತಾನು ಕಾರಣವಾಗಿರದ ವ್ಯವಸ್ಥೆಯನ್ನು ಸರಿಪಡಿಸುವವನಂತೆ ಮಾತನಾಡುತ್ತಾರೆ.

ಯುಪಿಎ ಸರಕಾರ ದೊಡ್ಡ ಪ್ರಮಾಣದ ಮೊತ್ತವನ್ನು ಆಯ್ದ ಕಾರ್ಪೋರೇಟ್ ಉದ್ಯೋಗಪತಿಗಳಿಗೆ ಸಾಲವಾಗಿ ನೀಡಲು ಒತ್ತಾಯಪಡಿಸಿತ್ತು ಎಂಬ ಮೋದಿಯವರ ಆಪಾದನೆ ಸರಿಯಾಗಿಯೇ ಇದೆ, ಅದರಲ್ಲಿ ಸಂಶಯವಿಲ್ಲ, ಆದರೆ ತನ್ನ ಮತ್ತು ತನ್ನ ಸರಕಾರದ ಜವಾಬ್ದಾರಿಯೇನೂ ಇಲ್ಲ ಎಂಬುದು ಎಷ್ಟರ ಮಟ್ಟಿಗೆ ಸರಿ?

ಲಭ್ಯ ಮಾಹಿತಿಯನ್ನೊಮ್ಮೆ ಪರಿಶೀಲಿಸೋಣ.

2017 ಮಾರ್ಚ 31,ರ ಹೊತ್ತಿಗೆ ಬ್ಯಾಂಕಿಂಗ್ ವಲಯದಲ್ಲಿ ಕಾರ್ಯ ನಿರ್ವಹಿಸದ ಒಟ್ಟೂ ಸ್ವತ್ತುಗಳ ಮೊತ್ತ 7 ಲಕ್ಷ ಕೋಟಿ ರೂ. ಆದರೂ, ಬ್ಯಾಂಕಿಂಗ್ ವಲಯದ ಒಟ್ಟೂ ಕೆಟ್ಟ(ಪಾವತಿ ಮಾಡದಿರುವ) ಸಾಲಗಳ ಮೊತ್ತ 15ಲಕ್ಷ ಕೋಟಿರೂಪಾಯಿ ಎಂದು ಅಂದಾಜಿಸಲಾಗಿದೆ. ಅಲ್ಲಿಗೆ, ಸುಸ್ತಿಸಾಲಗಳ ಮೊತ್ತ ಅಧಿಕೃತವಾಗಿ ಘೋಷಿಸಲ್ಪಟ್ಟ ಕಾರ್ಯನಿರ್ವಹಿಸದ ಸ್ವತ್ತಿಗಿಂತ ದುಪ್ಪಟ್ಟಾದಂತಾಯಿತು.

ಶ್ರೀ. ಮೋದಿಯವರು ಕೇಂದ್ರದಲ್ಲಿ ಅಧಿಕಾರ ಸ್ವೀಕರಿಸಿದ ತಕ್ಷಣ ತೆಗೆದುಕೊಂಡ ಒಂದು ಪ್ರಮುಖ ನಿರ್ಧಾರದ ಫಲವಾಗಿ, ಬಹುತೇಕ ಕೆಟ್ಟ ಸಾಲಗಳು ಇನ್ನೂ ಕಾರ್ಯನಿರ್ವಹಿಸದ ಸ್ವತ್ತುಗಳೆಂದು ಘೋಷಿತವಾಗಿಲ್ಲ. ಬಿಜೆಪಿ ಅಧಿಕಾರ ವಹಿಸಿಕೊಂಡ ಎರಡು ತಿಂಗಳಿಗೆ, ಅಂದರೆ ಜುಲೈ 2014 ರಲ್ಲಿ, ಆರ್‌ಬಿಐ 5/25 ಎಂಬ ಯೋಜನೆಯೊಂದನ್ನು ಪರಿಚಯಿಸಿತು. ಈ ಯೋಜನೆ ಫಲವಾಗಿ ಹಲವಾರು ದೊಡ್ಡ ಕಾರ್ಪೋರೇಟ್‌ಗಳಿಗೆ ಕೆಟ್ಟ ಸಾಲಗಳನ್ನು 'ಪುನರ್ರಚಿಸಿ' ಪುನಃ ಹಣಕಾಸು ಒದಗಿಸುವ ಅವಕಾಶ ಲಭ್ಯವಾಯಿತು. ಈ ಎಲ್ಲ ಕೆಟ್ಟ ಸಾಲಗಳ ಮರುಪಾವತಿ ಆಗಬೇಕಾಗಿರುವ ಪೂರ್ಣಅವಧಿಯನ್ನು 10 ವರ್ಷದಿಂದ 25ವರ್ಷಕ್ಕೆ ವಿಸ್ತರಿಸಲಾಯಿತು.

ತಮ್ಮ ಸಾಲವನ್ನು ಪಾವತಿಸಬೇಕಾದ ಒತ್ತಡದಲ್ಲಿದ್ದ ದೊಡ್ಡ ಉದ್ಯೋಗಪತಿಗಳಿಗೆ ಇದೊಂದು ವರದಾನವಾಯಿತು. ಅದೃಷ್ಟದ ಅಪೂರ್ವ ಕಾಕತಾಳಿಯ ಎಂಬಂತೆ, ಶ್ರೀ ಅದಾನಿ ಅವರು–ಪ್ರದಾನಿ ಅವರ ನಿಕಟ ಕೈಗಾರಿಕಾ ಮಿತ್ರ–ಅವರ ಪ್ರಯಾಣಗಳಿಗೆ ತನ್ನ ವಿಮಾನಗಳನ್ನು ಉದಾರವಾಗಿ ಕೊಡಮಾಡುವಾತನಿಗೆ– ಈ ಯೋಜನೆಯಿಂದ ಬಹುದೊಡ್ಡ ಲಾಭ ಉಂಟಾಯಿತು. ಅವರ ಎರಡು ಬಹುದೊಡ್ಡ ಶಾಖೋತ್ಪನ್ನ ಕಂಪನಿಗಳಾದ, ಅದಾನಿ ಪವರ್ ಮಹಾರಾಷ್ಟ್ರ ಮತ್ತು ಅದಾನಿ ಪವರ್ ರಾಜಸ್ತಾನ್, ಎರಡಕ್ಕೂ 15000 ಕೋಟಿರೂಪಾಯಿ ಮೌಲ್ಯದ ಸಾಲ ಈ ಯೋಜನೆಯಡಿಯಲ್ಲಿ ಪುನರ್‌ಹಣಕಾಸು ಅಂದರೆ ಹೊಸ ಸಾಲ ದೊರಕಿತು. ಮೂಲತಃ ಇದ್ದ ಸಾಲಕ್ಕೆ ಮರುಪಾವತಿಯ ಪೂರ್ಣಅವಧಿ 10ರಿಂದ 20ವರ್ಷಕ್ಕೆ ವಿಸ್ತರಣೆಗೊಂಡಿತು, ಮತ್ತು ಬಡ್ಡಿಪಾವತಿಯನ್ನು 15 ತಿಂಗಳುಗಳ ವರೆಗೆ ಸ್ಥಗಿತಗೊಳಿಸಲಾಯಿತು.

ಪ್ರಾಸಂಗಿಕವಾಗಿ, ಶ್ರೀ ಅದಾನಿ ಅವರು ಆಮದು ಮಾಡಿಕೊಮಡ ಶಾಖೋತ್ಪನ್ನ ಉಪಕರಣಗಳ ಬೆಲೆಗಳನ್ನು ವಿಪರೀತವಾಗಿ ಹಿಗ್ಗಿಸುವ ಹಗರಣ ನಡೆಸಿ ವಿದ್ಯುತ್ ಕಂಪನಿಗಳಿಂದ 5000ಕೋಟಿ ರೂಪಾಯಿ ಸೆಳೆದುಕೊಂಡಿದ್ದಾರೆ, ಮತ್ತು ಆ ಹಣವನ್ನು ತೆರಿಗೆ ಮುಕ್ತ ದೇಶಗಳ ಬ್ಯಾಂಕುಗಳಲ್ಲಿ ಶೇಖರಿಸಿಡುತ್ತಿದ್ದಾರೆ ಎಂದು ಸ್ವತಃ ಕಂದಾಯ ಗುಪ್ತವಾಹಿತಿ ನಿರ್ದೇಶನಾಲಯ (ಡಿಆರ್‌ಐ) ಆರೋಪಿಸಿದೆ.

ಬಹುಶಃ ಹಲವಾರು ಕಾರ್ಪೋರೇಟ್ ಉದ್ಯೋಗಪತಿಗಳು ಇದೇ ವಿಧಾನವನ್ನು ಅನುಸರಿಸುವಂತೆ ಕಾಣುತ್ತದೆ. ಬ್ಯಾಂಕುಗಳಿಂದ ಸಾಲ ಪಡೆಯುವದು, ಆಮದುಗಳ ಮೌಲ್ಯಗಳನ್ನು ಹಿಗ್ಗಿಸಿ ತೋರಿಸುವುದು ಇತ್ಯಾದಿ ವಿಧಾನಗಳ ಮೂಲಕ ಸೆಳೆದುಕೊಳ್ಳುವುದು ಮತ್ತು ಆ ಹಣವನ್ನು ಬೇರೆ ದೇಶಗಳಲ್ಲಿ ಸಂಗ್ರಹಿಸಿಡುವದು ಹಾಗೂ ಈಗ ಸಾಲ ವಾಪಸ್ಸು ಮಾಡಲು ಹಣವಿಲ್ಲ ಎಂದು ಹೇಳಿಕೊಳ್ಳುವದು.

5/25 ಯೋಜನೆಯ ಲಾಭ ಪಡೆದುಕೊಂಡದ್ದು ಕೇವಲ ಅದಾನಿ ಮಾತ್ರವಲ್ಲ. ಇಲ್ಲಿ ಇನ್ನೊಬ್ಬ ವ್ಯಕ್ತಿ ಇದ್ದಾರೆ ಅವರೇ ಶ್ರೀ ಮುಕೇಶ ಅಂಬಾನಿ, ಅವರ ಖಾಸಗೀ ಮಾಲಿಕತ್ವದ ಕಂಪನಿಯೊಂದು 5/25 ಯೋಜನೆಯಡಿ ಕೆಟ್ಟ ಸಾಲಕ್ಕೆ ಅನೂಕೂಲ ಲಾಭ ಪಡೆದುಕೊಂಡಿದೆ, ಇದರಡಿ ಅವರ 4 ವರ್ಷದ ಮರುಪಾವತಿಯ ಅವಧಿಯನ್ನು 15 ವರ್ಷಕ್ಕೆ ವಿಸ್ತರಿಸಲಾಗಿದೆ.

ಬಿಜೆಪಿ ಸರಕಾರದ ಔದಾರ್ಯ ಅಂಬಾನಿಯ ಕಿರಿಯ ತಮ್ಮನನ್ನೂ ಹೊರಗಿಟ್ಟಿಲ್ಲ. ಪ್ರಸ್ತುತ, ಅನಿಲ್ ಅಂಬಾನಿ ಮಾಲಿಕತ್ವದ ಗುಂಪು ಕಂಪನಿಗಳು ಭಾರತದಲ್ಲಿ ಅತಿಹೆಚ್ಚು ಸಾಲದಲ್ಲಿ ಮುಳುಗಿರುವ ಕಾರ್ಪೋರೇಟ್ ಗುಂಪುಗಳಲ್ಲಿ ಒಂದಾಗಿದೆ. ಅವರ ಕಾರ್ಪೋರೇಟ್ ಗುಂಪಿನ ಕೇವಲ ಒಂದು ಕಂಪನಿ, ರಿಲಾಯನ್ಸ ಕಮ್ಯೂನಿಕೇಶನ್(ಆರ್ ಕೋವ್) ಸಾರ್ವಜನಿಕ ವಲಯದ ಬ್ಯಾಂಕುಗಳಿಗೆ 14000ಕೋಟಿರೂಪಾಯಿ ಸಾಲ ಹಿಂದಿರುಗಿಸಬೇಕಿದೆ. ಅವು ಹಿಂದಿರುಗೆ ಬರುವ ನಿರೀಕ್ಷೆಯಿಲ್ಲದ ಸುಸ್ತಿಸಾಲಗಳಾಗಿವೆ. ರೇಟಿಂಗ್ಸ ಏಜೆಂನ್ಸಿಗಳೂ ಸಹ ಇವನ್ನು ಸುಸ್ತಿ ಸಾಲಗಳೆಂದು ಪರಿಗಣಿಸಿವೆ. ಆದರೆ ಇಲ್ಲಿಯ ತನಕ ಮೋದಿ ಸರಕಾರದ ಔದಾರ್ಯದಿಂದಾಗಿ ಎನ್‌ಪಿಎ ಅಂದರೆ 'ಕಾರ್ಯನಿರ್ವಹಿಸದ ಸ್ವತ್ತು' ಎಂದು ಘೋಷಿತವಾಗಿಲ್ಲ.

ಅಷ್ಟೇ ಅಲ್ಲ, ಮೋದಿ ಸರಕಾರ ಶ್ರೀ ಅನಿಲ್ ಅಂಬಾನಿಯವರಿಗೆ ಇನ್ನೊಂದು ಕೊಡುಗೆ ನೀಡಿದೆ, ರಫೆಲ್ ಶಸ್ತ್ರಾಸ್ತ್ರ ವ್ಯವಹಾರದಲ್ಲಿ 21000ಕೋಟಿರೂ. ಗುತ್ತಿಗೆಯನ್ನು ಅವರ ಕೈಗೊಪ್ಪಿಸಿದೆ. ಈ ಉಡುಗೊರೆಯನ್ನು ಪಡೆದಿರುವ ಅನಿಲ್ ಅಂಬಾನಿಯವರ(ಪಿಪಾವಾವ್ ಡಿಫೆನ್ಸ್ ಅಂಡ್ ಆರ್ಫಶೋರ್ ಇಂಜಿನಿಯರಿಂಗ್) ಕಂಪನಿ 7500 ಸಾವಿ ಕೋಟಿ ಸಾಲ ಬಾಕಿ ಮಾಡಿಕೊಂಡಿದ್ದು, ಮೋದಿಯವರು ಅಧಿಕಾರಕ್ಕೆ ಬಂದ ನಂತರ, ಈ ಮೊತ್ತವನ್ನು 'ಪುನರ್ರಚಿಸ'ಲಾಗಿದೆ.

ದೇಶದ ಬ್ಯಾಂಕುಗಳನ್ನು ಲೂಟಿ ಹೊಡೆದಿರುವವರಿಗೇ ದೇಶದ ರಕ್ಷಣಾ ಗುತ್ತಿಗಗಳನ್ನೂ ನೀಡಬೇಕು ಎಂದು ಶ್ರೀಮಾನ್ ಮೋದಿಯವರು ಯೋಚಿಸಿದ್ದಾರೆಂಬುದರಲ್ಲಿ ಸಂಶಯವಿಲ್ಲ.

ಹೀಗೆ ಮೋದಿಯವರ ಔದಾರ್ಯದ ಲಾಭ ಪಡೆದಿರುವ ಕಾರ್ಪೋರೇಟ್ ಕಂಪನಿಗಳು ಇನ್ನೂ ತುಂಬಾ ಇವೆ–ಜೇಪೀ ಎಸ್ಸಾರ್, ಎಚ್‌ಸಿಸಿ, ಗ್ಯಾಮೋನ್ ಮತ್ತು ಇನ್ನೂ ಬೆಳಕಿಗೆ ಬಾರದ ಹಲವಾರು ಹೆಸರುಗಳು.

ಆಯ್ದ ಉದ್ಯೋಗಪತಿಗಳಿಗೆ ಸಾಲ ನೀಡಲು ಬ್ಯಾಂಕುಗಳನ್ನು ಬಲವಂತ ಪಡಿಸಿತು ಎಂದು ಯುಪಿಎ ಸರಕಾರವನ್ನು ಆಪಾದಿಸಿರುವ ಶ್ರೀ. ಮೋದಿಯವರು, ಅನುಸರಿಸುತ್ತಿರುವದು ಅದೇ ಮಾರ್ಗವನ್ನು, ಮತ್ತು ಅವೇ ಆರಿಸಿದ ಕಾರ್ಪೋರೇಟ್‌ಗಳಿಗೆ ತಮ್ಮ ಔದಾರ್ಯವನ್ನು ಧಾರೆಯೆರೆಯುತ್ತಿದ್ದಾರೆ.

ಬ್ಯಾಂಕುಗಳ ಎನ್‌ಪಿಎ ಕೊಳಕನ್ನು ಸ್ವಚ್ಛಗೊಳಿಸಬೇಕು ಎಂದು ಶ್ರೀ. ಮೋದಿಯವರು ಹೇಳಿಕೊಳ್ಳುವಂತೆ, ಅವರಿಗೆ ನಿಜವಾಗಿಯೂ ಆಸಕ್ತಿ ಇದ್ದಿದ್ದರೆ, ಉದ್ದೇಶಪೂರ್ವಕವಾಗಿ ಸಾಲ ಮರುಪಾವತಿಸದವರು ಮಾಡುತ್ತಿರುವ ಹಗರಣವನ್ನ ತನಿಖೆ ಮಾಡಲು ಸ್ವತಂತ್ರ ಸಮಿತಿಯೊಂದನ್ನು ರಚಿಸಿ, ಅಂತವರ ಮೇಲೆ ಕ್ರಿಮಿನಲ್ ಕ್ರಮ ಕೈಗೊಳ್ಳ ಬೇಕಾಗಿತ್ತು. ಉಭಯಸದನಗಳಲ್ಲಿ ಬಹುಮತ ಹೊಂದಿರುವ ಸರಕಾರಕ್ಕೆ, 'ನಿಯಮಿತ ಹೊಣೆಗಾರಿಕೆ' ಕಾನೂನನ್ನು ತಿದ್ದುಪಡಿಗೆ ಒಳಪಡಿಸಿ, ಮೋಸದಿಂದ ಸಾಲವನ್ನು ಪಾವತಿ ಮಾಡದಿರುವ ಕಾರ್ಪೋರೇಟ್‌ಗಳ ಬಿಲಿಯಾಧಿಪತಿ ಮಾಲಕರ ಆಸ್ತಿಗಳನ್ನು ಮುಟ್ಟುಗೋಲು ಹಾಕಲು ಅಡ್ಡಿಯಾದರೂ ಏನು?

ಆದರೆ ಈ ರೀತಿಯ ಯಾವುದೇ ಆಶಯ ಕಂಡುಬರುತ್ತಿಲ್ಲ. ಬದಲಾಗಿ, ಶ್ರೀ. ಮೋದಿ ಅವರು ನಮಗೆ ಎಫ್‌ಆರ್‌ಡಿಐ ಮಸೂದೆ ಕೊಟ್ಟಿದ್ದಾರೆ, ಈ ಮಸೂದೆ ಠೇವಣಿದಾರರ ರಕ್ಷಣೆಗಾಗಿ ಎನ್ನುತ್ತಿದ್ದಾರೆ. ಆದರೆ ಇದರ ಹಿಂದಿರುವ ನೈಜ ಉದ್ದೇಶ, ಕಾರ್ಪೋರೇಟ್‌ಗಳ ಕೆಟ್ಟ ಸಾಲಗಳನ್ನು ಪಾವತಿ ಮಾಡಲು ಠೇವಣಿದಾರರ ಹಣವನ್ನು ತೆಗೆದುಕೊಳ್ಳುವುದು. ಈ ಮಸೂದೆಯ ಮೂಲಕ ಶ್ರೀ ಮೋದಿಯವರು, ಈ ತಾವೂ ಕೂಡ ಹಿಂದಿನ ಪ್ರಧಾನಿಯಂತೆ, ಕಾರ್ಪೋರೇಟ್ ಕುಳಗಳ ಅಷ್ಟೇ ಉತ್ತಮ ಗೆಳೆಯ ಎಂಬುದನ್ನು ಸಾಬೀತುಪಡಿಸಿದ್ದಾರೆ.

➪ ಗುಜರಾತಿನ ಮತದಾರರ ಒಲವು ಒಟ್ಟಾರೆಯಾಗಿ ಕಡಿಮೆಯಾಗಿಲ್ಲ ಎನ್ನಬಹುದಾದರೂ ಅವರು ಅಜೇಯ ಎಂಬ ಭಾವನೆ ಕ್ರಮೇಣ ಮಾಯವಾಗುತ್ತಿದೆ. 2019ರ ಚುನಾವಣೆಯನ್ನೂ ಈ ಮೊದಲೇ ಅವರಿಗೆ ಬರೆದು ಕೊಟ್ಟವರು ಕೂಡ ಮರುಯೋಚನೆ ಮಾಡುವಂತಾಗಿದೆ ಎಂಬದು ಖಂಡಿತ.

ಕಳೆದ ತಿಂಗಳು ದಿಲ್ಲಿ ಕಂಡ ಒಂದು ಲಕ್ಷಕ್ಕೂ ಹೆಚ್ಚು ಕಾರ್ಮಿಕರ ಮೂರು ದಿನಗಳ ಮಹಾಪಡಾವ್, ನಂತರ ಎರಡು ದಿನಗಳ ಕಿಸಾನ್ ಮುಕ್ತಿ ಸಂಸದ್, ಕಾರ್ಮಿಕ ಸಂಘಟನೆಗಳ ಐಕ್ಯತೆ, ರೈತ ಸಂಘಟನೆಗಳ ಐಕ್ಯತೆ, ಎಲ್ಲ ಸಾಮೂಹಿಕ ಸಂಘಟನೆಗಳ ಮತ್ತು ಪ್ರಜಾಪ್ರಭುತ್ವವಾದಿ, ಜಾತ್ಯತೀತ ಜನಪರ ಗುಂಪುಗಳ ಐಕ್ಯತೆ ಕೊನೆಗೂ ಒಂದು ಪರ್ಯಾಯ ಧೋರಣೆಯ ಶಕ್ತಿಗಳು ಮೂಡಿ ಬರುವ ಲಕ್ಷಣಗಳು.

ಪ್ರಕಾಶ ಕಾರಟ್ ಅವರು ಹೇಳಿರುವಂತೆ "ಗುಜರಾತ್ ಚುನಾವಣೆಗಳ ಫಲಿತಾಂಶಗಳು ಬರುವ ಮೊದಲೇ ಒಬ್ಬ ಹಿಂದುತ್ವ ಮತಾಂಧನನ್ನು ದೇಶದ ಪ್ರಧಾನಿಯಾಗಿ ಹೊಂದಿರುವುದರ ಗಂಡಾಂತರಗಳನ್ನು ಚುನಾವಣಾ ಪ್ರಚಾರ ಎತ್ತಿ ತೋರಿರುವ"" ಹಿನ್ನೆಲೆಯಲ್ಲಿ ಇಂತಹ ಪರ್ಯಾಯ ಧೋರಣೆಗಳ ಶಕ್ತಿಗಳು ಮೂಡಿಬರುವುದು ಅನಿವಾರ್ಯವೂ ಆಗಿದೆ. ಗುಜರಾತ್ ವಿಧಾನಸಭಾ ಚುನಾವಣಾ ಫಲಿತಾಂಶ ಅದರ ಸಾಧ್ಯತೆಯ ದಿಕ್ಕಿನತ್ತ ಬೊಟ್ಟು ಮಾಡಿದೆ.

ಕಾರ್ಪೋರೇಟ್ ಮಾಧ್ಯಮ: ಮತ್ತೆ ನಗೆಪಾಟಲಾದರೂ ಅದೇ ಭಟ್ಟಂಗಿತನ

ಸಿಪಿಐ(ಎಂ) ಸಂಸತ್ ಸದಸ್ಯ ಎಂಬಿ. ರಾಜೇಶ್ ಹೇಳಿರುವಂತೆ ಮೋದಿ ಸರಕಾರದ 3755 ಕೋಟಿ ರೂ.ಗಳ ಪ್ರಚಾರ ಬಜೆಟಿನಲ್ಲಿ 1656 ಕೋಟಿ ರೂ.(44%) ಬಾಚಿಕೊಂಡ ಟಿವಿ ಮಾಧ್ಯಮಗಳು ಮತ್ತೊಮ್ಮೆ ನಗೆಪಾಟಲಾದವು. ಅವು ಪ್ರಕಟಿಸಿದ ಎಕ್ಸಿಟ್‌ಪೋಲ್‌ಗಳು ನಿಜವಾಗಿಯೂ ಚುನಾವಣಾ ಫಲಿತಾಂಶಗಳೋ ಎನ್ನುವಂತೆ ಅವು ಡಿಸೆಂಬರ್ 14ರಂದು ಬಿಜೆಪಿಯ 'ಭವ್ಯ ಗೆಲುವು' ಮತ್ತು ಕಾಂಗ್ರೆಸಿನ 'ಹೀನಾಯ' ಸೋಲಿನ ಬಗ್ಗೆ ಕೂಗಾಡಿದವು. ಆದರೆ ಅವು ವಾಸ್ತವದ ಹತ್ತಿರವೂ ಬರಲಿಲ್ಲ ಎಂದು ಜಗಜ್ಜಾಹೀರಾದ ಮೇಲೆ ಈ ಬಗ್ಗೆ ನಾಚಿಕೆ ಪಡುವುದಂತೂ ಒತ್ತಟ್ಟಿಗಿರಲಿ, ಎಕ್ಸಿಟ್ ಪೋಲ್‌ಗಳೇ ವಾಸ್ತವ ಎನ್ನುವಂತೆ ಅವುಗಳ ಭೋಪರಾಕುಗಳು ಎಗ್ಗಿಲ್ಲದೆ ಮುಂದುವರೆದವು. ಒಬ್ಬ ವಿಶ್ಲೇಷಕರು ಹೇಳುವಂತೆ ಈ ಬಾರಿಯಂತೂ ಈ ಮಾಧ್ಯಮಗಳು ತಮ್ಮ ರಾಜಕೀಯ ಅನಕ್ಷರತೆಯನ್ನು ಪ್ರದರ್ಶಿಸಿದವು. ಈ ಎಲ್ಲ ಎಕ್ಸಿಟ್ ಪೋಲ್‌ಗಳ ಪ್ರಕಾರವೂ ಕಾಂಗ್ರೆಸಿನ ಸೀಟುಗಳಲ್ಲಿ ಹೆಚ್ಚಳ ಕಂಡದ್ದು, ಬಿಜೆಪಿ ಸೀಟುಗಳ ಪ್ರಮಾಣ 2012ರ ಮಟ್ಟಕ್ಕಷ್ಟೆ ಕಂಡಿದ್ದದ್ದು, 2014ರ ಲೋಕಸಭಾ ಚುನಾವಣೆಗಳ ಪ್ರಮಾಣ ಮತ್ತು ಬಿಜೆಪಿ ಅಧ್ಯಕ್ಷರ 150+ ಮಿಶನ್ ಹತ್ತಿರವೂ ಬರದ್ದು ಅವರಿಗೆ ವಿಶ್ಲೇಷಣೆಯ ವಿಷಯವಾಗಲೇ ಇಲ್ಲ.

ಕೊನೆಯ ದಿನಗಳಲ್ಲಿ ಪ್ರಧಾನಿಗಳ ಪ್ರಚಾರ ವೈಖರಿಯನ್ನೂ ನಾಚಿಸುವಂತಹ ಡಿಸೆಂಬರ್14 ರ ಅವರ ಕೂಗಾಟಗಳು ಪತ್ರಕರ್ತರ ನೈತಿಕತೆಯ ಮಟ್ಟವನ್ನು ಇನ್ನಷ್ಟು ಪಾತಾಳಕ್ಕೆ ಇಳಿಸಿದವು ಎಂದು ಒಬ್ಬ ಪತ್ರಕರ್ತರೇ ನೋವಿನಿಂದ ಹೇಳಿದ್ದಾರೆ.



ಎಕ್ಸಿಟ್ ಪೋಲ್	ಬಿಜೆಪಿ	ಕಾಂಗ್ರೆಸ್+	ಇತರರು
ಟೈಮ್ಸ್ ನೌ–ವಿಎಂಆರ್	113	66	3
ಎಬಿಪಿ–ಸಿಡಿಎಸ್	117	64	1
ಸಹಾರ–ಸಮಯ್	112	68	2
ಚ–ವೋಟರ್	112	68	2
ಇಂಡಿಯ ಟುಡೆ–ಆಕಿಸ್	108	74	0
ನಿಜವಾದ ಜನಾದೇಶ	99	80	3



ರಾಜ್ಯಗಳ ಸುತ್ತ

ಪಂಜಾಬ್, ರಾಜಸ್ಥಾನದ ಸ್ಥಳೀಯ ಸಂಸ್ಥೆಗಳಲ್ಲಿಯೂ ಉತ್ತರಪ್ರದೇಶದ ಕತೆಯೇ

ರೈತರು, ಕಾರ್ಮಿಕರು ಮತ್ತು ದುಡಿಯುವ ಜನಗಳ ಆರ್ಥಿಕ ಹೋರಾಟಗಳ ಬಿಸಿ ಬಿಜೆಪಿಗೆ ಮುಟ್ಟುತ್ತಿದೆಯೇ? ಉತ್ತರಪ್ರದೇಶದ ನಂತರ ಈಗ ಪಂಜಾಬ್ ಮತ್ತು ರಾಜಸ್ಥಾನದಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆಗಳ ಫಲಿತಾಂಶಗಳನ್ನು ನೋಡಿದರೆ ಹೌದು ಎನ್ನಬಹುದು. ಗುಜರಾತಿನ ಫಲಿತಾಂಶಗಳ ಮರುದಿನವೇ ಪ್ರಕಟಗೊಂಡಿರುವ ರಾಜಸ್ಥಾನದಲ್ಲಿನ ಉಪಚುನಾವಣೆಗಳ ಫಲಿತಾಂಶಗಳನ್ನು ನೋಡಿ:

2013ರಿಂದ ಬಿಜೆಪಿ ಆಳ್ವಿಕೆ ಇರುವ ಇಲ್ಲಿ ಉಪಚುನಾವಣೆಗಳು 45 ಸೀಟುಗಳಿಗೆ ನಡೆದವು. ಅದರಲ್ಲಿ ಕಾಂಗ್ರೆಸ್ 25 ಪಡೆದಿದೆ. 26 ಪಂಚಾಯತು ಸಮಿತಿಗಳಲ್ಲಿ 16ರಲ್ಲಿ ಕಾಂಗ್ರೆಸ್ ಗೆದ್ದಿದೆ. ಎಲ್ಲ 4 ಜಿಲ್ಲಾ ಪರಿಷತ್ ಸೀಟುಗಳನ್ನು ಕಾಮಗ್ರೆಸ್ ಗೆದ್ದಿದೆ. ಬಿಜೆಪಿ 7 ನಗರಸಭೆ ಸೀಟುಗಳನ್ನು ಪಡೆದರೆ ಕಾಂಗ್ರೆಸ್ ಬಹಳ ಹಿಂದೆಯೇನೂ ಇಲ್ಲ, 6ನ್ನು ಪಡೆದಿದೆ. ಇದು ಆಳುವ ಬಿಜೆಪಿಗೆ ಒಂದು ದೊಡ್ಡ ಹೊಡೆತ ಎನ್ನಲಾಗಿದೆ.

ಇಲ್ಲಿ ಇತ್ತೀಚೆಗಷ್ಟೇ ಒಂದು ಪ್ರಬಲ ರೈತ ಹೋರಾಟ ನಡೆದು ಮುಖ್ಯಮಂತ್ರಿಗಳು ರೈತರ ಬೇಡಿಕೆಗಳನ್ನು ಒಪ್ಪಿಕೊಳ್ಳಬೇಕಾಗಿ ಬಂದಿತ್ತು ಎಂಬುದನ್ನು ನೆನಪಿಸಿಕೊಳ್ಳಬಹುದು.

ಇದಕ್ಕೆ ಮೊದಲು ಪಂಜಾಬಿನಲ್ಲೂ ಬಿಜೆಪಿಯ ಮಿತ್ರಕೂಟ ಗಮನಾರ್ಹ ಪರಾಜಯ ಅನುಭವಿಸಿದೆ. ಗುಜರಾತ್ ಫಲಿತಾಂಶದ ಹಿಂದಿನ ದಿನ ಬಂದ ಫಲಿತಾಂಶಗಳಲ್ಲಿ ಅಕಾಲಿದಳ-ಬಿಜೆಪಿ ಕೂಟ ವಿಧಾನಸಭಾ ಚುನಾವಣೆಗಳ ನಂತರ ನಗರಸಭೆಗಳ ಚುನಾವಣೆಗಳಲ್ಲೂ ಭಾರೀ ಸೋಲು ಅನುಭವಿಸಿದೆ. ಈ ಹಿಂದೆ ಬಿಜೆಪಿ-ಅಕಾಲಿದಳ ಕೂಟದ ಕೈಗಳಲ್ಲಿ ಇದ್ದ ಅಮೃತಸರ, ಜಾಲಂಧರ್ ಮತ್ತು ಪಾಟಿಯಾಲ ಈ ಮೂರೂ ಮಹಾನಗರಸಭೆಗಳನ್ನು ಕಳಕೊಂಡಿದೆ. ಕಾಂಗ್ರೆಸ್ 225 ವಾರ್ಡುಗಳಲ್ಲಿ 189ನ್ನು ಗೆದ್ದಿದೆ. ಬಿಜೆಪಿ-ಅಕಾಲಿದಳ ಕೂಟಕ್ಕೆ ದೊರೆತಿರುವುದು 25 ವಾರ್ಡುಗಳು ಮಾತ್ರ. ಚುನಾವಣೆ ನಡೆದ 32 ನಗರಸಭೆ ಮತ್ತು ನಗರಪಂಚಾಯತುಗಳ ಚುನಾವಣೆಗಳಲ್ಲಿ ಕಾಂಗ್ರೆಸ್ 28ನ್ನು ಪಡೆದಿದೆ. ಉಳಿದ 4ರಲ್ಲಿ ಬಿಜೆಪಿ-ಅಕಾಲಿ ಕೂಟದಷ್ಟೇ ಸೀಟುಗಳನ್ನು ಪಡೆದಿದೆ. ಒಟ್ಟು 414 ವಾರ್ಡುಗಳಲ್ಲಿ ಕಾಂಗ್ರೆಸ್ 267 ಗೆದ್ದರೆ ಬಿಜೆಪಿ ಕೂಟ ಕೇವಲ 52ರಲ್ಲಿ ಗೆದ್ದಿದೆ. ಪಕ್ಷೇತರರೇ ಅವರಿಗಿಂತ ಹೆಚ್ಚು ಅಂದರೆ 94 ಸೀಟುಗಳನ್ನು ಪಡೆದಿದ್ದಾರೆ.

8 ತಿಂಗಳ ಹಿಂದೆಯಷ್ಟೇ ಭಾರೀ ಬಹುಮತ ಪಡೆದ ಉತರಪ್ರದೇಶದಲ್ಲಿ ಬಿಜೆಪಿ 14 ರಲ್ಲಿ 12 ಮಹಾನಗರಸಭೆಗಳಲ್ಲಿ ಗೆದ್ದರೂ ನಗರ ಸಭೆ, ನಗರ ಪಂಚಾಯತುಗಳಲ್ಲಿ ಭಾರೀ ಪರಾಭವ ಅನುಭವಿಸಿದೆ ಎಂಬುದನ್ನು ನಾವು ಈ ಹಿಂದೆಯೇ ಗಮನಿಸಿದ್ದೇವೆ. 5434 ನಗರ ಪಂಚಾಯತು ಸೀಟುಗಳಲ್ಲಿ ಬಿಜೆಪಿಗೆ ದಕ್ಕಿದ್ದು 662 ಮಾತ್ರ; ಅದೇ ರೀತಿ, 5217 ನಗರಪಾಲಿಕಾ ಪರಿಷತ್‌ಗಳಲ್ಲಿ 904 ಮಾತ್ರ ಗೆದ್ದಿದೆ.



ಈಗ ಸಿಬಿಐ ಬೆದರಿಕೆ: ಎಸ್‌ಎನ್‌ಸಿ-ಲವ್ಲಿನ್ ಕೇಸಿನಲ್ಲಿ ಹೈಕೋರ್ಟ್ ತೀರ್ಪಿನ ವಿರುದ್ಧ ಸುಪ್ರಿಂ ಕೋರ್ಟಿನಲ್ಲಿ ಅಪೀಲು

ಕೇರಳದಲ್ಲಿ ಯಾವ ಆಟವೂ ಸಾಗದಾದಾಗ ಈಗ ಸಿಬಿಐ ಅಸ್ತ್ರ ಪ್ರಯೋಗಕ್ಕೆ ಸಿದ್ಧವಾಗುತ್ತಿರುವಂತೆ ಕಾಣುತ್ತದೆ. ಹೈಕೋರ್ಟ್ ಎಸ್‌ವನ್‌ಸಿ-ಲವ್ಲಿನ್ ಕೇಸಿನಲ್ಲಿ ಪಿಣರಾಯಿ ವಿಜಯನ್ ಅವರ ಪಾತ್ರ ಇಲ್ಲ ಎಂದು ಅವರನ್ನು ದೋಷಮುಕ್ತಗೊಳಿಸಿದ ನಾಲ್ಕು ತಿಂಗಳ ನಂತರ ಸಿಬಿಐ ಅದರ ವಿರುದ್ಧ ಸುಪ್ರಿಂ ಕೋರ್ಟಿನಲ್ಲಿ ಅಪೀಲು ಸಲ್ಲಿಸಿದೆ.

ಆ ತೀರ್ಪಿನಲ್ಲಿ ನ್ಯಾಯಾಧೀಶರು 7ನೇ ಆರೋಪಿ ಅಂದರೆ ಆಗ ವಿದ್ಯುತ್ ಮಂತ್ರಿಯಾಗಿದ್ದ ಪಿಣರಾಯಿ ವಿಜಯನ್ ಅವರು "ಎಸ್‌ಎನ್‌ಸಿ ಲವ್ಲಿನ್ ಮತ್ತು ಕೆಎಸ್‌ಇಬಿ ನಡುವಿನ ಪೂರೈಕೆ ಕಾಂಟ್ರಾಕ್ಟ್‌ಗಳಿಗೆ ಸಂಬಂಧಪಟ್ಟಂತೆ ಯಾವುದನ್ನೇ ಆದರೂ ಸಂಪುಟದಿಂದ ಮುಚ್ಚಿಟ್ಟಿದ್ದಾರೆ ಎಂಬ ಆರೋಪವನ್ನು ಸಾಬೀತು ಮಾಡಲು ಯಾವುದೇ ಸಂಗತಿ ನನಗೆ ಕಾಣುತ್ತಿಲ್ಲ...ಸಿಬಿಐ ವಿದ್ಯುತ್ ಮಂತ್ರಿಯವರನ್ನು ಮೊಕದ್ದಮೆಗೆ ಹೆಕ್ಕಿ ಆರಿಸಿದ್ದಕ್ಕೆ ಯಾವುದೇ ವಿವರಣೆ ಇಲ್ಲ.. ಸಂಪುಟ ಕೆಎಸ್‌ಇಬಿ ಒದಗಿಸಿದ ಮಾಹಿತಿಗಳು ಮತ್ತು ವರದಿಗಳ ಆಧಾರದಲ್ಲಿ ಮಂಜೂರಾತಿ ಕೊಟ್ಟಿದೆ. ಹಾಗಿರುವಾಗ, ಕೆಎಸ್‌ಇಬಿ ಮಾಡಿದ ತಪ್ಪು ಮತ್ತು ಕಾನೂನುಬಾಹಿರತೆಗೆ ವಿದ್ಯುತ್ ಮಂತ್ರಿಗಳನ್ನು ಹೆಕ್ಕಿ, ಆರಿಸಿ ಅವರ ಮೇಲೆ ಮೊಕದ್ದಮೆ ಹಾಕಿರುವುದು ಅನ್ಯಾಯ ಮತ್ತು ಕಾನೂನುಬಾಹಿರವಾಗುತ್ತದೆ" ಎಂದಿದ್ದರು.

ಈ ಹಿಂದೆ ಈಕೇಸಿನ ವಿಚಾರಣೆಯನ್ನು ಹೈಕೋರ್ಟ್ ಸಿಬಿಐಗೆ ವಹಿಸಿದಾಗ ಅದು ಆರೋಪಿಗಳ ಪಟ್ಟಿಯಿಂದ ಕೆಲವು ಹೆಸರುಗಳನ್ನು ತೆಗೆದು ಹಾಕಿ ಆಗ ವಿದ್ಯುತ್ ಮಂತ್ರಿಗಳಾಗಿದ್ದ ವಿಜಯನ್ ಮತ್ತು ವಿದ್ಯುತ್ ಇಲಾಖೆಯ ಜಂಟಿ ಕಾರ್ಯದರ್ಶಿಯ ಹೆಸರನ್ನು ಸೇರಿಸಿತ್ತು. ಆದರೆ ಇದಕ್ಕಾಗಿ ರಚಿಸಿದ್ದ ಸಿಬಿಐ ನ್ಯಾಯಾಲಯ ನವಂಬರ್ 2013ರಲ್ಲಿ ವಿಜಯನ್ ಮತ್ತು ಇತರ ಆರು ಮಂದಿಯನ್ನು ದೋಷಮುಕ್ತಗೊಳಿಸಿತು. ಸಿಬಿಐ ಇದರ ವಿರುದ್ಧ ಹೈಕೋರ್ಟಿಗೆ ಹೋಯಿತು. ಮೇಲೆ ಹೇಳಿದಂತೆ ಅದರ ಅಪೀಲನ್ನು ಹೈಕೋರ್ಟ್ ವಜಾ ಮಾಡಿತ್ತು.

ಅದೇನೇ ಇರಲಿ, ಪರೀಕ್ಷಣೆ ನಡೆಸುವುದಕ್ಕೆ ಸ್ವಾಗತ. ಆದರೆ ಅಮಿತ್‌ಷಾ ಆರೋಪಿಯಾಗಿದ್ದ ಹುಸಿ ಎನ್‌ಕೌಂಟರ್ ಕೇಸಿನಲ್ಲಿ ಸಿಬಿಐ ಕೋರ್ಟ್ ಅವರನ್ನು ದೋಷಮುಕ್ತಗೊಳಿಸಿದಾಗ ಸಿಬಿಐ ಅಪೀಲು ಹೋಗಲಿಲ್ಲವೇಕೆ? ಬಿಜೆಪಿ ಅಧ್ಯಕ್ಷರಿಗೆ ವಿಶೇಷ ರಕ್ಷಣೆ ಏನಾದರೂ ಇದೆಯೇ ಎಂದು ಈ ಕುರಿತು ಸೀತಾರಾಂ ಯೆಚುರಿ ಟಿಪ್ಪಣಿ ಮಾಡಿದ್ದಾರೆ.

ರಾಜ್ಯಸಮ್ಮೇಳನಗಳ ದಿನಾಂಕಗಳು

ದಿನಾಂಕ	ರಾಜ್ಯ	ಸ್ಥಳ
ನವಂಬರ್ 25–26	ಮಣಿಪುರ	ಇಂಫಾಲ್
ಡಿಸೆಂಬರ್ 16–17	ದಿಲ್ಲಿ	ದ್ವಾರ್ಕ
ಡಿಸೆಂಬರ್16–18	ಮಧ್ಯಪ್ರದೇಶ	ಸಂಬಲ್‌ಗಡ್
ಡಿಸೆಂಬರ್ 16–18	ಉತ್ತರಾಖಂಡ	ಅಲ್ಮೋರ
ಡಿಸೆಂಬರ್ 24–26	ರಾಜಸ್ತಾನ	ಝುನ್ಝುನು
ಜನವರಿ 2–5	ಕರ್ನಾಟಕ	ಮೂಡಬಿದ್ರಿ
ಜನವರಿ 7–9	ಒಡಿಶ	ಬೆಹ್ರಂಪುರ್
ಜನವರಿ 10–12	ಝರ್ಖಂಡ್	ಧನ್ಬಾದ್
ಜನವರಿ 14	ಅಂಡಮಾನ್–ನಿಕೋಬಾರ್	ಪೋರ್ಟ್‌ಬ್ಲೇರ್
ಜನವರಿ 23–25	ಪಂಜಾಬ್	ಮಹಿಲ್ಪುರ್
ಜನವರಿ 28–30	ಉತ್ತರಪ್ರದೇಶ	ವಾರಣಾಸಿ
ಫೆಬ್ರುವರಿ 1–3	ಛತ್ತೀಸ್‌ಗಡ್	ವಿಶ್ರಾಂಪುರ್
ಫೆಬ್ರುವರಿ 4–6	ಅಸ್ಸಾಂ	ಗುವಾಹಾಟಿ
ಫೆಬ್ರುವರಿ 4–7	ತೆಲಂಗಾಣ	ನಲ್ಗೊಂಡ
ಫೆಬ್ರುವರಿ 10–12	ಆಂಧ್ರಪ್ರದೇಶ	ಭೀಮಾವರಂ
ಫೆಬ್ರುವರಿ 15–17	ಮಹಾರಾಷ್ಟ್ರ	ಸಾಂಗ್ಲಿ
ಫೆಬ್ರುವರಿ 17–20	ತಮಿಳುನಾಡು	ತುತಿಕೊರಿನ್
ಫೆಬ್ರುವರಿ 22–25	ಕೇರಳ	ತ್ರಿಶೂರ್
ಫೆ.28–ಮಾರ್ಚ್ 1	ಗುಜರಾತ್	ರಾಜಕೋಟ್
ಮಾರ್ಚ್ 3–4	ಹರಿಯಾಣ	ತೊಹನ
ಮಾರ್ಚ್ 3–5	ಹಿಮಾಚಲಪ್ರದೇಶ	ಕುಲು
ಮಾರ್ಚ್ 5–8	ಪಶ್ಚಿಮಬಂಗಾಲ	ಕೊಲ್ಕತ
ಮಾರ್ಚ್ 9–11	ಬಿಹಾರ್	ಮಧುಬನಿ
ಮಾರ್ಚ್ 19–20	ಜಮ್ಮು–ಕಾಶ್ಮೀರ	ಜಮ್ಮು

ತ್ರಿಪುರ ಮತ್ತು ಗೋವಾ ರಾಜ್ಯಸಮ್ಮೇಳನಗಳ ದಿನಾಂಕಗಳನ್ನು ಮುಂದೆ ಪ್ರಕಟಿಸಲಾಗುವುದು.

ಸಿಪಿಐ(ಎಂ)ನ 22ನೇ ಮಹಾಧಿವೇಶನದತ್ತ

ಹೈದರಾಬಾದಿನಲ್ಲಿ ಮುಂದಿನ ವರ್ಷ ಎಪ್ರಿಲ್ 18ರಿಂದ 22 ರ ವರೆಗೆ ನಡೆಯಲಿರುವ ಸಿಪಿಐ(ಎಂ) ನ 22ನೇ ಮಹಾಧಿವೇಶನಕ್ಕೆ ಪೂರ್ವಭಾವಿಯಾಗಿ ರಾಜ್ಯ ಸಮ್ಮೇಳನಗಳು ಆರಂಭವಾಗಿವೆ.

ಕಳೆದ ವಾರ ಇಂತಹ ಮೂರು ರಾಜ್ಯಸಮ್ಮೇಳನಗಳು ನಡೆದಿವೆ.

15ನೇ ದಿಲ್ಲಿ ರಾಜ್ಯಸಮ್ಮೇಳನ ಡಿಸೆಂಬರ್ 16 ಮತ್ತು 17 ರಂದು ನಡೆಯಿತು. ಹಿರಿಯ ಮುಖಂಡ ಬಲದೇವ್ ಸಿಂಗ್‌ರವರಿಂದ ಕೆಂಬಾವುಟದ ಆರೋಹಣದೊಂದಿಗೆ ಆರಂಭವಾದ ಸಮ್ಮೇಳನದಲ್ಲಿ ಸಿಪಿಐ(ಎಂ) ಪೊಲಿಟ್‌ಸದಸ್ಯರಾದ ಪ್ರಕಾಶ ಕಾರಟ್, ಬೃಂದಾ ಕಾರಟ್ ಮತ್ತು ಕೇಂದ್ರ ಸಮಿತಿ ಸದಸ್ಯ ಪುಷ್ಪಿಂದರ್ ಗ್ರೆವಾಲ್ ಹಾಜರಿದ್ದರು.

ಎರಡು ದಿನಗಳ ಚರ್ಚೆಗಳ ನಂತರ 30 ಸದಸ್ಯರಿರುವ ಹೊಸ ರಾಜ್ಯಸಮಿತಿಯನ್ನು ಆರಿಸಲಾಯಿತು. ಕೆ.ಎಂ. ತಿವಾರಿ ರಾಜ್ಯ ಕಾರ್ಯದರ್ಶಿಯಾಗಿ ಆಯ್ಕೆಗೊಂಡರು.

15ನೇ ಮಧ್ಯಪ್ರದೇಶ ರಾಜ್ಯ ಸಮ್ಮೇಳನ ಸಬಲ್‌ಗಡ್‌ನಲ್ಲಿ ಡಿಸೆಂಬರ್ 16 ರಿಂದ 18ರ ವರೆಗೆ ನಡೆಯಿತು. ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚುರಿ ಮತ್ತು ಪೊಲಿಟ್‌ಬ್ಯುರೊ ಸದಸ್ಯರಾದ ಸುಭಾಷಿಣಿ ಅಲಿಯವರು ಭಾಗವಹಿಸಿದರು.

ಸಮ್ಮೇಳನದ ಕೊನೆಯಲ್ಲಿ 30 ಸದಸ್ಯರಿರುವ ಹೊಸ ರಾಜ್ಯಸಮಿತಿಯನ್ನು ಆರಿಸಲಾಯಿತು. ಇದರಲ್ಲಿ 5 ಮಹಿಳಾ ಸದಸ್ಯರಿದ್ದಾರೆ. ಜಸ್ವಿಂದರ್ ಸಿಂಗ್ ರಾಜ್ಯ ಕಾರ್ಯದರ್ಶಿಯಾಗಿ ಆಯ್ಕೆಗೊಂಡರು.

6ನೇ ಉತ್ತರಾಖಂಡ ರಾಜ್ಯ ಸಮ್ಮೇಳನ ಡಿಸೆಂಬರ್ 19 ರಂದು 25 ಸದಸ್ಯರಿರುವ ರಾಜ್ಯಸಮಿತಿಯ ಆಯ್ಕೆಯೊಂದಿಗೆ ಸಮಾರೋಪಗೊಂಡಿತು. ರಾಜೇಂದ್ರಸಿಂಗ್ ನೇಗಿ ರಾಜ್ಯಕಾರ್ಯದರ್ಶಿಯಾಗಿ ಆಯ್ಕೆಗೊಂಡರು.

ನವಂಬರ್ 25–26ರಲ್ಲಿ ಇಂಫಾಲ್‌ನಲ್ಲಿ **18ನೇ ಮಣಿಪುರ ರಾಜ್ಯ ಸಮ್ಮೇಳನ**ದೊಂದಿಗೆ ಈ ಪ್ರಕ್ರಿಯೆ ಆರಂಭವಾಗಿತ್ತು. ಇದರಲ್ಲಿ 13 ಸದಸ್ಯರಿರುವ ಹೊಸ ರಾಜ್ಯಸಮಿತಿಯನ್ನು ಆರಿಸಲಾಯಿತು. ಕೆ.ಸಾಂತ ಹೊಸ ರಾಜ್ಯ ಕಾರ್ಯದರ್ಶಿಯಾಗಿ ಆಯ್ಕೆಗೊಂಡರು.

6ನೇ ಉತ್ತರಾಖಂಡ ರಾಜ್ಯ ಸಮ್ಮೇಳನ



15ನೇ ದಿಲ್ಲಿ ರಾಜ್ಯಸಮ್ಮೇಳನ





15ನೇಮಧ್ಯಪ್ರದೇಶ ರಾಜ್ಯಸಮ್ಮೇಳನ

ಎಡರಂಗದ ಅಭೂತಪೂರ್ವ ಜಯ ನೇಪಾಳದಲ್ಲಿ ಕೆಂಬಾವುಟಗಳ ಕಲರವ





* ಪ್ರಕಾಶ್ ಕಾರಟ್ (ಅನು: ವಿಶ್ವ)

ನೇಪಾಳದ ಫೆಡರಲ್ ಮತ್ತು ಪ್ರಾಂತೀಯ ಚುನಾವಣೆಗಳಲ್ಲಿ ನೇಪಾಳ ಕಮ್ಯೂನಿಸ್ಟ್ ಪಕ್ಷ (ಸಂಯುಕ್ತ ಮಾರ್ಕ್ಸ್‌ವಾದಿ-ಲೆನಿನ್‌ವಾದಿ) ಮತ್ತು ನೇಪಾಳ ಕಮ್ಯೂನಿಸ್ಟ್ ಪಕ್ಷ (ಮಾವೋವಾದಿ ಕೇಂದ್ರ) ಮೈತ್ರಿಕೂಟಕ್ಕೆ ಭಾರೀ ಜಯ ಸಿಕ್ಕಿರುವುದು ನೇಪಾಳದ ರಾಜಕೀಯದಲ್ಲಿ ಮಹತ್ವದ ಬೆಳವಣಿಗೆಯಾಗಿದೆ. ಇದು ದಕ್ಷಿಣ ಏಷ್ಯಾದಲ್ಲೂ ತನ್ನ ಪರಿಣಾಮವನ್ನು ಬೀರಲಿದೆ.

2015 ಸೆಪ್ಟೆಂಬರ್‌ನಲ್ಲಿ ಅಳವಡಿಸಲಾದ ಹೊಸ ಸಂವಿಧಾನದ ಅಡಿಯಲ್ಲಿ ನಡೆದ ಸಂಸದೀಯ ಚುನಾವಣೆಗಳಲ್ಲಿ ಕಮ್ಯೂನಿಸ್ಟ್ ಮೈತ್ರಿಕೂಟ ನಿರ್ಣಾಯಕ ಬಹುಮತದ ಗೆಲುವನ್ನು ಸಾಧಿಸಿದೆ. 2008ರಲ್ಲಿ ಪ್ರಥಮ ಸಂವಿಧಾನ ರಚನಾ ಸಭೆಯನ್ನು ರಚಿಸಿದಾಗಿನಿಂದ, ಕಮ್ಯೂನಿಸ್ಟ್ ಭಾಗವಹಿಸುವಿಕೆಯಿದ್ದ ಅನೇಕ ಸರಕಾರಗಳು ನೇಪಾಳದಲ್ಲಿ ಬಂದಿವೆ. ಆದರೆ ಅಪ್ಪಟ ಎಡ ಸರಕಾರವೊಂದು ರಚನೆಯಾಗುತ್ತಿರುವುದು ಇದೇ ಮೊದಲು. ಎರಡು ಅತಿ ದೊಡ್ಡ ಎಡ ಪಕ್ಷಗಳಾದ ಸಿಪಿಎನ್ (ಯುಎಂಎಲ್) ಮತ್ತು ಸಿಪಿಎನ್ (ಎಂಸಿ) ಇವುಗಳ ಮೈತ್ರಿಯಿಂದಾಗಿ ಇದು ಸಾಧ್ಯವಾಗಿದೆ. ಚುನಾವಣೆ ಸಂದರ್ಭದಲ್ಲಿ ಮೈತ್ರಿಯ ಬಗ್ಗೆ ಘೋಷಿಸಿದ್ದ ಉಭಯ ಪಕ್ಷಗಳು ಚುನಾವಣೆಯ ನಂತರ ವಿಲೀನಗೊಂಡು ಒಂದೇ ಪಕ್ಷ ರಚಿಸುವ ಇರಾದೆಯನ್ನೂ ವ್ಯಕ್ತಪಡಿಸಿದ್ದವು.

ಫೆಡರಲ್ ಸಂಸತ್ತಿನ 275 ಸ್ಥಾನಗಳ ಪೈಕಿ 165 ಸ್ಥಾನಗಳು ಫಸ್ಟ್-ಪಾಸ್ಟ್-ದ-ಪೋಸ್ಟ್ (ಅತ್ಯಂತ ಹೆಚ್ಚು ಮತ ಗಳಿಸಿದ ಅಭ್ಯರ್ಥಿ ಗೆಲ್ಲುವ) ವ್ಯವಸ್ಥೆಯ ಅಡಿಯಲ್ಲಿ ಪ್ರದೇಶವಾರು ಕ್ಷೇತ್ರಗಳಿಂದ ಆಯ್ಕೆ ಆಗಿರುವಂಥದ್ದು. 110 ಸ್ಥಾನಗಳು ಪ್ರತ್ಯೇಕ ಮತಪತ್ರಗಳ ಮೂಲಕ ಪಕ್ಷಗಳು ಗಳಿಸಿದ ಮತಗಳ ಅನುಪಾತದ ಆಧಾರದಲ್ಲಿ ಅನುಪಾತ ಪ್ರಾತಿನಿಧ್ಯದ (ಪ್ರಪೋರ್ಷನಲ್ ರೆಪ್ರಸಂಟೇಷನ್) ಆಯ್ಕೆಯಾಗಿದೆ. ಕ್ಷೇತ್ರವಾರು ಸ್ಥಾನಗಳಲ್ಲಿ ಸಿಪಿಎನ್ (ಯುಎಂಎಲ್) 80 ಸ್ಥಾನಗಳನ್ನು ಹಾಗೂ ಸಿಪಿಎನ್ (ಎಂಸಿ) 36 ಸ್ಥಾನಗಳನ್ನು ಗೆದ್ದಿವೆ; ಅಂದರೆ ಒಟ್ಟು 116 ಸ್ಥಾನಗಳು. ಅನುಪಾತ ಪ್ರಾತಿನಿಧ್ಯ ವ್ಯವಸ್ಥೆ ಅಡಿ ಅಧಿಕೃತ ಫಲಿತಾಂಶ ಇನ್ನೂ ಘೋಷಿಸಿಲ್ಲವಾದರೂ ಸಿಪಿಎನ್ (ಯುಎಂಎಲ್) 41 ಸ್ಥಾನಗಳನ್ನು ಹಾಗೂ ಸಿಪಿಎನ್ (ಎಂಸಿ) 17, ಅಂದರೆ ಒಟ್ಟು 58 ಸ್ಥಾನಗಳನ್ನು ಗಳಿಸಿವೆ ಎಂದು ವರದಿಯಾಗಿದೆ. ಒಟ್ಟಾರೆಯಾಗಿ ಎಡ ಮೈತ್ರಿಕೂಟ ಒಟ್ಟು 174 ಸ್ಥಾನಗಳನ್ನು ಪಡೆದಿದೆ. ಇದು ಒಟ್ಟು ಸ್ಥಾನಗಳ 63.3 ಶೇಕಡಾದಷ್ಟಾಗುತ್ತದೆ, ಅಂದರೆ ಮೂರನೇ ಎರಡು ಬಹುಮತಕ್ಕೆ ಸ್ವಲ್ಪ ಕಡಿಮೆ. ಇನ್ನೊಂದು ಪ್ರಮುಖ ಪಕ್ಷವಾದ ನೇಪಾಳಿ ಕಾಂಗ್ರೆಸ್ ನೇರ ಚುನಾವಣೆಯಲ್ಲಿ ಕೇವಲ 23 ಸ್ಥಾನಗಳನ್ನು ಹಾಗೂ ಅನುಪಾತ ಪ್ರಾತಿನಿಧ್ಯದಲ್ಲಿ 40 ಸ್ಥಾನಗಳನ್ನಷ್ಟೇ ಪಡೆದು ಕಳಪೆ ಸಾಧನೆ ಮಾಡಿದೆ. ಏಳು ಪ್ರಾಂತೀಯ ಅಸೆಂಬ್ಲಿಗಳಿಗೆ ನಡೆದ ಚುನಾವಣೆಗಳಲ್ಲಿ ಆರರಲ್ಲಿ ಎಡ ಮೈತ್ರಿಕೂಟ ಬಹುಮತ ಸಾಧಿಸಿದೆ.

ಈ ರೀತಿಯಾಗಿ, ಚುನಾವಣೆಯ ಈ ಫಲಿತಾಂಶ ಕಮ್ಯೂನಿಸ್ಟ್ ಮೈತ್ರಿಕೂಟದಲ್ಲಿ ನೇಪಾಳದ ಜನತೆ ವ್ಯಕ್ತಪಡಿಸಿರುವ ಅಭೂತಪೂರ್ವ ವಿಶ್ವಾಸವಾಗಿದೆ. ಕಳೆದ ದಶಕಕ್ಕೆ ಹೋಲಿಸಿದರೆ, ಈ ಚುನಾವಣೆ ಫಲಿತಾಂಶ ದೇಶದಲ್ಲಿ ರಾಜಕೀಯ ಸ್ಥಿರತೆಯನ್ನು ಸ್ಥಾಪಿಸಲಿದೆ. ಉತ್ತಮ ಜೀವನಕ್ಕಾಗಿ ಜನತೆ ಹೊಂದಿರುವ ಅಪಾರ ನಿರೀಕ್ಷೆಯನ್ನು ಪೂರೈಸುವ, ಭೂಕಂಪದಿಂದ ಉಧ್ವಸ್ತಗೊಂಡಿರುವ ಪ್ರದೇಶಗಳಲ್ಲಿ ಪುನರ್ವಸತಿ ಕಲ್ಪಿಸುವ ಹಾಗೂ ಮರುನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸುವ ಗುರುತರ ಜವಾಬ್ದಾರಿ ಸಿಪಿಎನ್ (ಯುಎಂಎಲ್) ನಾಯಕ ಕೆ.ಪಿ. ಓಲಿ ನೇತೃತ್ವದಲ್ಲಿ ರಚನೆಯಾಗುವುದೆಂದು ನಿರೀಕ್ಷಿಸಲಾಗಿರುವ ಹೊಸ ಸರಕಾರದ ಮೇಲಿದೆ. ಪ್ರಜಾಸತ್ತಾತ್ಮಕ ಸಂಸ್ಥೆಗಳನ್ನು ಹಾಗೂ ಗಣರಾಜ್ಯ ಸಂವಿಧಾನದಲ್ಲಿ ಅಡಕವಾಗಿರುವ ಮೌಲ್ಯಗಳನ್ನು ಬಲಪಡಿಸುವ ಹೊಣೆಗಾರಿಕೆಯೂ ಸರಕಾರದ ಮೇಲಿದೆ. ಆರ್ಥಿಕ ಮತ್ತು ಸಾಮಾಜಿಕ ಪ್ರಗತಿ ಸಾಧಿಸುವ ಎಡ-ಕೇಂದ್ರಿತ ಕಾರ್ಯಕ್ರಮವೊಂದನ್ನು ಜಾರಿಗೊಳಿಸುವ ಸುವರ್ಣಾವಕಾಶ ಎಡ ಮೈತ್ರಿಕೂಟ ಸರಕಾರಕ್ಕೆ ಲಭಿಸಿದೆ.





ನೇಪಾಳದಲ್ಲಿ ಎಡ ಮೈತ್ರಿಕೂಟದ ವಿಜಯದಿಂದ ಮೋದಿ ಸರಕಾರದಲ್ಲಿ ಅಸಹನೆ ಹಾಗೂ ಅಳುಕುಗಳು ಮೂಡಿವೆ. ಭಾರತದ ಆಳಿತ ವ್ಯವಸ್ಥೆ ತನ್ನ ಪ್ರಭಾವಲಯದಲ್ಲಿ ಯಾವಾಗಲೂ ನೇಪಾಳವನ್ನು ಒಂದು ಕಿರಿಯ ಪಾಲುದಾರನನ್ನಾಗಿ ಕಾಣಬಯಸುತ್ತದೆ. 2015ರ ಸೆಪ್ಟೆಂಬರ್-ಡಿಸೆಂಬರ್ ನಡುವೆ ನಡೆದ ಮಾಧೇಸಿ ಚಳವಳಿ ಹುಟ್ಟುಹಾಕಿದ ಆರ್ಥಿಕ ದಿಗ್ಬಂಧನ ವಿಚಾರದಲ್ಲಿ ಮೋದಿ ಸರಕಾರ ಶಾಮೀಲಾದ ರೀತಿಯೇ ಭಾರತದ ಈ ದೊಡ್ಡಣ್ಣನ ಧೋರಣೆಗೆ ಸಾಕ್ಷಿಯಾಗಿದೆ. ಭೂಕಂಪದ ನಂತರದ ಪರಿಣಾಮಗಳಿಂದ ನಲುಗುತ್ತಿರುವುದರ ನಡುವೆಯೇ ಇಂಧನವೂ ಸೇರಿದಂತೆ ಅವಶ್ಯಕ ಸಾಮಗ್ರಿಗಳ ಸರಬರಾಜು ಸ್ಥಗಿತಗೊಂಡಿದ್ದರಿಂದ ನೇಪಾಳಿ ಜನರು ಅನಪೇಕ್ಷಿತ ಸಂಕಟಗಳನ್ನು ಅನುಭವಿಸಿದರು. ಆಗ ಪ್ರಧಾನಿಯಾಗಿದ್ದ ಕೆ.ಪಿ. ಓಲಿ, ಮೋದಿ ಸರಕಾರದ ಧೋರಣೆಯಿಂದ ಸಹಜವಾಗಿಯೇ ರೊಚ್ಚಿಗೆದ್ದಿದ್ದರು.

ನೇಪಾಳದಲ್ಲಿನ ಪ್ರಮುಖ ರಾಜಕೀಯ ಬೆಳವಣಿಗೆ ನೇಪಾಳ ಕುರಿತು ಭಾರತದಲ್ಲಿ ಮರು-ಚಿಂತನೆ ಮತ್ತು ಧೋರಣೆಯನ್ನು ಬದಲಾಯಿಸಲು ಕಾರಣವಾಗಬೇಕು. ಸಮಾನತೆ ಮತ್ತು ನೇಪಾಳದ ಆಂತರಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡದಿರುವ ಆಧಾರದಲ್ಲಿ ಸಹಕಾರದ ನಿಕಟ ಸಂಬಂಧ ಸ್ಥಾಪಿಸಲು ಮೋದಿ ಸರಕಾರ ಪ್ರಯತ್ನಿಸಬೇಕು.

ಎರಡು ಬೃಹತ್ ನೆರೆಯ ದೇಶಗಳಾದ ಭಾರತ ಮತ್ತು ಚೀನಾಗಳ ಜೊತೆ ಸೌಹಾರ್ದ ಸಂಬಂಧ ಇರಿಸಿಕೊಳ್ಳಲು ನೇಪಾಳ ಬಯಸುತ್ತದೆ ಎಂಬ ವಾಸ್ತವವನ್ನು ಕೂಡ ಮೋದಿ ಸರಕಾರ ಮಾನ್ಯ ಮಾಡಬೇಕು. ದಕ್ಷಿಣ ಏಷ್ಯಾದ ಇತರ ದೇಶಗಳಂತೆ "ಬೆಲ್ಟ್ ಮತ್ತು ರೋಡ್ ಉಪಕ್ರಮ"ದಲ್ಲಿ ಸಹಕಾರ ನೀಡಲೂ ನೇಪಾಳ ಬಯಸುತ್ತದೆ. ನೇಪಾಳ ಒಂದು ಸ್ವತಂತ್ರ ವಿದೇಶಾಂಗ ನೀತಿಯನ್ನು ಪ್ರತಿಪಾದಿಸುವುದನ್ನು ಭಾರತ ಅನುಮಾನದ ದೃಷ್ಟಿಯಿಂದ ನೋಡಬಾರದು. ನೇಪಾಳ ಮತ್ತು ಭಾರತದ ನಡುವಣ ಐತಿಹಾಸಿಕ ಮತ್ತು ಸಾಂಸ್ಕೃತಿಕ ಬಾಂಧವ್ಯವನ್ನು ಗಟ್ಟಿಗೊಳಿಸುವತ್ತ ಕೆಲಸ ಮಾಡಬೇಕು. ನೇಪಾಳದ ಆರ್ಥಿಕ ಅಭಿವೃದ್ಧಿಗೆ ಮತ್ತು ನಮ್ಮ ಸಾಮಾನ್ಯ ಸಾಂಸ್ಕೃತಿಕ ಪರಂಪರೆಯ ಮೇಲೆ ಬಾಂಧವ್ಯ ವರ್ಧನೆಗೆ ಸಕಾರಾತ್ಮಕ ಕ್ರಮಗಳನ್ನು ಕೈಗೊಳ್ಳಬೇಕು.

ಭಾರತದಲ್ಲಿನ ಎಡ ಮತ್ತು ಪ್ರಗತಿಪರ ವಲಯಕ್ಕೆ ನೇಪಾಳಿ ಕಮ್ಯೂನಿಸ್ಟರ ವಿಜಯ ಅತ್ಯಂತ ಸಂತಸದ ಸಂಗತಿಯಾಗಿದೆ. ನೇಪಾಳಿ ಕಮ್ಯೂನಿಸ್ಟರ ಹೊಸ ಕಾರ್ಯಭಾರಗಳಿಗೆ ನಾವು ಸಂಪೂರ್ಣ ಬೆಂಬಲ ಮತ್ತು ಸೌಹಾರ್ದವನ್ನು ವ್ಯಕ್ತಪಡಿಸುತ್ತೇವೆ. ■

ನೇಪಾಳಿ ಕಮ್ಯುನಿಸ್ಟ್ ವಿಜಯದ ಇತರ ಆಯಾಮಗಳು

- ಇತ್ತೀಚೆಗೆ ಸ್ಥಳೀಯ ಸಂಸ್ಥೆಗಳಿಗೆ ನಡೆದ ಚುನಾವಣೆಗಳಲ್ಲಿ ಎರಡೂ ಎಡಪಂಥೀಯ ಪಕ್ಷಗಳು ಒಟ್ಟು 753 ಸ್ಥಾನಗಳ ಪೈಕಿ 401 (ಅಂದರೆ ಶೇ. 53 ರಷ್ಟು) ಗ್ರಾಮ ಕೌನ್ಸಿಲ್, ಪುರಸಭೆಗಳ ಮೇಯರುಗಳ ಸ್ಥಾನಗಳನ್ನೂ ತಮ್ಮ ಮಡಿಲಿಗೆ ಹಾಕಿಕೊಂಡಿದ್ದಾರೆ.
- 2006 ರ ವರೆಗೆ ನಡೆದ ಆಂತರಿಕ ಯುದ್ಧದ ನಂತರ, 11 ವರ್ಷಗಳಲ್ಲಿ ನೇಪಾಳವು 10 ಪ್ರಧಾನ ಮಂತ್ರಿಗಳನ್ನು ಕಂಡಿದೆ.
- ಆಳುವ ವರ್ಗಗಳನ್ನು ಪ್ರತಿನಿಧಿಸುವ ನೇಪಾಳಿ ಕಾಂಗ್ರೆಸ್ ಎಡ ಮೈತ್ರಿಕೂಟವನ್ನು ಎದುರಿಸಲು, ತಮ್ಮ ವರ್ಗಹಿತ ಪ್ರತಿನಿಧಿಸುವ ರಾಜಪ್ರಭುತ್ವ-ಪರ ಪಕ್ಷಗಳೊಂದಿಗೆ ಮೈತ್ರಿಕೂಟವನ್ನು ಏರ್ಪಡಿಸಿಕೊಂಡಿತ್ತು. ಈ ಅವಕಾಶವಾದಿ ಮೈತ್ರಿಕೂಟವನ್ನೂ ನೇಪಾಳದ ಮತದಾರರು ತಿರಸ್ಕರಿಸಿದ್ದಾರೆ. ಪ್ರಮುಖವಾಗಿ ಜಾತ್ಯಾತೀತತೆ ಮತ್ತು ರಿಪಬ್ಲಿಕನ್ ಸಂವಿಧಾನದ ಬದ್ಧತೆಯನ್ನೂ ಬಹಿರಂಗವಾಗಿಯೇ ತಿರಸ್ಕರಿಸಿದ ರಾಜಪ್ರಭುತ್ವ-ಪರ ಪಕ್ಷಗಳ ಜತೆ ನೇಪಾಳಿ ಕಾಂಗ್ರೆಸ್ ಮೈತ್ರಿ ಈ ಆಶಯಗಳಿಗೆ ಅದರ ಬದ್ಧತೆಯನ್ನು ಸಂಶಯಾಸ್ಪದವಾಗಿಸಿತ್ತು.
- ಎರಡೂ ಕಮ್ಯುನಿಸ್ಟ್ ಪಕ್ಷಗಳು ನೇಪಾಳದ ರಾಜಕೀಯ ಸ್ಥಿರತೆ, ರಾಷ್ಟ್ರೀಯ ಸಮೃದ್ಧಿ ಮತ್ತು ತಳ ಸಮುದಾಯಗಳ ಹಕ್ಕುಗಳ ರಕ್ಷಣೆಗೆ ಆದ್ಯತೆಯ ಭರವಸೆ ನೀಡಿವೆ. ತಲಾ ಆದಾಯದ ಹೆಚ್ಚಳ, ನಿರುದ್ಯೋಗಿ ಯುವಜನರಿಗೆ ಉದ್ಯೋಗಗಳನ್ನು ಒದಗಿಸುವುದು ಮತ್ತು ಮೂಲ ಸೌಕರ್ಯಗಳ ಅಭಿವೃದ್ಧಿಪಡಿಸುವ ಭರವಸೆಗಳನ್ನು ಕೊಟ್ಟಿವೆ.
- ಎರಡು ಎಡಪಕ್ಷಗಳ ಮೈತ್ರಿ ಕೇವಲ ಚುನಾವಣಾ ತಂತ್ರವಾಗಿರದೆ, ಒಂದು ಪರಸ್ಪರ ಒಪ್ಪಿತ ಕಾರ್ಯಕ್ರಮದ ಆಧಾರದಲ್ಲಿ ಮುಂದುವರೆದು, ಸೈದ್ಧಾಂತಿಕವಾಗಿಯೂ ಸಂಘಟನಾತ್ಮಕವಾಗಿಯೂ ಗಟ್ಟಿಯಾಗಿ ನೆಲೆಯೂರುವ ಪಕ್ಷ ಅಥವಾ ಕೂಟವಾಗಿ ಹೊಮ್ಮುತ್ತದೆ ಎಂಬ ವ್ಯಾಪಕ ನಿರೀಕ್ಷೆ ಇದೆ.

'ಇನ್ಸಲ್ಟ್' ಮತ್ತು ಮಾನವೀಯತೆ............

ಪುಟ 6 ರಿಂದ

ಪಕ್ಷಪಾತದ ಸಾಮ್ರಾಜ್ಯಶಾಹಿ ಧೋರಣೆಗಳಿಂದಾಗಿ ಪ್ಯಾಲೆಸ್ತೀನಿಯರು ತಮ್ಮ ನೆಲೆಕಳೆದುಕೊಂಡು, ನಿರಂತರ ದೌರ್ಜನ್ಯಗಳಿಗೆ ಒಳಗಾಗುತ್ತಾ, ನೆರೆ ರಾಜ್ಯಗಳಲ್ಲಿ ನಿರಾಶ್ರಿತರಾಗಿ ಬದುಕಬೇಕಾಗಿ ಬಂದಿರುವುದು ಅವರ ಪಾಲಿಗೆ ಇಂದಿಗೂ ಬಗೆಹರಿಯದ ಜೀವಂತ ರಾಜಕೀಯ ಸಮಸ್ಯೆಯಾಗಿದೆ.

ಲೆಬನಾನ್ ದೇಶದಲ್ಲಿ ನಡೆದ ಅಂತರ್ ಯುದ್ಧದ ಪರಿಣಾಮಗಳ ಹಿನ್ನೆಲೆಯಲ್ಲಿ, "ಇನ್ಸಲ್ಟ್" ಚಿತ್ರದ ಕ್ರೈಸ್ತಧರ್ಮೀಯನಾದ ಟೋನಿ ಮತ್ತು ಅರಬ್ಬನಾದ ಯಾಸಿರ್ ಪರಸ್ಪರರ ಮಾಯದ ಹುಣ್ಣುಗಳನ್ನು ಹೊಟ್ಟೆಯಲ್ಲಿಟ್ಟುಕೊಂಡು ಜನಾಂಗೀಯ ಭೇದಗಳ ನಡುವೆಯೇ ಸಹಜೀವಿಗಳಾಗಿ ಬದುಕುವವರು. ಇಸ್ರೇಲಿನ ದೌರ್ಜನ್ಯದ, ವಿಸ್ತರಣವಾದೀ ದಮನಕಾರೀ ರಾಜಕೀಯದ ಪರಿಣಾಮವಾಗಿ ಇಬ್ಬರೂ ಸಂತ್ರಸ್ತರೇ ಎಂಬುದು "ಇನ್ಸಲ್ಟ್" ಚಿತ್ರದ ಆಂತರ್ಯ. ಕ್ಷಮಾಯಾಚನೆಗೆ ಹಟ್ಟುವ ಆಗ್ರಹವಾಗಲಿ, ಕ್ಷಮೆಯಾಚಿಸಲು ಹಿಂದೆಗೆಯುವ ಮನಸ್ಥಿತಿಯಾಗಲಿ ಇದೇ ನೆಲೆಯಿಂದಲೇ ಹುಟ್ಟುವಂಥವು. ದ್ವೇಷಿಸುವುದಕ್ಕಿಂತ, ಪ್ರೀತಿಸುವ, ಕ್ಷಮಿಸುವ ಮನಸ್ಥಿತಿ ಅಪೇಕ್ಷಣೀಯ ಎಂಬುದು ಚಿತ್ರದ ನಿರ್ದೇಶಕರ ಧೋರಣೆ. ಚಿತ್ರದ ಪ್ರಾರಂಭದಲ್ಲಿ "ಇನ್ಸಲ್ಟ್" ಚಿತ್ರದಲ್ಲಿ ವ್ಯಕ್ತವಾಗುವ ಧೋರಣೆ ಲೆಬನಾನ್ ಸರ್ಕಾರದ ಅಧಿಕೃತ ಧೋರಣೆಯಲ್ಲ ಎಂದು ಸ್ಪಷ್ಟಪಡಿಸಲಾಗಿದೆ.

ನಿಜ ಘಟನೆ ಚಿತ್ರಕ್ಕೆ ಆಧಾರ

"ಇನ್ಸಲ್ಟ್" ಚಿತ್ರದ ನಿರ್ದೇಶಕ ಝಿಯಾದ್ ದೌವೇರಿಯ ತಾಯಿ-ತಂದೆಯರು ಸೆಕ್ಯುಲರ್ ಅರಬ್ಬರು. ಪ್ಯಾಲೆಸ್ತೀನಿನ ಬಿಡುಗಡೆಗಾಗಿ ಸಂಘಟಿತವಾಗಿದ್ದ ಎಡಪಂಥೀಯ ಸಂಘಟನೆಯ ಜೊತೆ ತಮ್ಮನ್ನು ಗುರುತಿಸಿಕೊಂಡು ಕ್ರೈಸ್ತಮತೀಯ ವಿರೋಧಿಗಳನ್ನು ಮನಸಾರೆ ದ್ವೇಷಿಸಿದವರು. ನೆರೆಹೊರೆಯವರಾಗಿ ವಾಸಿಸುತ್ತಿದ್ದರೂ ಪರಸ್ಪರ ಕಟ್ಟಾ ದ್ವೇಷಿಗಳಾಗಿರುವ ಅರಬ್-ಕ್ರೈಸ್ತ ಸಮಾಜಕ್ಕೆ ಸೇರಿದವರು. ಸಿನೆಮಾ ತಯಾರಿಕೆಯ ತರಬೇತಿಗಾಗಿ 15 ವರ್ಷಗಳ ಕಾಲ ಅಮೆರಿಕೆಯಲ್ಲಿದ್ದು ಊರಿಗೆ ಮರಳಿದ ದೌವೇರಿ ಮತೀಯ ದ್ವೇಷದಿಂದ ಹೊರಬರಲೆಂದೇ ಲೆಬನಾನ್ ಕ್ರೈಸ್ತ ಯುವತಿ ತೌಮಾಳನ್ನು ಮದುವೆಯಾದರು. ಅವರ ಜೀವನದಲ್ಲಿ ನಡೆದ ಒಂದು ಘಟನೆ, "ಇನ್ಸಲ್ಟ್" ಚಿತ್ರಕ್ಕೆ ಆಧಾರ,

ದೌವೇರಿ ಒಮ್ಮೆ ತನ್ನ ಮನೆಯ ಬಾಲ್ಕನಿಯಲ್ಲಿನ ಗಿಡಗಳಿಗೆ ನೀರುಣಿಸುತ್ತಿದ್ದಾಗ ನೀರು ರಸ್ತೆಯಲ್ಲಿದ್ದ ವ್ಯಕ್ತಿಯ ಮೇಲೆ ಬೀಳುತ್ತದೆ. ವ್ಯಕ್ತಿ ದೌವೇರಿಯನ್ನು ನಿಂದಿಸುತ್ತಾನೆ. ಅವನ ನಿಂದನೆಯ ಮೂಲಕ ವ್ಯಕ್ತವಾಗುವ ಧ್ವನಿಯಿಂದ ಅವನೊಬ್ಬ ಪ್ಯಾಲೆಸ್ತೀನ್ ಎಂದು ಗೊತ್ತಾಗುತ್ತದೆ. ಕೆಟ್ಟಬಾಯಿಯ ದೌವೇರಿ ಅವನಿಗೆ ಆದಷ್ಟೂ ಹೆಚ್ಚು ಅವಮಾನವಾಗಲೆಂದೇ ಒಬ್ಬ ಪ್ಯಾಲೆಸ್ತೀನನು ಕಿವಿಯಿಂದ ಕೇಳಬಾರದಂಥ, ಅಚ್ಚಿಸಲು ಬಾರದಂಥ ಅವಾಚ್ಯ ಶಬ್ದಗಳಿಂದ ನಿಂದಿಸುತ್ತಾರೆ. ಹಿಂದೆಯೇ ಅವನ ಕ್ಷಮೆಯಾಚಿಸುತ್ತಾರೆ. ತೀವ್ರವಾಗಿ ಘಾಸಿಗೊಂಡಿದ್ದ ಆ ವ್ಯಕ್ತಿ ತಲೆಯೆತ್ತಿ ಸಹ ನೋಡದೆ ಹೊರಟುಹೋಗುತ್ತಾನೆ. ಅವೇ "ಇನ್ಸಲ್ಟ್" ಚಿತ್ರದಲ್ಲಿ ಟೋನಿ ಯಾಸಿರ್ ಗೆ ಹೇಳುವ ಮಾತುಗಳು.

ವ್ಯಕ್ತಿಗಳನ್ನು ಗುರಿಯಾಗಿರಿಸಿಕೊಂಡ ದ್ವೇಷ, ಅಸಹನೆ ಹಾಗೂ ನಿರ್ದಯತೆಗಳು ಸಾಮಾಜಿಕ ಸಂಬಂಧ ಜಾಲದಲ್ಲಿನ ಮಾನವೀಯತೆಯನ್ನೇ ಛಿದ್ರಮಾಡಿ ಜನಸಾಮಾನ್ಯರ ದೈನಂದಿನ ಕಷ್ಟಗಳನ್ನು ಹೆಚ್ಚುಮಾಡುತ್ತವೆಯೇ ಹೊರತು ಪರಿಹರಿಸುವುದಿಲ್ಲ. ಬದಲು ಮೂಲ ಹಿಂಸೆಯನ್ನು, ಜೀವವಿರೋಧೀ ಧೋರಣೆಗಳನ್ನು ಸಾಂಸ್ಥೀಕರಿಸಿಕೊಂಡ ಶೋಷಕರ ದಮನಕಾರೀ ರಾಜಕೀಯ ವ್ಯವಸ್ಥೆಯನ್ನು ನಮ್ಮಿಂದ ಮರೆಮಾಚಲು ಅವು ಸಹಾಯ ಮಾಡುತ್ತವೆ. ಇದರ ಲಾಭ ಪಡೆಯುವ ಕುಬ್ಜ ಮನಸ್ಸಿನ ರಾಜಕಾರಣಿಗಳ ದ್ವೇಷ ಭಾಷಣಗಳು, ಜನಾಂಗೀಯ ಭೇದ, ಮತೀಯ ದ್ವೇಷ, ರಾಜಕೀಯ ದೌರ್ಜನ್ಯಗಳು ಮತ್ತು ಇವೆಲ್ಲವುಗಳ ಫಲವಾಗಿ ಹುಟ್ಟುವ ಹಿಂಸೆಗಳಿಂದ ನರಳುವ ಜನಸಮುದಾಯಕ್ಕೆ 'ಇನ್ಸಲ್ಟ್' ತನ್ನ ವಿಶಾಲ ಮಾನವೀಯ ಧೋರಣೆಗಳಿಗಾಗಿ ಮುಖ್ಯವಾಗುತ್ತದೆ. ■

JANASHAKTHI KANNADA VARA PATRIKE December 25-31, 2017 Price: Rs. 10/- Date of Publication: 22 December 2017 RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

ಸಿಪಿಐ(ಎಂ) ಮೈಸೂರು ಜಿಲ್ಲಾ ಸಮ್ಮೇಳನ

ಹುಣಸೂರಿನಲ್ಲಿ ಜನತೆಗೆ ಧೈರ್ಯ ತುಂಬಿದ ಸಮ್ಮೇಳನ

ವಿ. ಬಸವರಾಜು ಕಲ್ಲುಣಿಕೆ





ಬಿಜೆಪಿ ಹಾಗೂ ಸಂಘ ಪರಿವಾರ ಹುಣಸೂರು ತಾಲ್ಲೂಕಿನಲ್ಲಿ ಕೋಮುಗಲಬೆ ಸೃಷ್ಠಿಮಾಡಿ ತಮ್ಮ ರಾಜಕೀಯ ಲಾಭ ಪಡೆಯಲು ಹೊರಟ್ಟಿತ್ತು. ಈ ಸಂದರ್ಭದಲ್ಲಿ ಸಿಪಿಐ(ಎಂ) ಜಿಲ್ಲಾ ಸಮ್ಮೇಳನ ಕೋಮುವಾದಿಗಳನ್ನು ಧಿಕ್ಕರಿಸುವಂತೆ ಕರೆನೀಡಿತು. ಹುಣಸೂರು ಉಪ ವಿಭಾಗವಾಗಿದ್ದು ಇದನ್ನು ಕೇಂದ್ರವಾಗಿ ಇಟ್ಟುಕೊಂಡು ಕೋಮುಗಲಭೆ ಸೃಷ್ಠಿಸಲು ಇಲ್ಲಿನ ಸಂಸದರು ಯತ್ನಿಸಿದ್ದರು. ಈ ಸಂದರ್ಭದಲ್ಲಿ ಸಿಪಿಐ(ಎಂ) ಪಕ್ಷದ 22ನೇ ಜಿಲ್ಲಾ ಸಮ್ಮೇಳನವು ಡಿ 16–17 ರಂದು ಹುಣಸೂರು ಪಟ್ಟಣದ ಅಂಬೇಂಡ್ಕರ್ ಭವನದಲ್ಲಿ ನಡೆಯಿತು. ಡಿ 16 ರಂದು ಬೆಳಿಗ್ಗೆ 11 ಗಂಟೆಗೆ ಕಾಂ ಜಗನ್ನಾಥ್ ರವರು ಧ್ವಜ ಹರಿಸುವ ಮೂಲಕ ಸಮ್ಮೇಳನಕ್ಕೆ ಚಾಲನೆ ನೀಡಲಾಯಿತು. ನಂತರ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು ಹಿರಿಯ ಕಾರ್ಮಿಕ ಮುಖಂಡರು ಆದ ಕಾಂ ವಿ.ಜಿ.ಕೆ. ನಾಯಕ್ ಅವರು ದೇಶದ ಸಾರ್ವಭೌಮತೆಯನ್ನು ಕಾಪಾಡಬೇಕಾದ ಪ್ರಧಾನ ಮಂತ್ರಿಗಳು ಕಾರ್ಪೊರೇಟ್ ಕಂಪನಿಗಳ ಪರವಾಗಿ ದೇಶ ಮುನ್ನಡೆಸುತ್ತಿದ್ದಾರೆ. ಇದರ ಪಲವಾಗಿಯೇ ಸಾರ್ವಜನಿಕ ರಂಗದ ಕೈಗಾರಿಕೆಗಳನ್ನು ಖಾಸಗಿಕರಣ ಮಾಡಲು ಹೊರಟಿರುವುದು ಎಂದು ಆಕ್ರೋಶ ವ್ಯಕ್ತಪಡಿಸಿದರು. ಬಲಿಷ್ಠ ಚಳುವಳಿಯೊಂದೇ ನಮ್ಮ ಸಮಸ್ಯೆಗೆ ಪರಿಹಾರ. ಆದ್ದರಿಂದ ಎಲ್ಲಾರು ಸೇರಿ ಸಂಘಟಿಸಬೇಕೆಂದರು. ಈ ಸಭೆ ಅಧ್ಯಕ್ಷತೆಯನ್ನು ಜಿಲ್ಲಾ ಕಾರ್ಯದರ್ಶಿ ಕೆ. ಬಸವರಾಜು ವಹಿಸಿದ್ದರು.



ಕೆ. ಬಸವರಾಜು

ನಂತರ ಸಮ್ಮೇಳನವನ್ನು ಮುನ್ನಡೆಸಲು ಕಾಂ ಜಿ. ಜಯರಾಮ್, ಕಾಂ ಸುನಂದ ಹೆಚ್.ಎಸ್., ಕಾಂ ವಿ. ಬಸವರಾಜು ಕಲ್ಲುಣಿಕೆ ಇವರುಗಳು ಇರುವ ಅಧ್ಯಕ್ಷ ಮಂಡಳಿಯನ್ನು ರಚಿಸಲಾಯಿತು. ಸಮ್ಮೇಳನದಲ್ಲಿ ಜಿಲ್ಲಾ ಕಾರ್ಯದರ್ಶಿ ಕಾಂ ಕೆ. ಬಸವರಾಜು ವರದಿ ಮಂಡಿಸಿದರು. ವರದಿ ಮೇಲೆ 10 ಜನ ಸಂಗಾತಿಗಳು ಚರ್ಚಿಸಿದರು. ನಂತರ ಕಾರ್ಯದರ್ಶಿಗಳು ಉತ್ತರ ನೀಡಿದರು. ನಂತರ ಜಿಲ್ಲೆ ಸಮಗ್ರ ಅಭಿವೃದ್ದಿಗೆ ಸಂಬಂದಪಟ್ಟಂತೆ ಮೈಸೂರಿನಿಂದ ಕೊಡಗಿಗೆ ರೈಲ್ವೆ ಸಂಪರ್ಕ, ಸ್ವಾಮಿನಾಥನ್ ಆಯೋಗ ಶೀಘ್ರವೇ ಜಾರಿ, ರೈತರ ಎಲ್ಲಾ ಸಾಲ ಮನ್ನಾ ಮಾಡಲು, ಸಾರ್ವಜನಿಕ ರಂಗದ ಕೈಗಾರಿಕ ರಂಗಗಳನ್ನು ಉಳಿಸಲು, ಜನವರಿ 30 ರಂದು ನಡೆಯುವ ಸೌರ್ಹದ ಕರ್ನಾಟಕ ಭಾಗವಾಗಿ ಬೀದರ್ ನಿಂದ ಚಾಮರಾಜ ನಗರದವರೆಗೆ ಮಾನವ ಸರಪಳಿ ಯಶಸ್ಸಿಗೆ, ವಸತಿ ನಿವೇಶನರಿಗೆ ಮನೆ ನಿವೇಶ ನೀಡಲು, ಹೆಚ್.ಡಿ. ಕೋಟೆಯ ತಾರಕ ಏತನೀರಾವರಿ ಅಚ್ಚುಕಟ್ಟು ರೈತರ ಹಿತ ಕಾಪಾಡಬೇಕೆಂದು ಒತ್ತಾಯಿಸಿ ಇತ್ಯಾದಿ ನಿರ್ಣಯಗಳನ್ನು ಕಾಂ ವಿಜಯಕುಮಾರ್ ಮಂಡಿಸಿದರು. ಕಾಂ ವಜ್ರಮುನಿ ಅನುಮೋದಿಸಿದರು. ಎಲ್ಲಾ ನಿರ್ಣಯಗಳನ್ನು ಸರ್ವಾನುಮತದಿಂದ ಅಂಗಿಕರಿಸಲಾಯಿತು.

ನಾಯಕತ್ವ, ಪ್ರತಿನಿಧಿಗಳ ಆಯ್ಕೆ:

ನಂತರ 8 ಜನರ ನೂತನ ಜಿಲ್ಲಾ ಸಮಿತಿಯನ್ನು ರಚಿಸಲಾಯಿತು. ಜಿಲ್ಲಾ ಸಮಿತಿ ಕಾಂ. ಕೆ. ಬಸವರಾಜು, ಕಾಂ. ಎಲ್. ಜಗನ್ನಾಥ್, ಕಾಂ. ಜಿ. ಜಯರಾಮ್, ಕಾಂ. ಎನ್. ವಿ. ಜಯಕುಮಾರ್, ಕಾಂ. ಹೆಚ್.ಎಸ್. ಸುನಂದ, ಕಾಂ ವಿ. ಬಸವರಾಜು, ಕಾಂ ಜಗದೀಶ್ ಸೂರ್ಯ, ಕಾಂ ಬೆಳ್ಳೂರು ವೆಂಕಟೇಶ್ ಜಿಲ್ಲಾ ಸಮಿತಿಗೆ ಆಯ್ಕೆಯಾದರು.

ಕಳೆದ ಎರಡು ಅವದಿಗಳಿಂದ ಕಾರ್ಯದರ್ಶಿಯಾಗಿ ಕೆಲಸ ಮಾಡಿದ ಜಿಲ್ಲಾ ಕಾರ್ಯದರ್ಶಿ ಕಾಂ. ಕೆ. ಬಸವರಾಜು ಮುಂದಿನ ಅವದಿಗೆ ಜಿಲ್ಲಾ ಕಾರ್ಯದರ್ಶಿಯಾಗಿ ಸರ್ವಾನುಮತದಿಂದ ಆಯ್ಕೆಯಾದರು.

ಜನವರಿಯಲ್ಲಿ ನಡೆಯಲಿರುವ ಪಕ್ಷದ ರಾಜ್ಯ ಸಮ್ಮೇಳನಕ್ಕೆ ಪ್ರತಿನಿದಿಗಳಾಗಿ ಕಾಂ. ಕೆ. ಬಸವರಾಜು. ಎನ್ ವಿಜಯ ಕುಮಾರ್. ಕಾಂ. ಜಗದೀಶ್ ಸೂರ್ಯ. ಮತ್ತು ವಿಕ್ಷಕರಾಗಿ ಕಾಂ. ಬಾಲಾಜಿರಾವ್ ಆಯ್ಕೆಯಾದರು.

ಆಕರ್ಷಕ ಮೆರವಣಿಗೆ:

ಎರಡನೇ ದಿನ ಡಿ. 17 ರಂದು ಪಟ್ಟಣದ ಕಲ್ಕುಣಿಕೆಯ ರಂಗನಾಥ ಬಡಾವಣೆಯಿಂದ ಪಕ್ಷದ ಕಣ್ಣೂರು ಜಿಲ್ಲೆಯ ಇರಟಿಯ ರೆಡ್ ವಾಲೆಂಟರ್ಸ್ ಬ್ಯಾಂಡ್ ಸೆಟ್ ತಂಡದದೊಂದಿಗೆ ಮೆರವಣಿಗೆಯನ್ನು ಆರಂಭಿಸಲಾಯಿತು. ಇದೇ ಪ್ರಥಮ ಬಾರಿಗೆ ಹುಣಸೂರು ಪಟ್ಟಣದಲ್ಲಿ ರೆಡ್ ವಾಲೆಂಟರ್ಸ್ ತಂಡದ ಮೆರವಣಿಗೆ ಇಡಿ ಜನರ ಗಮನ ಸೆಳೆಯಲು ಸಾಧ್ಯವಾಯಿತು. ಮೆರವಣಿಗೆ ಸಾಗುವಾಗ ರಸ್ತೆ ಇಕ್ಕೆಲಗಳನ್ನು ಕುತೂಹಲದಿಂದ ಮೆರವಣಿಗೆ ವೀಕ್ಷಿಸಿ ಖುಷಿ ಪಟ್ಟು ಸೈನಿಕರಂತೆ ಮೆರವಣಿಗೆ ಇತ್ತು ಎಂದು ಪ್ರಶಂಸೆಯ ಮಾತುಗಳನ್ನಾಡಿದರು. ಮೆರವಣಿಗೆಯಲ್ಲಿ ಭಾಗವಹಿಸಿದ ನಮ್ಮ ಸಂಗಾತಿಗಳಿಗೂ ಮೆರವಣಿಗೆಯಲ್ಲಿ ಸಾಗುವಾಗ ಒಂದು ರೀತಿಯ ರೋಮಂಚಾನಗೊಂಡು ಹೆಜ್ಜೆ ಹಾಕಿದರು. ಮೆರವಣಿಗೆಯಲ್ಲಿ ವಿಜೆಕೆ ನಾಯರ್ ಸುಮಾರು 2 ಕಿ ಮೀ ಹೆಜ್ಜೆ ಹಾಕಿದ್ದು ವಿಶೇಷವಾಗಿತ್ತು.

ಬಹಿರಂಗ ಸಭೆ:

ನಂತರ ನಗರ ಸಭೆ ಮೈದಾನದಲ್ಲಿ ಬಹಿರಂಗ ಸಭೆ ನಡೆಸಲಾಗಿತ್ತು. ಸಭೆಯನ್ನು ಉದ್ದೇಶಿಸಿ, ವಿ.ಜಿ.ಕೆ. ಮಾತನಾಡಿ ಸಂಘ ಪರಿವಾರ ಹಿಂದೂಗಳ ಬಗ್ಗೆ ಗುತ್ತಿಗೆ ಪಡಿದವರಂತೆ ವರ್ತಿಸುತ್ತಾರೆ. ಆದರೆ ನಮ್ಮ ದೇಶದಲ್ಲಿ ದಲಿತರು ರೈತರು ಬಡವಾರು ಕಾರ್ಮಿಕರು ಸಂಕಷ್ಟ ಪಡುತ್ತಿದ್ದಾರೆ. ಇವರ ಯಾವುದೇ ಸಮಸ್ಯೆ ಬಗ್ಗೆ ಚಕಾರ ಎತ್ತದ ಇವರು ದೇವರು ಧರ್ಮದ ಹೆಸರಿನಲ್ಲಿ ಜನರನ್ನು ಎತ್ತಿಕಟ್ಟಿ ಕೋಮುಗಲಬೆ ಹುಟ್ಟುಹಾಕಿ ರಾಜಕೀಯ ಲಾಭ ಗಳಿಸಲು ಹುನ್ನಾರ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಸಿ.ಪಿ.ಐ(ಎಂ.) ಮಂಡ್ಯ ಜಿಲ್ಲಾ ಕಾರ್ಯದರ್ಶಿ ಕಾಂ. ಜಿ. ರಾಮಕೃಷ್ಣ ಮಾತನಾಡಿ ಕೇಂದ್ರ ಬಿ.ಜೆ.ಪಿ ಸರ್ಕಾರ ಆಧಿಕಾರಕ್ಕೆ ಬಂದು ಮೂರುವರೆ ವರ್ಷ ಕಳೆಯುತ್ತ ಬಂದಿದೆ. ಆದರು ಕೂಡ ಅವರು ನೀಡಿದ ಭರವಸೆಗಳನ್ನು ಈಡೇರಿಸಿಲ್ಲ. ಇದನ್ನು ಮರೆಮಾಚುವ ಸಲುವಾಗಿ ನಾಡಿನ ತುಂಬೆಲ್ಲ ಹೊಸ ಹೊಸ ದೇವರುಗಳನ್ನು ಸೃಷ್ಠಿಮಾಡಿ ಭೈರವ ಮಾಲೆ, ಹನುಮ ಮಾಲೆ ಅಂತ ಹೇಳಿ ಜನರನ್ನು ಧರ್ಮದ ಆಧಾರದಲ್ಲಿ ವಿಭಜಿಸಿ ಕೋಮುಗಲಬೆ ಹುಟ್ಟುಹಾಕುತ್ತಿದ್ದಾರೆ. ಇದರ ಪರಿಣಾಮವೇ ಹುಣಸೂರಿನಲ್ಲಿ ನಡೆದ ಇಂತಹ ಒಂದು ಪ್ರಯತ್ನವಾಗಿದೆ ಎಂದು ಹೇಳಿದರು.

ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಜಿಲ್ಲಾ ಕಾರ್ಯದರ್ಶಿ ಕೆ. ಬಸವರಾಜು ಮಾತನಾಡಿ ಜಿಲ್ಲೆಯ ಸಮಗ್ರ ಅಭಿವೃದಿಗೆ ಕೈಗೊಂಡಿರುವ ನಿರ್ಣಯಗಳನ್ನು ಜಾರಿಮಾಡಬೇಕಾದ ಜವಬ್ದಾರಿ ನಮ್ಮ ಮೇಲಿದೆ. ಇದೇ ಸಂಧರ್ಭದಲ್ಲಿ ಪಕ್ಷವನ್ನು ಬಲಪಡಿಸಿ ಜನಪರ ಹೋರಾಟ ಮಾಡಬೇಕಾಗಿದೆ ಎಂದರು ವಿ. ಬಸವರಾಜು. ಸ್ವಾಗತಿಸಿ ಜಗಧೀಶ್ ಸೂರ್ಯ ನಿರೂಪಿಸಿದರು. ಬೆಳ್ಳೂರು ವೆಂಕಟೇಶ್ ವಂದಿಸಿದರು. ಬಹಿರಂಗ ಸಭೆಯಲ್ಲಿ ಕೇರಳದ ಕಣ್ಣೂರು ಜಿಲ್ಲೆಯ ಜಿಲ್ಲಾ ಸಮಿತಿ ಸದಸ್ಯರಾದ ಶಶಿಂದ್ರನ್ ಮತ್ತು ಹೆಚ್. ಎಸ್. ಸುನಂದ, ವಿ. ಬಸವರಾಜು ಕಲ್ಲುಣಿಕೆ, ಜಗದೀಶ್ ಸೂರ್ಯ ಶಶಿಕುಮಾರ್ ಬೆಳ್ಳೂರು ವೆಂಕಟೇಶ್ ಇದ್ದರು.

"ದಾನಮ್ಮಳ ಸಾವಿಗೆ ನ್ಯಾಯ ಸಿಗಲಿ" – ರಾಜ್ಯದಾದ್ಯಂತ ಕೂಗು



ಬೆಂಗಳೂರು

ವಿಜಯಪುರದ ದಲಿತ ಬಾಲಕಿ ದಾನಮ್ಮಳ ಮೇಲಿನ ಸಾಮೂಹಿಕ ಅತ್ಯಾಚಾರ ಹಾಗೂ ಕೊಲೆಯನ್ನು ಖಂಡಿಸಿ ಎಸ್.ಎಫ್.ಐ., ಡಿ.ವೈ.ಎಫ್.ಐ., ಜನವಾದಿ ಮಹಿಳಾ ಸಂಘಟನೆ, ದಲಿತ ಹಕ್ಕುಗಳ ಸಮಿತಿಯ ಘಟಕಗಳು ಪ್ರತ್ಯೇಕವಾಗಿ ಅಥವಾ ಜಂಟಿಯಾಗಿ ರಾಜ್ಯದಾದ್ಯಂತ ಪ್ರತಿಭಟನೆ ನಡೆಸಿದ ವರದಿಗಳು ಬಂದಿವೆ. ಇಂತಹ ವರದಿಗಳು ಹೊಸಪೇಟೆ, ಬೆಂಗಳೂರು, ಕಲಬುರಗಿ, ಹಾಸನ, ಸಿಂಧಗಿ, ಗದಗ ಮುಂತಾದ ಕೇಂದ್ರಗಳಿಂದ ಬಂದಿವೆ.

ರಾಜ್ಯಾದ್ಯಂತ ಇತ್ತಿಚೆಗೆ ವಿದ್ಯಾರ್ಥಿನಿಯರ ಮೇಲೆ, ಮಹಿಳೆಯರ ಮೇಲೆ ಅತ್ಯಾಚಾರ, ಲೈಂಗಿಕ ಕಿರುಕುಳದಂತಹ ಪ್ರಕರಣಗಳು ದಿನೇ ದಿನೇ ಹೆಚ್ಚುತ್ತಿವೆ. ದೇಶದಲ್ಲಿ ಪ್ರತಿ 15 ನಿಮಿಷಕ್ಕೆ ಒಂದರಂತೆ ವಿದ್ಯಾರ್ಥಿನಿಯರ ಮೇಲೆ, ಮಹಿಳೆಯರ ಮೇಲೆ ಅತ್ಯಾಚಾರ ಪ್ರಕರಣಗಳನ್ನು ನಡೆಯುತ್ತಿವೆ. ವಿಜಯಪುರದ ದಲಿತ ವಿದ್ಯಾರ್ಥಿನಿ, ಶಾಲೆಯಿಂದ ಮನೆಗೆ ತೆರಳುತ್ತಿದ್ದ ಸಂದರ್ಭದಲ್ಲಿ 5 ಜನ ಯುವಕರ ಗುಂಪು ವಿದ್ಯಾರ್ಥಿನಿ ದಾನಮ್ಮಳನ್ನು ಅಪಹರಿಸಿ, ಆಕೆಯ ಮೇಲೆ ಸಾಮೂಹಿಕ ಅತ್ಯಾಚಾರ ನಡೆಸಿ, ಕೊಲೆ ಮಾಡಿರುವುದು ಮನುಕುಲವೇ ತಲೆ ತಗ್ಗಿಸುವಂತಹ ಕೃತ್ಯ. ಕೆಲ ವರ್ಷಗಳ ಹಿಂದೆ ದೆಹಲಿಯಲ್ಲಿ ನಿರ್ಭಯಾ ಎಂಬ ಕಾಲೇಜು ವಿದ್ಯಾರ್ಥಿನಿಯ ಮೇಲೆ ನಡೆದ ಸಾಮೂಹಿಕ ಅತ್ಯಾಚಾರ ದೇಶವನ್ನೆ ತಲ್ಲಣಗೊಳಿಸಿತ್ತು, ತದನಂತರದಲ್ಲಿ ದೇಶದೆಲ್ಲಡೆ ಅಂತಹ ಪ್ರಕರಣಗಳು ಮರುಕಳಿಸುತ್ತಲೇ ಇವೆ.

ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ವಿದ್ಯಾರ್ಥಿನಿಯರ, ಮಹಿಳೆಯರ ರಕ್ಷಣೆಗೆ ಕ್ರಮ ಕೈಗೊಳಬೇಕು. ಕಳೆದ ಕೆಲ ದಿನಗಳ ಹಿಂದೆ ಅಕ್ಕಿಆಲೂರಿನ ಶಿಕ್ಷಕನೋರ್ವ ವಿದ್ಯಾರ್ಥಿನಿಯ ಮೇಲೆ ಅತ್ಯಾಚಾರಕ್ಕೆ ಪ್ರಯತ್ನ ಪಟ್ಟದ್ದು, ರಾಣೆಬೆನ್ನೂರಿನ ಬಸ್ ನಿಲ್ದಾಣದಲ್ಲಿ ನಿಂತಿದ್ದ ಬಸ್‌ನಲ್ಲಿಯೆ ಬಸ್ ಚಾಲಕ ಹಾಗೂ ನಿರ್ವಾಹಕ ಸೇರಿ ವಿದ್ಯಾರ್ಥಿನಿಯೋರ್ವಳ ಮೇಲೆ ಅತ್ಯಾಚಾರ ಮಾಡಿದಂತಹ ಹೀನ ಕೃತ್ಯಗಳು ನಡೆದಿವೆ. ಪೋಲಿಸ್ ಬೀಟ್, ಸಿಸಿ ಕ್ಯಾಮೆರಾ ಅಳವಡಿಸಬೇಕು ಎಂಬ ಆದೇಶವಿದ್ದರೂ ಕೂಡಾ ಅಧಿಕಾರಿಗಳು ಹಾಗೂ ಸರ್ಕಾರದ ಬೇಜಬ್ದಾರಿಯಿಂದ ಇಂತಹ ಪ್ರಕರಣಗಳು ಮತ್ತೆ ನಡೆಯುತ್ತಿವೆ, ಎಂದು ಈ ಪ್ರತಿಭಟನೆಯಲ್ಲಿ ಮಾತನಾಡಿದ ನಾಯಕರು ಹೇಳಿದರು.

ವಿಜಯಪುರದ ಬಾಲಕಿಯ ಮೇಲಿನ ಅತ್ಯಾಚಾರ ನಡೆಸಿರುವ ಕಾಮುಕ ಬಿಜೆಪಿಯ ಕಾರ್ಯಕರ್ತ ಎಂದು ಹೇಳಲಾದ ದೀಪಕ್ ಹಾಗೂ ಆತನ ಸಹಚರರಿಗೆ ಕಠಿಣ ಶಿಕ್ಷೆಗೆ ಗುರಿಪಡಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು. ರಾಜ್ಯದಲ್ಲಿ ಮತ್ತೆ ಇಂತಹ ಅವಮಾನವೀಯ ಪ್ರಕರಣಗಳು ಮರುಕಳಿಸದಂತೆ ಎಚ್ಚೆತ್ತುಕೊಳ್ಳಬೇಕು. ರಾಜ್ಯ ಸರಕಾರ ಮೃತರ ಕುಟುಂಬಕ್ಕೆ 8 ಲಕ್ಷ ಪರಿಹಾರ ಘೊಷಿಸಿರುವುದನ್ನು ಸ್ವಾಗತಿಸುತ್ತಲೇ, ಆದರೆ ಕೇವಲ ಪರಿಹಾರದಿಂದ ಮಾತ್ರವೇ ಬಾಲಕಿಯ ಸಾವಿಗೆ ನ್ಯಾಯ ದೊರೆಯುವುದಿಲ್ಲ. ಹೀನ ಕೃತ್ಯ ನಡೆಸಿದ ಕಾಮಪಿಶಾಚಿಗಳನ್ನು ಶೀಘ್ರವೇ ಬಂಧಿಸಿ ಅವರಿಗೆ ಉಗ್ರ ಶಿಕ್ಷೆ ನೀಡಿದಾಗ ಮತ್ತು ಇಂತಹ ಘೋರ ಘಟನೆಗಳು ಮರುಕಳಿಸದಂತೆ ಕ್ರಮ ಕೈಗೊಂಡಾಗ ಮಾತ್ರವೇ ಸೂಕ್ತ ನ್ಯಾಯ ಸಿಕ್ಕಿದಂತಾಗುತ್ತದೆಂದು ಹಲವು ನಾಯಕರು ಹೇಳಿದರು.



ಹಾಸನ



ಹೊಸಪೇಟೆ

JANASHAKTHIKANNADAVARAPATRIKE: Printed, Published by **G.V.SRIRAMAREDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**